ಮೈಸೂರು ಮಿತ್ರ


ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಜುಲೈ 1 ಸೋಮವಾರ 2024
ಸಂಪುಟ: 45 | ಸಂಚಿಕೆ: 76 | ಪುಟಗಳು: 10
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಬ್ರಹ್ಮಾಂಡ ಭ್ರಷ್ಟಾಚಾರದಲ್ಲಿ ಸಿಎಂ ಪುತ್ರ

ಡಾ.ಯತೀಂದ್ರ ಗ್ಯಾಂಗ್ ಭಾಗಿ ಆರೋಪ

ವಿಧಾನಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಸುದ್ದಿಗೋಷ್ಠಿ

- ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ರಿಯಲ್ ಎಸ್ಟೇಟ್ ಗಿರಾಕಿ
- ಹಗರಣವನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕು
- 5 ಸಾವಿರ ಕೋಟಿ ರೂ. ಭ್ರಷ್ಟಾಚಾರ ನಡೆದಿದೆ
- ನಾಲ್ವಡಿಯವರು ಸ್ಥಾಪಿಸಿದ ಸಂಸ್ಥೆ ರಾಜಕಾರಣಿಗಳಿಂದ ಕುಲಗೆಟ್ಟಿದೆ



ಮೈಸೂರು, ಜೂ.30(ಬಿಎಲ್‌ಯು)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಶೇ.50:50 ಅನುಪಾತದ ನಿವೇಶನ ಹಂಚಿಕೆ ಬ್ರಹ್ಮಾಂಡ ಭ್ರಷ್ಟಾಚಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪುತ್ರ, ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಗ್ಯಾಂಗ್ ನೇರವಾಗಿ ಭಾಗಿಯಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಗಂಭೀರ ಆರೋಪ ಮಾಡಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಡಾ. ಯತೀಂದ್ರ ಗ್ಯಾಂಗ್‌ನಲ್ಲಿ ಮುಡಾ ಹಾಲಿ ಅಧ್ಯಕ್ಷ ಕೆ.ಮರೀಗೌಡ, ಹಾಲಿ ಆಯುಕ್ತ ಜಿ.ಟಿ.ದಿನೇಶ್ ಕುಮಾರ್, ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಹಿಂದಿನ ಆಯುಕ್ತ ನಟೇಶ್, ಶಾಸಕ ಕೆ.ಹರೀಶ್‌ಗೌಡ, ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಕಾಂಗ್ರೆಸ್ ಮುಖಂಡ ರಾಕೇಶ್ ಪಾಪಣ್ಣ, ಮರೀಗೌಡರ ಶಿಷ್ಯ ಮೋಹನ್, ಬ್ರೋಕರ್‌ಗಳಾದ ಉತ್ತಮ್ ಗೌಡ, ತ್ರಿಶೂಲ್‌ಗೌಡ ಮುಂತಾದವರಿದ್ದು, ಈ ಗ್ಯಾಂಗ್ ಮುಡಾ ನಿವೇಶನಗಳನ್ನು ನಿಯಮ ಬಾಹಿರವಾಗಿ ಮನಬಂದಂತೆ ಹಂಚಿಕೆ ಮಾಡುವ ಮೂಲಕ ಮುಡಾವನ್ನು ಅಧೋಗತಿಗೆ ತಳ್ಳಿದ್ದಾರೆ ಎಂದು ಕಿಡಿಕಾರಿದರು.

ಮುಡಾ ಬಗ್ಗೆ ಬಹಳ ಅಭಿಮಾನ ಇಟ್ಟುಕೊಂಡಿದ್ದ ಸಿದ್ದರಾಮಯ್ಯ, ತನ್ನ ಅಪ್ಪಟ ಶಿಷ್ಯನನ್ನು ನಗರಾಭಿವೃದ್ಧಿ ಸಚಿವನನ್ನಾಗಿ ಮಾಡಿದ ಫಲಶ್ರುತಿ ಎಂದರೆ ಆತ (ಭೈರತಿ ಸುರೇಶ್) ಮುಡಾವನ್ನು ಸಂಪೂರ್ಣವಾಗಿ ಕುಲಗೆಡಿಸಿದ್ದಾನೆ. ಮುಡಾ ಆಯುಕ್ತ ದಿನೇಶ್ ಕುಮಾರ್‌ಗೆ ವರ್ಗಾವಣೆ ಆಗಿದ್ದರೂ, ಮತ್ತೇ ಇಲ್ಲಿಗೆ ಹಾಕಿಸಿಕೊಂಡು ಭ್ರಷ್ಟಾಚಾರವೆಸಗುತ್ತಿದ್ದಾನೆ ಎಂದರು. ಮುಡಾ ಉಳಿಯುವುದು ಕೆಲವು ಶಾಸಕರಿಗೆ ಬೇಕಾಗಿಲ್ಲ. ● 6ನೇ ಪುಟಕ್ಕೆ






ಭೈರತಿ ಸುರೇಶ್



ದಿನೇಶ್



ಡಾ. ಯತೀಂದ್ರ

ಮುಡಾದಿಂದ ಶೇ.50:50 ಅನುಪಾತದಡಿ ಮತ್ತು ಬದಲಿ ನಿವೇಶನವನ್ನು ಅಕ್ರಮವಾಗಿ ಪಡೆದಿರುವವರಿಗೆ ಸಾಲ ನೀಡುವ ಬ್ಯಾಂಕ್‌ಗಳು ಸಂಕಷ್ಟಕ್ಕೆ ಸಿಲುಕುವ ಸಾಧ್ಯತೆ ಇರುವುದರಿಂದ ನಾನು ಇಂತಹ ನಿವೇಶನಗಳಿಗೆ ಸಾಲ ನೀಡುವ ಮುನ್ನ ಸಂಪೂರ್ಣವಾಗಿ ಪರಿಶೀಲಿಸಿ ನೀಡಬೇಕು ಎಂದು ಎಲ್ಲಾ ಬ್ಯಾಂಕ್ ಮುಖ್ಯಸ್ಥರಿಗೂ ಪತ್ರ ಬರೆಯಲಿದ್ದೇನೆ. ಮುಡಾದಿಂದ ಅಕ್ರಮವಾಗಿ ಪಡೆದಿರುವ ನಿವೇಶನಗಳನ್ನು ಕಾನೂನು ಪ್ರಕಾರ ರದ್ದುಪಡಿಸಲಾಗುತ್ತದೆ. ಅಂತಹ ಸಂದರ್ಭದಲ್ಲಿ ಈ ನಿವೇಶನಗಳಿಗೆ ಸಾಲ ಕೊಟ್ಟಿರುವ ಬ್ಯಾಂಕ್‌ಗಳು ಸಂಕಷ್ಟಕ್ಕೆ ಸಿಲುಕುತ್ತವೆ. ಬ್ಯಾಂಕ್‌ಗಳಲ್ಲಿರುವ ಸಾರ್ವಜನಿಕರ ಹಣವನ್ನು ರಕ್ಷಿಸುವ ಉದ್ದೇಶದಿಂದ ಬ್ಯಾಂಕ್‌ಗಳಿಗೆ ಪತ್ರ ಬರೆಯುತ್ತಿದ್ದೇನೆ.



– ರಘು ಕೌಟಿಲ್ಯ, ಬಿಜೆಪಿ ಮುಖಂಡ

ಸಿಎಂ ಪತ್ನಿ ಜಮೀನು ಡಿ ನೋಟಿಫೈ ಆಗಿದ್ದರೂ ಮುಡಾದಿಂದ ಪರಿಹಾರ

ಮೈಸೂರು, ಜೂ.30–ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರಿಗೆ ಸೇರಿದ ಜಮೀನು ಡಿ ನೋಟಿಫೈ ಆಗಿದ್ದರೂ ಈ ಜಮೀನಿಗೆ ಕಾನೂನು ಬಾಹಿರವಾಗಿ ಮುಡಾದಿಂದ ಪರಿಹಾರ ನೀಡಲಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಆರೋಪಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಹಗರಣದಲ್ಲಿ ಭಾಗಿಯಾಗಿರಬಹುದು ಎಂಬ ಸಂಶಯ ವ್ಯಕ್ತಪಡಿಸಿದ ಅವರು, 1990–92ರಲ್ಲಿ ಕೆಸರೆ ಸರ್ವೆ ನಂ.464ರಲ್ಲಿ 3.16 ಎಕರೆ ಜಮೀನನ್ನು ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರ ಸಹೋದರ ಮಲ್ಲಣ್ಣ ಎಂಬುವರು ಖರೀದಿಸಿದ್ದರು. ನಂತರ ಅವರು ತಮ್ಮ ಸಹೋದರಿ ಪಾರ್ವತಿ ಅವರಿಗೆ ಜಮೀನನ್ನು ದಾನ ಮಾಡಿದ್ದರು. ಸಿದ್ದರಾಮಯ್ಯ ಪತ್ನಿ ಸುಪರ್ದಿಯಲ್ಲಿದ್ದ ಈ ಜಮೀನನ್ನು 1998ರಲ್ಲಿ ಡಿ ನೋಟಿಫಿಕೇಷನ್ ಮಾಡಲಾಯಿತು. ಹಾಗಿದ್ದರೂ ಸದರಿ ಜಮೀನಿಗೆ ಮುಡಾದಿಂದ ಪರಿಹಾರ ನೀಡಲಾಗಿದೆ. ಆ ಸಂದರ್ಭದಲ್ಲಿ ಸಿದ್ದರಾಮಯ್ಯ ಉಪ ಮುಖ್ಯಮಂತ್ರಿಯಾಗಿದ್ದರು ಎಂಬುದನ್ನು ಉಲ್ಲೇಖಿಸಿದ ವಿಶ್ವನಾಥ್, ಈಗ ನಡೆದಿರುವ ಭ್ರಷ್ಟಾಚಾರವನ್ನು ಸಿದ್ದರಾಮಯ್ಯನವರೇ ಮಾಡಿದ್ದಾರೆ ಎಂದು ನಾನು ಆರೋಪಿಸುವುದಿಲ್ಲ ಆದರೆ ಅವರ ಹೆಸರು ಹೇಳಿಕೊಂಡು ಭ್ರಷ್ಟಾಚಾರ ನಡೆಸಲಾಗುತ್ತಿದೆ ಎಂದರು.

‘ಮೈಸೂರು ಮಿತ್ರ’, ‘ಸ್ಟಾರ್ ಆಫ್ ಮೈಸೂರ್’ ಮುಲಾಜಿಲ್ಲದೆ ವರದಿ ಮಾಡಿದೆ

ಮೈಸೂರು, ಜೂ.30– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಬ್ರಹ್ಮಾಂಡ ಭ್ರಷ್ಟಾಚಾರದ ಬಗ್ಗೆ ‘ಮೈಸೂರು ಮಿತ್ರ’ ಮತ್ತು ‘ಸ್ಟಾರ್ ಆಫ್ ಮೈಸೂರ್’ ಪತ್ರಿಕೆಗಳು ಮುಲಾಜಿಲ್ಲದೆ ವರದಿ ಮಾಡಿವೆ ಎಂದು ವಿಧಾನ ಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಪ್ರಶಂಸೆ ವ್ಯಕ್ತಪಡಿಸಿದರು. ಈ ಹಗರಣದ ಬಗ್ಗೆ ಕೆ.ಆರ್.ಕ್ಷೇತ್ರದ ಶಾಸಕರೂ ಆದ ಮುಡಾ ಸದಸ್ಯ ಟಿ.ಎಸ್.ಶ್ರೀವತ್ಸ ಮೊದಲಿಗೆ ಧನಿ ಎತ್ತಿದರು. ನಂತರ ‘ಮಿತ್ರ’ ಮತ್ತು ‘ಸ್ಟಾರ್’ ಈ ಹಗರಣದ ಬೆನ್ನತ್ತಿ ವಿಸ್ತೃತ ವಾಗಿ ವರದಿಗಳನ್ನು ಪ್ರಕಟಿಸಿತ್ತು. ಇಲ್ಲದಿದ್ದರೆ ಸಾವಿರಾರು ಕೋಟಿಯ ದೊಡ್ಡ ಹಗರಣ ಬಯಲಿಗೆ ಬಾರದೇ ಮುಚ್ಚಿ ಹೋಗುತ್ತಿತ್ತು ಎಂದು ಅವರು ಹೇಳಿದರು.

ಸಿದ್ದರಾಮಯ್ಯ ಕೃಪಾಕಟಾಕ್ಷದಿಂದಲೇ ಮುಡಾದಲ್ಲಿ ಭ್ರಷ್ಟಾಚಾರ: ಸಿ.ಟಿ.ರವಿ

ಮೈಸೂರು, ಜೂ.30(ಎಂಕೆ)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕೃಪಾಕಟಾಕ್ಷದಿಂದಲೇ ಮುಡಾದಲ್ಲಿ ಭ್ರಷ್ಟಾಚಾರ ನಡೆದಿದ್ದು, ಹಗರಣದ ಬಗ್ಗೆ ಸಿಬಿಐ ತನಿಖೆಯಾಗಬೇಕು ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಆಗ್ರಹಿಸಿದರು.



ನಗರದ ಬಿಜೆಪಿ ಕಚೇರಿಯಲ್ಲಿ ಭಾನುವಾರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಮುಖ್ಯ ಮಂತ್ರಿಯವರ ತವರು ಜಿಲ್ಲೆಯಲ್ಲಿನ ಮುಡಾದಲ್ಲಿ 2,500 ಕೋಟಿ ರೂ.ಗೂ ಹೆಚ್ಚು ಅವ್ಯವಹಾರವಾಗಿರುವುದು ಬೆಳಕಿಗೆ ಬಂದಿದೆ. ಕೋಟ್ಯಾಂತರ ರೂ. ಮೌಲ್ಯದ ನಿವೇಶನಗಳನ್ನು ಕಾನೂನು ಬಾಹಿರವಾಗಿ ಪರಭಾರೆ ಮಾಡಲಾಗಿದೆ. ಇದನ್ನು ಕೇಳಿ ದಿಗ್ಭ್ರಮೆಯಾಯಿತು ಎಂದರು. ಬಡವರು, ದಲಿತರಿಗೆ ಕೊಡಲಿಕ್ಕೆ ಇವರಿಗೆ ನಿವೇಶನಗಳಿಲ್ಲ, ಕಳ್ಳರು–ಕಾಕರಿಗೆ ಬೇನಾಮಿಯಾಗಿ ಕೊಡಲಿಕ್ಕೆ ಎಲ್ಲಾ ಅಧಿಕಾರವನ್ನು ದುರುಪಯೋಗ ಪಡಿಸಿಕೊಳ್ಳುತ್ತಾರೆ. ಇದರ ಬಗ್ಗೆ ಸಮಗ್ರ ತನಿಖೆಯಾಗಬೇಕು. ತಪ್ಪಿತಸ್ಥರ ತಲೆದಂಡವಾಗಬೇಕು. ಮುಡಾದಲ್ಲಿ ಬೇಲಿಯೇ ಎದ್ದು ಹೊಲ ಮೇಯ್ದಂತಾಗಿದೆ. ಹಗರಣ ಮೈಸೂರಲ್ಲಿ ಮಾತ್ರವೋ, ರಾಜ್ಯದುದ್ದಲಕ್ಕೂ ● 6ನೇ ಪುಟಕ್ಕೆ

ಮಂಜೇಗೌಡ ಅಟೆಂಡರ್ ತರಹ ಅಲೆಯುತ್ತಾನೆ... ಮರೀಗೌಡರಿಗೆ ಪ್ರಸಾದ ಹೋಗುವುದರಿಂದ ಧ್ವನಿ ಎತ್ತುತ್ತಿಲ್ಲ...

ಮೈಸೂರು, ಜೂ.30–ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಮುಡಾದಲ್ಲಿ ಅಟೆಂಡರ್‌ನಂತೆ ಅಲೆದಾಡುತ್ತಿರುತ್ತಾರೆ... ಮುಡಾ ಅಧ್ಯಕ್ಷ ಕೆ.ಮರೀಗೌಡರಿಗೆ ಪ್ರಸಾದ ಹೋಗುವುದರಿಂದ ಅವರು ಧ್ವನಿಯೇ ಎತ್ತುತ್ತಿಲ್ಲ... ಇದು ವಿಧಾನ ಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಅವರ ಕುಹುಕದ ಮಾತುಗಳು.

ಡಾ. ಯತೀಂದ್ರ ಗ್ಯಾಂಗ್‌ನಲ್ಲಿರುವ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡರ ಬಗ್ಗೆ ಹೇಳುವುದೇ ಬೇಡ. ಅವರು ಅಟೆಂಡರ್‌ನಂತೆ ಕಂಕುಳಲ್ಲಿ ಫೈಲ್ ● 6ನೇ ಪುಟಕ್ಕೆ



ಮಂಜೇಗೌಡ



ಮರೀಗೌಡ

ಮೈಸೂರಲ್ಲಿ ರಾಜ್ಯ ಮಟ್ಟದ ಯೋಗ ಸ್ಪರ್ಧೆ

- ಬಲಿಷ್ಠ ಭಾರತಕ್ಕಾಗಿ ಪ್ರತಿಯೊಬ್ಬರೂ ಯೋಗ ಮಾಡಬೇಕು
- ಯೋಗ ಫೌಂಡೇಷನ್ ಆಫ್ ಮೈಸೂರ್ ಅಧ್ಯಕ್ಷ ಶ್ರೀಹರಿ ಅಭಿಮತ



ಮೈಸೂರು ವಿಶ್ವವಿದ್ಯಾನಿಲಯದ ಯೋಗ ಭವನದಲ್ಲಿ ನಡೆದ ರಾಜ್ಯ ಮಟ್ಟದ ಯೋಗಾಸನ ಸ್ಪರ್ಧೆಯಲ್ಲಿ ಪಾಲ್ಗೊಂಡಿರುವ ಯೋಗ ಪಟುಗಳು.

ಮೈಸೂರು, ಜೂ.30(ಎಂಟಿವೈ)– ಮೈಸೂರು ವಿಶ್ವವಿದ್ಯಾಲಯ ಯೋಗ ಭವನದಲ್ಲಿ ಭಾನುವಾರ ನಡೆದ ರಾಜ್ಯ ಮಟ್ಟದ ಯೋಗ ಸ್ಪರ್ಧೆಯಲ್ಲಿ ವಿವಿಧೆಡೆಯಿಂದ ಆಗಮಿಸಿದ್ದ 500ಕ್ಕೂ ಹೆಚ್ಚು ಯೋಗಪಟುಗಳು ಯೋಗಾಸನ ಪ್ರದರ್ಶಿಸಿ ಗಮನ ಸೆಳೆದರು.

ಯೋಗ ಸ್ಪೋರ್ಟ್ಸ್ ಫೌಂಡೇಶನ್ ವತಿಯಿಂದ 10ನೇ ಅಂತಾರಾಷ್ಟ್ರೀಯ ಯೋಗ ದಿನೋತ್ಸವ ಮತ್ತು ಯೋಗ ಗುರು ಡಾ.ಗಣೇಶ್ ಕುಮಾರ್ ಅವರ ಜನ್ಮ ಷಷ್ಠ್ಯಬ್ದಿಯ ಅಂಗವಾಗಿ ಆಯೋಜಿಸಿದ್ದ ರಾಜ್ಯಮಟ್ಟದ ಯೋಗ ಸ್ಪರ್ಧೆಯಲ್ಲಿ ಮೈಸೂರು, ಮಂಡ್ಯ, ಚಾಮರಾಜನಗರ, ಗದಗ, ಬಳ್ಳಾರಿ, ರಾಯಚೂರು, ಹುಬ್ಬಳ್ಳಿ, ದಾವಣಗೆರೆ ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಿಂದ ಯೋಗಪಟುಗಳು ಪಾಲ್ಗೊಂಡಿದ್ದರು.

8 ವರ್ಷದೊಳಗಿನ, 8 ರಿಂದ 10 ವರ್ಷ, 11 ರಿಂದ 14 ವರ್ಷ, 15 ರಿಂದ 20 ವರ್ಷ, 21 ರಿಂದ 30 ವರ್ಷ, 31ರಿಂದ 40 ವರ್ಷ, 41ರಿಂದ 50 ವರ್ಷ ಹಾಗೂ 50 ವರ್ಷ ಮೇಲ್ಪಟ್ಟವರಿಗಾಗಿ ಪ್ರತ್ಯೇಕ ವಿಭಾಗದಲ್ಲಿ ಸ್ಪರ್ಧೆ ನಡೆಯಿತು. ಪ್ರತಿಯೊಂದು ವಿಭಾಗದಲ್ಲೂ ಪ್ರತ್ಯೇಕವಾಗಿ (ಬಾಲಕ/ ಬಾಲಕಿ) ನಗದು ಬಹುಮಾನ ನೀಡಲಾಯಿತು. ಮೊದಲ ಬಹುಮಾನ 1000 ರೂ., ಎರಡನೇ ಬಹುಮಾನ 700 ರೂ., ಮೂರನೇ ಬಹುಮಾನ 500 ರೂ., ಪ್ರಮಾಣ ಪತ್ರ ಹಾಗೂ ಪದಕ ನೀಡಲಾಯಿತು.

ಸೋಲೋ ಆರ್ಟಿಸ್ಟಿಕ್ ಯೋಗಾಸನ ಸ್ಪರ್ಧೆಯಲ್ಲಿ ಬಾಲಕ–ಬಾಲಕಿಯರ ಪ್ರತ್ಯೇಕ ವಿಭಾಗದಲ್ಲಿ ಸ್ಪರ್ಧೆ ನಡೆಯಿತು. ಮೊದಲ ಮೂರು ● 6ನೇ ಪುಟಕ್ಕೆ

ಮುಂಗಾರು ಮಳೆ ಹೆಚ್ಚಾಗುವ ಸಾಧ್ಯತೆ

ಇಂದಿನಿಂದ ಕೊಡಗಲ್ಲಿ ಭಾರಿ ವಾಹನ ಸಂಚಾರ ನಿಷೇಧ

ಜಿಲ್ಲಾಧಿಕಾರಿ ವೆಂಕಟ್‌ರಾಜಾ ಆದೇಶ

ಮಡಿಕೇರಿ, ಜೂ.30–ಕೊಡಗಿನಲ್ಲಿ ಮುಂಗಾರು ಮಳೆ ಹೆಚ್ಚಾಗುವ ಸಾಧ್ಯತೆ ಇರುವುದರಿಂದ ಜನರು, ವಾಹನ ಸವಾರರು ಹಾಗೂ ಸಾರ್ವಜನಿಕರ ಆಸ್ತಿಪಾಸ್ತಿಗಳ ಸುರಕ್ಷತೆ ಹಿತದೃಷ್ಟಿಯಿಂದ ಜಿಲ್ಲಾದ್ಯಂತ ಜು.1 ರಿಂದ 30ರವರೆಗೆ ಭಾರಿ ವಾಹನಗಳ ಸಂಚಾರ ನಿರ್ಭಂದಿಸಿ ಜಿಲ್ಲಾಧಿಕಾರಿ ಮತ್ತು ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಅಧ್ಯಕ್ಷ ವೆಂಕಟ್ ರಾಜಾ ಆದೇಶಿಸಿದ್ದಾರೆ.

ಮಳೆಗಾಲದಲ್ಲಿ ರಸ್ತೆಗಳು ಹದಗೆಡುವುದರಿಂದ ಹಾಗೂ ಅಧಿಕ ಭಾರ ಸರಕು ಮತ್ತು ಸಾಗಣೆ ವಾಹನಗಳು ದಿನನಿತ್ಯ ಸಂಚರಿಸುವುದರಿಂದ ಗುಡ್ಡ ಕುಸಿತದಿಂದಾಗಿ ರಸ್ತೆಯ ಮೇಲೆ ಮಣ್ಣು ಬಿದ್ದು, ಸಂಚಾರಕ್ಕೆ ತೊಂದರೆಯಾಗಿ ಅಪಘಾತಗಳಿಗೂ ಕಾರಣವಾಗುತ್ತದೆ. ಆದ್ದರಿಂದ ಮುಂಗಾರು ಮಳೆಗಾಲ ಮುಗಿಯುವವರೆಗೆ ಕೊಡಗು ಜಿಲ್ಲೆಯಲ್ಲಿ ಎಲ್ಲಾ ಭಾರಿ ವಾಹನಗಳ ಸಂಚಾರವನ್ನು ನಿರ್ಭಂದಿಸಲಾಗಿದೆ. ● 6ನೇ ಪುಟಕ್ಕೆ

ಮೈಸೂರು ಮಿತ್ರ ಸೋಮವಾರ 1 ಜುಲೈ 2024

ವಿಶ್ವ ಪರಿಸರ ಮಾಸಾಚರಣೆ ಅಂಗವಾಗಿ ಮೈ ಗ್ರೀನ್–2024 ವಸ್ತು ಪ್ರದರ್ಶನ



ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಪರಿಸರ ಮಾಸಾಚರಣೆ ಅಂಗವಾಗಿ ಆಯೋಜಿಸಿದ್ದ ಮೈ ಗ್ರೀನ್–2024 ವಸ್ತುಪ್ರದರ್ಶನವನ್ನು ಸುಸ್ಥಿರ ಜೀವನದ ಸಲಹೆಗಾರ ರಮೇಶ್ ಕಿಕ್ಕೇರಿ ಉದ್ಘಾಟಿಸಿದರು.

ಮೈಸೂರು, ಜೂ.30(ಬಿಎಲ್‌ಯು)– ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಇಂದು ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ, ವಿಶ್ವ ಪರಿಸರ ಮಾಸಾಚರಣೆ ಅಂಗವಾಗಿ ಮೈ ಗ್ರೀನ್–2024 ವಸ್ತು ಪ್ರದರ್ಶನ ಆಯೋಜಿಸಿತ್ತು.

ಒಂದು ದಿನದ ವಸ್ತು ಪ್ರದರ್ಶನವನ್ನು ಸುಸ್ಥಿರ ಜೀವನದ ಸಲಹೆಗಾರ ರಮೇಶ್ ಕಿಕ್ಕೇರಿ ಉದ್ಘಾಟಿಸಿದರು. ತರುವಾಯ ಮಾತನಾಡಿದ ಅವರು, ಶೂನ್ಯ ವೆಚ್ಚದಲ್ಲಿ ವಿದ್ಯುತ್, ಅಡುಗೆ ಅನಿಲ ಹಾಗೂ ಮಳೆ ನೀರು ಕುಯ್ಲು ವಿಧಾನ ಅಳವಡಿಸಿಕೊಂಡಿರುವ ಮೈಸೂರು ಇಡೀ ದೇಶಕ್ಕೆ ಮಾದರಿಯಾಗಿದೆ ಎಂದು ಅಭಿಪ್ರಾಯಪಟ್ಟರು.

ಮೈಸೂರಿನ ಬಹಳಷ್ಟು ಜನರು ಈ ವಿಧಾನ ಬಳಸಿಕೊಳ್ಳಬೇಕು. ಇದರಿಂದ ಮನೆ ನಿರ್ವಹಣೆಗಾಗಿ ಮಾಡುವ ಬಹಳಷ್ಟು ವೆಚ್ಚ ಉಳಿತಾಯ ಮಾಡಬಹುದು ಎಂದು ಸಲಹೆ ನೀಡಿದರು.

ವಿದ್ಯುತ್, ಅಡುಗೆ ಅನಿಲ ಹಾಗೂ ಮಳೆ ನೀರು ಕುಯ್ಲು ವಿಧಾನ ಅನುಸರಿಸುವ ಬಗ್ಗೆ ಕೆಲವು ಸಂಘ ಸಂಸ್ಥೆಗಳು ತರಬೇತಿ ನೀಡಲಿದ್ದು, ಜನರು ಇದರ ಸದುಪಯೋಗಪಡಿಸಿಕೊಳ್ಳಬೇಕು ಎಂದು ರಮೇಶ್ ಕಿಕ್ಕೇರಿ ಹೇಳಿದರು.

ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಪರಿಸರ ಸ್ನೇಹಿಯಾದ ಹಲವು ವಸ್ತುಗಳ ಮಾರಾಟ, ಪ್ರದರ್ಶನವನ್ನು ಆಯೋಜಿಸಲಾಗಿತ್ತು. ವಿಶ್ವ ಪರಿಸರ ಮಾಸಾಚರಣೆ ಸಮಿತಿ ಅಧ್ಯಕ್ಷ ಶ್ರೀನಾಥ್, ಕಾರ್ಯದರ್ಶಿ ಎಸ್.ಶಶಿರಾಜ್, ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾದ ಅಧ್ಯಕ್ಷ ಯೋಗಾನರಸಿಂಹ, ಕಾರ್ಯದರ್ಶಿ ಪ್ರಭಾಕರರಾವ್ ಈ ವೇಳೆ ಹಾಜರಿದ್ದರು.

ಬಸ್ ನಿಲ್ದಾಣ ಕಾಮಗಾರಿಗೆ ಜಿಟಿಡಿ ಚಾಲನೆ



ಮೈಸೂರು ತಾಲೂಕು ಕಡಕೊಳ ಗ್ರಾಮದಲ್ಲಿ ಪಟ್ಟಣ ಪಂಚಾಯಿತಿ ವತಿಯಿಂದ ಬಸ್ ನಿಲ್ದಾಣ ಕಾಮಗಾರಿಗೆ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡರು ಗುದ್ದಲಿ ಪೂಜೆ ನೆರವೇರಿಸಿದರು. ಈ ವೇಳೆ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಶ್ರೀಮತಿ ದೀಪಾ, ಜೆಡಿಎಸ್ ಮುಖಂಡರಾದ ಗೆಜ್ಜಗಳ್ಳಿ ಲೋಕೇಶ್, ದಿ ಯೂನಿಯನ್ ರೈತ ಸಹಕಾರ ಬ್ಯಾಂಕ್ ಉಪಾಧ್ಯಕ್ಷ ಕಡಕೊಳ ಕುಮಾರಸ್ವಾಮಿ, ಯುವ ಮುಖಂಡರಾದ ಕೆ.ಆರ್.ಹರೀಶ್, ಗ್ರಾಪಂ ಮಾಜಿ ಸದಸ್ಯ ಶಿವಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಜಾತಿಗೊಂದು ಉಪಮುಖ್ಯಮಂತ್ರಿ ಸ್ಥಾನ ಬೇಡ

ಮೈಸೂರು, ಜೂ.30(ಬಿಎಲ್‌ಯು)– ಜಾತಿಗೊಂದು ಉಪ ಮುಖ್ಯಮಂತ್ರಿ ನೇಮಕ ಮಾಡಿದರೆ ಮುಖ್ಯಮಂತ್ರಿ ಸ್ಥಾನದ ಪರಮಾಧಿಕಾರಕ್ಕೆ ಧಕ್ಕೆ ಉಂಟಾಗುತ್ತದೆ ಎಂದು ನಗರ ಕಾಂಗ್ರೆಸ್ ವಕ್ತಾರ ಎಸ್.ರಾಜೇಶ್ ಅಭಿಪ್ರಾಯಪಟ್ಟರು.

ನಗರದ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಒಂದಕ್ಕಿಂತ ಹೆಚ್ಚು ಉಪ ಮುಖ್ಯಮಂತ್ರಿ ನೇಮಕ ಮಾಡಿದರೆ ಸಮರ್ಪಕ ಆಡಳಿತ ನಿರ್ವಹಣೆ ಸಾಧ್ಯವಾಗುವುದಿಲ್ಲ ಎಂದರು.

ಬಿಜೆಪಿ ಸರ್ಕಾರದ ಅವಧಿಯಲ್ಲಿ ಹೆಚ್ಚು ಡಿಸಿಎಂ ಹುದ್ದೆ ಸೃಷ್ಟಿಸಿದ ಕಾರಣ ಆಡಳಿತ ವೈಫಲ್ಯದಿಂದ ಅಧಿಕಾರ ಕಳೆದುಕೊಳ್ಳಬೇಕಾದ ಪರಿಸ್ಥಿತಿ ಬಂದಿತು ಎಂದರು.

ಡಿ.ಕೆ.ಶಿವಕುಮಾರ್ ಅವರನ್ನು ಮುಖ್ಯಮಂತ್ರಿ ಮಾಡುವುದು ಎಐಸಿಸಿ ತೀರ್ಮಾನವಾಗಿದ್ದು, ಶಾಸಕರು, ಮಂತ್ರಿಗಳು ಈ ಬಗ್ಗೆ ಹಾದಿ–ಬೀದಿಯಲ್ಲಿ ಮಾತನಾಡಿ ಪಕ್ಷದ ವರ್ಚಸ್ಸಿಗೆ ಧಕ್ಕೆ ತರಬಾರದು ಎಂದರು. ಕಾಂಗ್ರೆಸ್ ಮುಖಂಡರಾದ ಶ್ರೀನಿವಾಸ್, ಬಸವಣ್ಣ, ರವಿ ಪತ್ರಿಕಾಗೋಷ್ಠಿಯಲ್ಲಿದ್ದರು.

ಮಾಜಿ ಕಾರ್ಪೋರೇಟರ್ ಎಸ್‌ಬಿಎಂ ಮಂಜುಗೆ ಹುಟ್ಟುಹಬ್ಬದ ಸಂಭ್ರಮ



ಹುಟ್ಟುಹಬ್ಬ ಆಚರಿಸಿಕೊಂಡ ಮಾಜಿ ಕಾರ್ಪೋರೇಟರ್ ಎಸ್‌ಬಿಎಂ ಮಂಜು ಅವರನ್ನು ರಮೇಶ್, ಹನುಮಗೌಡ, ಮಹದೇವ್, ಸೋಮೇಶ್, ವಿಕಾಶ್, ಸಮರ್ಥ್ ಎಂ.ಗೌಡ, ಮನು ಇನ್ನಿತರರು ಅಭಿನಂದಿಸಿ, ಶುಭ ಕೋರಿದರು.

ನೀರನ್ನು ಕುದಿಸಿ, ಆರಿಸಿ ಕುಡಿಯಲು ಪಾಲಿಕೆ ಮನವಿ

ಮೈಸೂರು, ಜೂ.30(ಎಂಕೆ)–ಮಳೆಯಿಂದ ಕೆಆರ್‌ಎಸ್ ಹಾಗೂ ಕಬಿನಿ ಜಲಾಶಯಕ್ಕೆ ಹೊಸ ನೀರು ಸೇರುತ್ತಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರು ಮುನ್ನೆಚ್ಚರಿಕಾ ಕ್ರಮವಾಗಿ ನೀರನ್ನು ಕುದಿಸಿ, ಆರಿಸಿ ಕುಡಿಯುವ ಮೂಲಕ ಪಾಲಿಕೆಯೊಂದಿಗೆ ಸಹಕರಿಸುವಂತೆ ನಗರಪಾಲಿಕೆ ವಾಣಿ ವಿಲಾಸ ನೀರು ಸರಬರಾಜು ಮತ್ತು ಒಳಚರಂಡಿ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಮನವಿ ಮಾಡಿದ್ದಾರೆ. ಪಾಲಿಕೆ ವ್ಯಾಪ್ತಿಯಲ್ಲಿ ಬರುವ ವಿವಿಧ ಮೂಲಸ್ಥಾವರಗಳಿಂದ ಶುದ್ಧ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಇತರೆ ಕಾರಣಗಳಿಂದ ಕುಡಿಯುವ ನೀರಿಗೆ ತ್ಯಾಜ್ಯ ನೀರು ಸೇರಿ ಕಲುಷಿತಗೊಳ್ಳುತ್ತಿರುವುದು ಕಂಡು ಬಂದಲ್ಲಿ ಪತ್ರ ಮುಖೇನ ಕಚೇರಿ ವಿಳಾಸಕ್ಕೆ ಅಥವಾ (mysoreugd@gamil.com / eevvww2012@gmail.com) ಇ ಮೇಲ್ ಅಥವಾ ದೂ.ಸಂ. 0821–2418849, ಮೊ.ನಂ.9449841196ಗೆ ಸಂಪರ್ಕಿಸಿ ಮಾಹಿತಿ ನೀಡಿ. ಹಾಗೆಯೇ ಮಳೆಯಿಂದ ಕೆಆರ್‌ಎಸ್ ಹಾಗೂ ಕಬಿನಿ ಜಲಾಶಯಕ್ಕೆ ಹೊಸ ನೀರು ಸೇರುತ್ತಿರುವ ಹಿನ್ನಲೆಯಲ್ಲಿ ಸಾರ್ವಜನಿಕರು ಮುನ್ನೆಚ್ಚರಿಕಾ ಕ್ರಮವಾಗಿ ನೀರನ್ನು ಕುದಿಸಿ, ಆರಿಸಿ ಕುಡಿಯಬೇಕು. ಪತ್ರಿಕಾ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ಬಿಳಿಕೆರೆ ನಾಗರಾಜ್ ಲಾಡ್ ನಿಧನ



ಮೈಸೂರು,ಜೂ.30–ಮೈಸೂರಿನ ರಾಜೇಂದ್ರನಗರ ನಿವಾಸಿ ಬಿಳಿಕೆರೆ ನಾಗರಾಜ್ ಲಾಡ್ (86) ಭಾನುವಾರ ನಿಧನರಾದರು. ಮೃತರು ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಸೋಮವಾರ ಬೆಳಗ್ಗೆ 11.30ಕ್ಕೆ ಚಾಮುಂಡಿಬೆಟ್ಟದ ತಪ್ಪಲಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ನಗರಪಾಲಿಕೆ ಮಾಜಿ ಸದಸ್ಯ ಕೆ.ವಿ.ಶ್ರೀಧರ್ ಸ್ತುತ್ಯಾರ್ಹ ಕಾರ್ಯ

ಹೆಬ್ಬಾಳು ಬಡಾವಣೆಯ ಎಸ್‌ಎಸ್‌ಎಲ್‌ಸಿ, ಪಿಯುಸಿಯ 220 ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

● ಕೆ.ವಿ.ಶ್ರೀಧರ್ ಸೇವಾಪರತೆಗೆ ಪ್ರೊ.ಕೃಷ್ಣೇಗೌಡ ಪ್ರಶಂಸೆ ● ಅಪ್ಪ-ಅಮ್ಮನ ತ್ಯಾಗ ಮರೀಬೇಡಿ; ವೃದ್ಯಾಪ್ಯದಲ್ಲಿ ಅವರ ಕೈಬಿಡಬೇಡಿ: ಸುಧಾ ಬರಗೂರು ಕಿವಿಮಾತು



ಮೈಸೂರು ವಿಜಯನಗರದ ರೈಲ್ವೆ ಬಡಾವಣೆಯ ರಂಗಮಂದಿರದಲ್ಲಿ ನವ ಭಾರತ್ ನಿರ್ಮಾಣ್ ಸೇವಾ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ 2023–24ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು. ಚಿತ್ರದಲ್ಲಿ ಶಾಸಕ ಜಿ.ಟಿ.ದೇವೇಗೌಡರು, ಖ್ಯಾತ ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ, ಸುಧಾ ಬರಗೂರು, ಪಾಲಿಕೆ ಮಾಜಿ ಸದಸ್ಯರಾದ ಕೆ.ವಿ.ಶ್ರೀಧರ್, ಶಿವಣ್ಣ, ಕೆ.ವಿ.ಮಲ್ಲೇಶ್ ಇತರರಿದ್ದಾರೆ.

ಮೈಸೂರು, ಜೂ.30(ಎಸ್‌ಪಿಎನ್)–ತಮ್ಮ ಮಕ್ಕಳ ಸಾಧನೆ ನೋಡಿ ಆ ಪೋಷಕರು ಹೇಗೆ ಖುಷಿ ಪಡುತ್ತಾರೋ ಅದೇ ರೀತಿ ಈ ಬಡಾವಣೆಯ ಮಕ್ಕಳು ಸಾಧನೆ ಮಾಡಿದರೆ ಅಷ್ಟೇ ಖುಷಿಪಡುವವರಲ್ಲಿ ನಗರಪಾಲಿಕೆ ಮಾಜಿ ಸದಸ್ಯ ಕೆ.ವಿ.ಶ್ರೀಧರ್ ಕೂಡ ಒಬ್ಬರು. ಸಮಾಜ ಸೇವೆಯಲ್ಲಿರುವವರು ಇಂತಹ ಸಂಸ್ಕಾರ ಅಳವಡಿಸಿಕೊಂಡಿರುವುದು ಸಂತೋಷದ ಸಂಗತಿ ಎಂದು ಹಿರಿಯ ಸಾಹಿತಿ ಪ್ರೊ.ಎಂ.ಕೃಷ್ಣೇಗೌಡ ಅಭಿಪ್ರಾಯಪಟ್ಟರು.

ಮೈಸೂರು ವಿಜಯನಗರದ ರೈಲ್ವೆ ಬಡಾವಣೆಯ ರಂಗಮಂದಿರದಲ್ಲಿ ನವ ಭಾರತ್ ನಿರ್ಮಾಣ್ ಸೇವಾ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ 2023–24ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ನೂರು ವರ್ಷಗಳ ಹಿಂದೆ ವಿದ್ಯಾರ್ಥಿಗಳಿಗೆ ದಂಡ ಪ್ರಯೋಗಿಸಿ, ಶಿಕ್ಷಕರು ಅಕ್ಷರಾಭ್ಯಾಸ ಮಾಡಿಸುತ್ತಿದ್ದರು. 60 ವರ್ಷಗಳ ಹಿಂದೆ ಶಿಕ್ಷಕರು ಬೈದು ವಿದ್ಯಾರ್ಥಿಗಳಿಗೆ ಅಕ್ಷರಾಭ್ಯಾಸ ಮಾಡಿಸುತ್ತಿದ್ದರು. ಇನ್ನು 40 ವರ್ಷಗಳ ಹಿಂದಿನ ಪರಿಸ್ಥಿತಿ ನೋಡುವುದಾದರೆ ವಿದ್ಯಾರ್ಥಿಗಳಿಗೆ ಶಿಕ್ಷಕರು ವಿನಯದಿಂದ ಅಕ್ಷರಾಭ್ಯಾಸ ಮಾಡಿಸುತ್ತಿದ್ದರು. ಇನ್ನು ಸ್ವಲ್ಪ 20 ವರ್ಷಗಳ ಪರಿಸ್ಥಿತಿ ನೋಡುವುದಾದರೆ ಶಿಕ್ಷಕರು, ವಿದ್ಯಾರ್ಥಿಗಳಿಗೆ ನಮಸ್ಕರಿಸಿ ಅಕ್ಷರಾಭ್ಯಾಸ ಮಾಡುತ್ತಿದ್ದಾರೆ. ನಮಸ್ಕರಿಸಿ ಎಂದರೆ, ಪೋಷಕರು ತಪ್ಪಾಗಿ ತಿಳಿಯಬಾರದು. ಇತ್ತೀಚಿನ ವಿದ್ಯಾರ್ಥಿಗಳು ಜ್ಞಾನಮಟ್ಟವನ್ನು ಹೆಚ್ಚಿಸಿಕೊಂಡಿರುವುದರಿಂದ ಅಂತಹ ವಿದ್ಯಾರ್ಥಿಗಳಿಗೆ ಶಿಕ್ಷಕರು ಸ್ವಲ್ಪ ನಮಸ್ಕಾರ ಭಾವನೆಯನ್ನು ರೂಢಿಸಿಕೊಂಡು ಪಾಠ ಮಾಡುವ ವಿಧಾನ ಎಂದು ತಿಳಿಸಿದರು.

ಕೆ.ವಿ.ಶ್ರೀಧರ್ ಸಮಾಜಮುಖಿ: ಹಲವು ವರ್ಷಗಳಿಂದ ಪಾಲಿಕೆ ಮಾಜಿ ಸದಸ್ಯ ಕೆ.ವಿ.ಶ್ರೀಧರ್ ಅವರು, ನವಭಾರತ್ ನಿರ್ಮಾಣ್ ಸೇವಾ ಟ್ರಸ್ಟ್ ಮೂಲಕ ವಿಜಯನಗರ ಬಡಾವಣೆಯಲ್ಲಿ ಆರೋಗ್ಯ ಶಿಬಿರ, ರಕ್ತದಾನ ಶಿಬಿರ, ಸಾಧಕರಿಗೆ ಸನ್ಮಾನ ಹಾಗೂ ಸುಗಮ ಸಂಗೀತ ಕಾರ್ಯಕ್ರಮ ಸೇರಿದಂತೆ ಹಲವು ಯಶಸ್ವಿ ಕಾರ್ಯಕ್ರಮಗಳನ್ನು ಆಯೋಜಿಸಿದ್ದಾರೆ. ಅವರ ಈ ಸಮಾಜ ಸೇವೆ ಇತರರಿಗೂ ಮಾದರಿ. ಅಲ್ಲದೆ, ಇವರ ಸ್ನೇಹಿತರಾದ ಶಿವಣ್ಣ, ಕೆ.ವಿ.ಮಲ್ಲೇಶ್, ಜೆ.ಎಸ್.ಜಗದೀಶ್ ಅವರು ವಾಸವಿರುವ ಬಡಾವಣೆಗಳಲ್ಲಿ ಅನೇಕ ವರ್ಷಗಳಿಂದ ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜನಮಾನಸದಲ್ಲಿ ಉಳಿದಿದ್ದಾರೆ ಎಂದರು.

ಅಪ್ಪ–ಅಮ್ಮಂದಿರ ತ್ಯಾಗ ಮರೀಬೇಡಿ: ವಾಗ್ಮಿ ಸುಧಾ ಬರಗೂರು ಮಾತನಾಡಿ, ಮಕ್ಕಳು ಎಷ್ಟೇ ಸಾಧನೆ ಮಾಡಿದರೂ ಆ ಸಾಧನೆ ಹಿಂದೆ ಅಪ್ಪ–ಅಮ್ಮಂದಿರ ತ್ಯಾಗವಿರುತ್ತದೆ ಎಂಬುವುದನ್ನು ಯುವಕರು ಮರೆಯಬಾರದು. ವೃದ್ಧಾಪ್ಯದಲ್ಲಿ ಅವರ ನೆರವಿಗೆ ಮಕ್ಕಳು ಧಾವಿಸಬೇಕು. ಇಂದಿನ ಹೆಣ್ಣು ಮಕ್ಕಳು ಎಲ್ಲಾ ಕ್ಷೇತ್ರವನ್ನೂ ಆವರಿಸಿಕೊಂಡಿದ್ದಾರೆ. ಅದೇ ರೀತಿ ಶಿಕ್ಷಣದಲ್ಲೂ ಹೆಣ್ಣು ಮಕ್ಕಳ ಸಾಧನೆ ಅಪಾರ. ಇದರಲ್ಲಿ ಗಂಡು ಮಕ್ಕಳ ಸಾಧನೆ ಕಡಿಮೆ ಇಲ್ಲ. ಅವರೂ ಉನ್ನತ ಶಿಕ್ಷಣ ಪಡೆದು, ಹಲವು ಕ್ಷೇತ್ರದಲ್ಲಿ ಗುರುತಿಸಿಕೊಂಡಿದ್ದಾರೆ. ಪ್ರಸ್ತುತ ಕಾಲಘಟ್ಟ ಗಂಡು–ಹೆಣ್ಣು ಸಮಾನವಾಗಿ ಎಲ್ಲಾ ಕ್ಷೇತ್ರದಲ್ಲೂ ಗುರುತಿಸಿಕೊಂಡಿರುವುದಕ್ಕೆ ಸಂತಸ ವ್ಯಕ್ತಪಡಿಸಿದರು.

ಈ ವೇಳೆ 2023–24ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ 220ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಇದಕ್ಕೂ ಮುನ್ನ ವಿದ್ವಾನ್ ನಿತಿನ್ ರಾಜಾರಾಮ ಶಾಸ್ತ್ರೀ ಹಾಗೂ ವಿದುಷಿ ಹಂಸಿಣಿ ನೇತೃತ್ವದಲ್ಲಿ ಸುಗಮ ಸಂಗೀತ ಗಾಯನ ನಡೆಸಿಕೊಟ್ಟು ಪ್ರೇಕ್ಷಕರ ಮೆಚ್ಚುಗೆಗಳಿಸಿದರು. ವೇದಿಕೆಯಲ್ಲಿ ನವಭಾರತ್ ನಿರ್ಮಾಣ್ ಸೇವಾಟ್ರಸ್ಟ್ ಅಧ್ಯಕ್ಷ, ಪಾಲಿಕೆ ಮಾಜಿ ಸದಸ್ಯ ಕೆ.ವಿ. ಶ್ರೀಧರ್, ಪಾಲಿಕೆ ಮಾಜಿ ಸದಸ್ಯರಾದ ಶಿವಣ್ಣ, ಕೆ.ವಿ. ಮಲ್ಲೇಶ್, ಜೆ.ಎಸ್.ಜಗದೀಶ್ ಸೇರಿದಂತೆ ಇತರೆ ಮುಖಂಡರಿದ್ದರು. ಮರಿಮಲ್ಲಪ್ಪ ಪ್ರೌಢಶಾಲೆ ಶಿಕ್ಷಕ ಬಿ.ಆರ್.ಶಿವಕುಮಾರ್ ಕಾರ್ಯಕ್ರಮ ನಿರೂಪಿಸಿದರು.

ತಂದೆ-ತಾಯಿಯಿಂದ ಎಲ್ಲವನ್ನೂ ಪಡೆದವರು ವೃದ್ಧಾಪ್ಯದಲ್ಲಿ ಅವರ ರಕ್ಷಣೆ ಮಾಡಬೇಕಲ್ಲವೆ?

ಮೈಸೂರು: ತಂದೆ–ತಾಯಿಯಿಂದ ಎಲ್ಲಾ ಸವಲತ್ತು ಪಡೆಯುವ ನೀವು ವೃದ್ಧಾಪ್ಯದಲ್ಲಿ ಅವರನ್ನು ಗೌರವಯುತವಾಗಿ ಕಂಡು, ಪೋಷಿಸುವ ಹೊಣೆ ನಿಮ್ಮದು ಎಂದು ಮಾಜಿ ಸಚಿವರೂ ಆದ ಶಾಸಕ ಜಿ.ಟಿ. ದೇವೇಗೌಡರು ಯುವಕರಿಗೆ ಕಿವಿಮಾತು ಹೇಳಿದರು.

ತಂದೆ–ತಾಯಿಗಳು ತಮ್ಮ ಮಕ್ಕಳು ಸಮಾಜದಲ್ಲಿ ಉತ್ತಮ ಪ್ರಜೆಗಳಾಗಿ ರೂಪುಗೊಳ್ಳಲಿ ಎಂದು ಸಾಕಷ್ಟು ಶ್ರಮಪಟ್ಟು ವಿದ್ಯಾಭ್ಯಾಸ ಕೊಡಿಸುತ್ತಿದ್ದಾರೆ. ತಂದೆ–ತಾಯಿಯಿಂದ ಎಲ್ಲವನ್ನು ಪಡೆದ ಮಕ್ಕಳು ಮುಂದೆ ಅವರ ವೃದ್ಧಾಪ್ಯದಲ್ಲಿ ಕಡೆಗಣಿಸಬಾರದು ಎಂದು ಕೆಲ ಘಟನೆಗಳನ್ನು ಉಲ್ಲೇಖಿಸಿ ತಿಳಿಸಿದರು.

ಯುವಕರಿಗೆ ಶಾಸಕ ಜಿಟಿಡಿ ಕಿವಿಮಾತು

ದಿನನಿತ್ಯ ನನ್ನ ಬಳಿ ಎರಡು ರೀತಿಯ ಪೋಷಕರು ಬರುತ್ತಾರೆ. ಅದರಲ್ಲಿ ಕೆಲ ಪೋಷಕರು ಸ್ನಾತಕೋತ್ತರ ಪದವಿ ಮುಗಿಸಿದ ಮಗನಿಗೆ ಯಾವುದಾದರೂ ಕಂಪನಿಯಲ್ಲಿ ಕೆಲಸ ಕೊಡಿಸಿ ಎಂದು ಕೇಳಿಕೊಂಡು ಬರುತ್ತಾರೆ. ಆದರೆ, ಪದವಿ ಮುಗಿಸಿದ ಯುವಕರು ತಾವೇ ಖುದ್ದಾಗಿ ತೆರಳಿ ಕೆಲಸ ಪಡೆಯಲು ಶ್ರಮಪಡುವುದಿಲ್ಲ. ಈಗಾದರೆ, ಎರಡೆರಡು ಪದವಿ ಪಡೆದು ಏನು ಪ್ರಯೋಜನ ಎಂದು ಯುವಕರ ನಡೆಯನ್ನು ಪ್ರಶ್ನಿಸಿದ ಅವರು, ಮತ್ತೊಂದು ವರ್ಗದ ಪೋಷಕರು ಬಂದು ನಮ್ಮ ಮಗನಿಗೆ ಎಷ್ಟು ಹಣವಾದರೂ ಸರಿ ಕೊಡುತ್ತೇವೆ. ಇಂತಹುದೇ ಸಂಸ್ಥೆಯಲ್ಲಿ ಇಂತಹುದೇ ವಿಷಯದಲ್ಲಿ ಸೀಟು ಕೊಡಿಸಿ ಎಂದು ದುಂಬಾಲು ಬೀಳುತ್ತಾರೆ ಎಂದು ತಿಳಿಸಿದರು.

ಇಂದಿನ ವೇದಿಕೆಯಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ 220ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಗುರುತಿಸಿ ಸನ್ಮಾನ ಮಾಡುತ್ತಿರುವುದು ಸಂತೋಷದ ಸಂಗತಿ. ಈ ಕಾರ್ಯದಲ್ಲಿ ನಗರಪಾಲಿಕೆ ಮಾಜಿ ಸದಸ್ಯ ಕೆ.ವಿ.ಶ್ರೀಧರ್ ಸೇರಿದಂತೆ ಅವರ ಸ್ನೇಹಿತರ ಶ್ರಮ ಪ್ರಶಂಸನೀಯ ಎಂದು ಹೇಳಿದರು.

ಮೈಸೂರಿನ ಸರ್ಕಾರಿ ಮುದ್ರಣಾಲಯದಲ್ಲಿ ನಾಡಪ್ರಭು ಕೆಂಪೇಗೌಡರ ಜಯಂತಿ



ಮೈಸೂರಿನ ಸರ್ಕಾರಿ ಮುದ್ರಣಾಲಯದಲ್ಲಿ ನಾಡಪ್ರಭು ಕೆಂಪೇಗೌಡರ 515ನೇ ಜಯಂತಿ ಆಚರಿಸಲಾಯಿತು. ಈ ವೇಳೆ ನಮ್ಮೂರು ನಮ್ಮೋರು ಸಮಾಜ ಸೇವಾ ಟ್ರಸ್ಟ್ ಅಧ್ಯಕ್ಷ ಬೀಡನಹಳ್ಳಿ ಸತೀಶ್‌ಗೌಡ, ಮೈಸೂರು ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಮರಿಸ್ವಾಮಿ, ನಿರ್ದೇಶಕ ರವಿ ಎ, ಬಿಜೆಪಿ ನಗರ ಯುವ ಘಟಕದ ಅಧ್ಯಕ್ಷ ರಾಕೇಶ್‌ಗೌಡ, ಮುದ್ರಣಾಲಯದ ಉಪನಿರ್ದೇಶಕಿ ಜ್ಯೋತಿ, ಮುದ್ರಣಾಲಯದ ರಾಜು ಅಶೋಕ್, ನಾಗರಾಜ, ಪುಟ್ಟರಾಜು, ಮಹೇಂದ್ರ, ಹರ್ಷವರ್ಧನ್ ಇನ್ನಿತರರಿದ್ದರು.

ಇಂದು ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಸಮವರ್ತನ–2.0

ಮೈಸೂರು, ಜೂ.30(ಬಿಎಲ್‌ಯು)– ಮೈಸೂರಿನ ಜೆಎಸ್‌ಎಸ್ ಕಾಲೇಜ್ ಆಫ್ ಫಾರ್ಮಸಿಯ ಸಮವರ್ತನ–2.0 ಪದವೀಧರ ಸ್ವಾಗತವನ್ನು ಜು.1ರಂದು ಆಯೋಜಿಸಲಾಗಿದೆ ಎಂದು ಕಾಲೇಜಿನ ಪ್ರಿನ್ಸಿಪಾಲ್ ಡಾ.ಪ್ರಮೋದ್‌ಕುಮಾರ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಶ್ರೀ ರಾಜೇಂದ್ರ ಸಭಾಂಗಣದಲ್ಲಿ ಅಂದು ನಡೆಯುವ ಸಮವರ್ತನ–2.0 ಕಾರ್ಯಕ್ರಮದಲ್ಲಿ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು ಎಂದರು. ಅಂದು ಮಧ್ಯಾಹ್ನ 3 ಗಂಟೆಗೆ ನಡೆಯುವ ಕಾರ್ಯಕ್ರಮದಲ್ಲಿ ರಾಜೀವ್ ಗಾಂಧಿ ಆರೋಗ್ಯ ಮತ್ತು ವಿಜ್ಞಾನ ವಿವಿ ಕುಲಪತಿ ಡಾ.ಎಂ.ಕೆ.ರಮೇಶ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದರು.

ಸಿಎಂ ಸ್ಥಾನದ ಬಗ್ಗೆ ಒಡಕುಂಟು ಮಾಡಬೇಡಿ

ಮೈಸೂರು, ಜೂ.30– ಡಿ.ಕೆ.ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಸ್ಥಾನ ಬಿಟ್ಟುಕೊಡಬೇಕು ಎಂದು ವಿಶ್ವ ಒಕ್ಕಲಿಗ ಮಹಾಸಂಸ್ಥಾನ ಮಠದ ಚಂದ್ರಶೇಖರ ಶ್ರೀಗಳು ವೇದಿಕೆ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ ಅವರಿಗೆ ಹೇಳಿದ್ದರು. ಈ ಕುರಿತು ಪ್ರತಿಪಕ್ಷ ನಾಯಕ ಆರ್.ಅಶೋಕ್ ಅವರು ನೀಡಿರುವ ಹೇಳಿಕೆಗೆ ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ತಿರುಗೇಟು ನೀಡಿದ್ದಾರೆ.

ಈ ಹಿಂದೆ ಯಡಿಯೂರಪ್ಪ ಸಿಎಂ ಆಗಿದ್ದಾಗ ಸ್ವಾಮೀಜಿಯೊಬ್ಬರು ವೇದಿಕೆ ಕಾರ್ಯಕ್ರಮದಲ್ಲಿ ಬಿಎಸ್‌ವೈಗೆ ಎಚ್ಚರಿಕೆ ನೀಡಿದ್ದರು. ಇದರಿಂದ ಯಡಿಯೂರಪ್ಪ ಅವರೂ ಹೀಗೆಲ್ಲ ಹೆದರಿಸೋಕಾಗಲ್ಲ ಎಂದು ಕೂಗಾಡಿದ್ದರು. ಆಗ ನಿಮ್ಮ ಪಕ್ಷದ ನಾಯಕರು ಸಿಎಂ ಸ್ಥಾನಕ್ಕೆ ರಾಜೀನಾಮೆ ಕೊಟ್ಟರಾ? ಕೊನೆಗೆ ಯಡಿಯೂರಪ್ಪ ಅವರನ್ನು ಕಣ್ಣೀರು ಹಾಕಿಸಿ ಸಿಎಂ ಸ್ಥಾನದಿಂದ ಕೆಳಗೆ ಇಳಿಸಿದಿರಿ. ಬಿಜೆಪಿ ಕಟ್ಟಲು



ಬಿ.ಸುಬ್ರಹ್ಮಣ್ಯ

ಬೆನ್ನೆಲುಬಾಗಿ ನಿಂತಿದ್ದ ಕೆ.ಎಸ್.ಈಶ್ವರಪ್ಪ ಅವರಿಗೆ ಟಿಕೆಟ್ ವಂಚಿಸಿ ಅವರನ್ನು ಮೂಲೆಗುಂಪು ಮಾಡಿದಿರಿ. ಈಗ ಯಾವ ನೈತಿಕತೆಯಿಂದ ಸಿಎಂ ರಾಜೀನಾಮೆ ಕೇಳುತ್ತೀರಿ ಎಂದು ಆರ್.ಅಶೋಕ್ ಅವರನ್ನು ಸುಬ್ರಹ್ಮಣ್ಯ ಪ್ರಶ್ನಿಸಿದ್ದಾರೆ.

ಸಿಎಂ ಸ್ಥಾನ ಯಾರಿಗೆ ಕೊಡಬೇಕು ಎಂಬುದನ್ನು ಹೈಕಮಾಂಡ್ ತೀರ್ಮಾನಿಸುತ್ತೆ. ಡಿ.ಕೆ.ಶಿವಕುಮಾರ್ ಅವರಿಗೆ ಸಿಎಂ ಸ್ಥಾನ ಕೊಡಲ್ಲ ಅಂತ ಯಾರೂ ಹೇಳಿಲ್ಲ. ಕಾಲ ಕೂಡಿಬರುತ್ತೆ ನೀವು ಮಧ್ಯೆ ಮೂಗು ತೂರಿಸಿ ಒಡಕುಂಟು ಮಾಡುವ ಕೆಲಸಕ್ಕೆ ಮುಂದಾಗಬೇಡಿ ಎಂದು ಕುಟುಕಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

1.07.2024 ಸೋಮವಾರ, ಮಳೆ ನಕ್ಷತ್ರ: ಆರಿದ್ರಾ 22.06.2024ರಿಂದ 05.07.2024
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಕೃಷ್ಣ ಪಕ್ಷ,
ತಿಥಿ: ದಶಮಿ, ನಕ್ಷತ್ರ: ಅಶ್ವಿನಿ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 9ರಿಂದ ಬೆನ್ನು ನೋವಿಗೆ ಕಾರಣಗಳು, ಲಕ್ಷಣಗಳು ಮತ್ತು ಚಿಕಿತ್ಸೆಗಳ ಬಗ್ಗೆ ತಜ್ಞ ವೈದ್ಯರಿಂದ ಸಲಹೆ ಹಾಗೂ ಬೆಳಗ್ಗೆ 6.30ರಿಂದ ಯೋಗ ತರಗತಿ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ

■ **ಮೇ ॥ ನಂಜುನ ಕುಮಾರ್ಸ್ ಮಲ್ಟಿಸ್ಪೆಷಾಲಿಟಿ:** ವೈದ್ಯರ ದಿನಾಚರಣೆ ಅಂಗವಾಗಿ ಉಚಿತ ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ದಟ್ಟಗಳ್ಳಿ, ಬೆಳಗ್ಗೆ 10 ಗಂಟೆಯಿಂದ

■ **ಧನ್ಯ ಸ್ಕೂಲ್ ಆಫ್ ಯೋಗ ಹಾಗೂ ಮುದ್ರಾ ಪ್ರಾಣಾಯಾಮ ರಿಸರ್ಚ್ ಸೆಂಟರ್:** ವಿಶೇಷ ಚಿಕಿತ್ಸಾ ಮುದ್ರಾ ಪ್ರಾಣಾಯಾಮ ಹಾಗೂ ಸಂಕಲ್ಪ ಸಿದ್ಧಿ ಧ್ಯಾನ ಶಿಬಿರ, ಸ್ಥಳ: ಮಹಿಳಾ ಸಮಾಜ, ಜೆಎಲ್‌ಬಿ ರಸ್ತೆ, ಬೆಳಗ್ಗೆ 6.30ರಿಂದ 7.30 ಹಾಗೂ ಸಂಜೆ 6.30ರಿಂದ 7.30ರವರೆಗೆ.

■ **ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು** : ವಿಶ್ವ ವೈದ್ಯರ ದಿನಾಚರಣೆ ಪ್ರಯುಕ್ತ, ಡಾ.ಬಿ.ಸಿ.ರಾಯ್ ಸ್ಮರಣಾರ್ಥ ವೈದ್ಯರುಗಳಿಗೆ ಸನ್ಮಾನ, ಧನ್ವಂತರಿ ಸಂಬಂಧ ಅನುಭವಗಳ ಹಂಚಿಕೆ, ಚುಟುಕು, ಹನಿಗವನ, ಮುಕ್ತಕ, ಕವಿಗೋಷ್ಠಿ, ಲಲಿತ ಪ್ರಬಂಧ, ಗೀತಗಾಯನ, ಆಧುನಿಕ ವಚನ, ಹಾಸ್ಯ ಪ್ರಸಂಗ, ನ್ಯಾನೋ ಕತೆಗಳ ಅನಾವರಣ, ಉದ್ಘಾಟನೆ: ನಿವೃತ್ತ ವೈದ್ಯಾಧಿಕಾರಿ ಡಾ.ಎಂ.ಜಿ.ಆರ್.ಅರಸ್, ಅಧ್ಯಕ್ಷತೆ: ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಡಾ.ಬಿ.ಸಿ.ರಾಯ್ ಸ್ಮರಣಾರ್ಥ ಸನ್ಮಾನಿತರು: ಡಾ.ಜಯಶ್ರೀ, ಡಾ.ಶ್ರೀನಿವಾಸ್, ಡಾ.ಹೆಚ್.ಹನುಮಂತಪ್ಪ, ಡಾ.ನೈರುತ್ಯ, ಡಾ. ಸೌಮ್ಯ ಗುರುರಾಜ್, ಸ್ಥಳ: ನಮನ ಕಲಾ ಮಂಟಪ, ಶ್ರೀರಾಮ ಮಂದಿರದ ಹಿಂಭಾಗ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10.30ಕ್ಕೆ.

■ **ನೀಲಾಗಂಗಾ ಮಹಿಳಾ ಬಳಗ:** ಜಯಂತ್ಯುತ್ಸವ–2024 (ಬಸವ ಜಯಂತಿ, ಅಕ್ಕ ಮಹಾದೇವಿ ಜಯಂತಿ, ರೇಣುಕರ ಜಯಂತಿ, ಸಾನ್ನಿಧ್ಯ: ಪಾಂಡವಪುರ ಶ್ರೀ ಕ್ಷೇತ್ರ ಬೇಬಿ ಮಠದ ಪೀಠಾಧಿಪತಿ ಡಾ.ಶ್ರೀ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮಿಗಳು, ಮುಖ್ಯ ಅತಿಥಿ: ವರಕೋಡು ಶಿಕ್ಷ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲರಾದ ಪ್ರೊ.ದೇವರಾಜು ಪಿ.ಚಿಕ್ಕಹಳ್ಳಿ (ದೇಚಿ), ಅಧ್ಯಕ್ಷತೆ: ನೀಲಗಂಗಾ ಮಹಿಳಾ ಬಳಗದ ಅಧ್ಯಕ್ಷೆ ಶ್ರೀಮತಿ ಗೀತಾ ರಾಜಶೇಖರ್, ಸ್ಥಳ: ಜೆಎಸ್‌ಎಸ್ ಕಾನೂನು ಕಾಲೇಜು, ಕುವೆಂಪುನಗರ, ಸಂಜೆ 4 ಗಂಟೆಗೆ.

■ **ಜೆಎಸ್‌ಎಸ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಅಂಡ್ ರೀಸರ್ಚ್, ಜೆಎಸ್‌ಎಸ್ ಕಾಲೇಜ್ ಆಫ್ ಫಾರ್ಮಸಿ:** ಸಮವರ್ತನ–2.0 ಪದವೀಧರರ ಸ್ವಾಗತ–2024, ಸಾನ್ನಿಧ್ಯ: ಶಿವರಾತ್ರಿ ದೇಶಿಕೇಂದ್ರ ಮಹಾ ಸ್ವಾಮೀಜಿ, ಮುಖ್ಯ ಅತಿಥಿ: ರಾಜೀವ್ ಗಾಂಧಿ ಯುನಿವರ್ಸಿಟಿ ಆಫ್ ಹೆಲ್ತ್ ಸೈನ್ಸ್‌ನ ವೈಸ್ ಚಾನ್ಸಲರ್ ಡಾ.ಎಂ.ಕೆ.ರಮೇಶ್, ಅಧ್ಯಕ್ಷತೆ: ಜೆಎಸ್‌ಎಸ್ ಮಹಾವಿದ್ಯಾಪೀಠದ ಎಕ್ಸಿಕ್ಯೂಟಿವ್ ಸೆಕ್ರೆಟರಿ ಡಾ.ಸಿ.ಜಿ.ಬೆಟಸೂರ್ ಮಠ್, ಸ್ಥಳ: ಕಾಲೇಜು ಆವರಣ, ಮಧ್ಯಾಹ್ನ 3 ಗಂಟೆಗೆ.

■ **ಲಯನ್ಸ್ ಬ್ಲಡ್ ಸೆಂಟರ್ ಜೀವಧಾರ:** ವಿಶ್ವ ವೈದ್ಯರ ದಿನಾಚರಣೆ ಅಂಗವಾಗಿ ಜೀವ ರಕ್ಷಕರಾದ ವೈದ್ಯರಿಗೆ ನಮನ ಮತ್ತು ಜೀವರಕ್ಷಕ ವೈದ್ಯ ಪ್ರಶಸ್ತಿ ಪ್ರದಾನ ಕಾರ್ಯಕ್ರಮ, ಮುಖ್ಯ ಅತಿಥಿಗಳು: ಡಾ.ಶಿರಾಜ್ ಅಹಮದ್, ಡಾ.ಜಯಂತ್, ಡಾ.ಶುಶ್ರುತ್‌ಗೌಡ, ನಿವೃತ್ತ ತಹಸೀಲ್ದಾರ್ ಡಾ.ವಿ.ರಂಗನಾಥ್, ಸ್ಥಳ: ಲಯನ್ಸ್ ಬ್ಲಡ್ ಸೆಂಟರ್ ಜೀವಧಾರ ಕಾನ್ಫರೆನ್ಸ್ ಹಾಲ್, ಮೂರನೇ ಮಹಡಿ, ಎಂಬಿಎ ಲೇಹರ್ ಕಾಂಪ್ಲೆಕ್ಸ್, ಬೆಳಗ್ಗೆ.

ಮೈಸೂರು ಆಕಾಶವಾಣಿ




ಬೆಳಗ್ಗೆ: 6.10–ಚಿಂತನ, ಜಿ.ಎಸ್.ಗೀತಾ, 6.15–ಗೀತಾರಾಧನ, 6.35 ಮತ್ತು ಸಂಜೆ 6.10: ಅಂಚೆ–ಅಂಕನ–ಆಕಾಶವಾಣಿ ಅಂಕಣ, ಪ್ರಸ್ತುತಿ: ಡಾ.ಅಮ್ಮಸಂದ್ರ ಸುರೇಶ ಹಾಗೂ ಎಂ.ಎನ್. ವಿಜಯಲಕ್ಷ್ಮಿ, ಪ್ರಾಯೋಜಕರು: ಭಾರತೀಯ ಅಂಚೆ, ಮೈಸೂರು ವಿಭಾಗ, 6.40–ನಾನು ನ.ರತ್ನ ಬಾನುಲಿ ಸರಣಿ. ಖ್ಯಾತ ನಾಟಕಕಾರ ಹಾಗೂ ವಾಕ್ ಶ್ರವಣ ತಜ್ಞ ಡಾ.ನ.ರತ್ನ ಅವರ ಜೀವನಗಾಥೆ ಅವರದೇ ಧ್ವನಿಯಲ್ಲಿ, 6.50–ರೈತರಿಗೆ ಸಲಹೆ, 7.15–ಭಾವಗೀತೆಗಳು, ಕುವೆಂಪು ಅವರ ರಚನೆಗಳು, 9.00–ನೆನಪಿನಂಗಳ (ಧ್ವನಿ ಭಂಡಾರದಿಂದ): 1. 'ಹೊಸಗನ್ನಡ ಸಾಹಿತ್ಯದಲ್ಲಿ ಹಾಸ್ಯ' ಜಿ.ಪಿ.ರಾಜರತ್ನಂ ಅವರ ಭಾಷಣದ ಧ್ವನಿಮುದ್ರಣ, 2. 'ಸಾಹಿತ್ಯ ಮತ್ತು ನೀತಿ' ಈ ಕುರಿತು ಮಾತನಾಡಿರುವವರು ಪ್ರೊ.ಎ.ಎನ್. ಮೂರ್ತಿರಾಯರು, 10.00–ಕರ್ನಾಟಕ ಶಾಸ್ತ್ರೀಯ ಸಂಗೀತ: ವಾರುಣಿ. ಪಿ.ರಾವ್, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನೇರ ಫೋನ್ ಇನ್ ಕಾರ್ಯಕ್ರಮ, ಗೇಮ್ ಶೋ, ಪ್ರಸ್ತುತಿ: ದಿಗ್ವಿಜಯ್ ಬಿ, 12.30–ದೇವರನಾಮ, ಬಳ್ಳಾರಿ ಶೇಷಗಿರಿ ಆಚಾರ್ ಅವರ ರಚನೆಗಳು, 12.45–ನಮ್ಮ ಆರೋಗ್ಯ–ಭಾರತೀಯ ವೈದ್ಯರ ದಿನಾಚರಣೆಯ ಸಂದರ್ಭದಲ್ಲಿ 'ವೈದ್ಯರ ಕರ್ತವ್ಯ, ಜವಾಬ್ದಾರಿ ಮತ್ತು ಕ್ಷೇಮಾಭಿವೃದ್ಧಿ' ಕುರಿತು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಮನೋವೈದ್ಯಕೀಯ ವಿಭಾಗದ ಪ್ರೊಫೆಸರ್ ಹಾಗೂ ಮುಖ್ಯಸ್ಥರಾದ ಡಾ.ಬಿ.ಎನ್.ರವೀಶ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 1.20 ಭಾವಗೀತೆಗಳು–ಶಾಂತಲಾ ವಟ್ಟಂ, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ: ನಿರ್ಮಲಾ ರಾಜಶೇಖರ್–ವೀಣಾ ವಾದನ, 4.00–ನಾನು ನನ್ನ ಕಂಪನಿ ಮೈಸೂರಿನಲ್ಲಿರುವ ಸಾಂಪ್ರದಾಯಿಕ ಬೊಂಬೆಗಳ ತಯಾರಿಕಾ ಘಟಕದ ಉದ್ಯಮಿ ಲಕ್ಷ್ಮೀ ನಾಗರಾಜ್ ಹಾಗೂ ಸಂಗಡಿಗರೊಂದಿಗೆ ಮಾತುಕತೆ. ಪ್ರಸ್ತುತಿ: ಸಹನಾ 4.45–ಹಿಂದಿ ಪಾಠ, ಶಾಂತಾ. ಡಿ.ಕಿಣಿ 5.30–ಪಶುಧನ್ ಸೆ ಬೆಹತರ್ ಜೀವನ್" ಸರಣಿ, ಪ್ರಾಯೋಜಕರು: ಪಶು ಸಂಗೋಪನೆ, ಹೈನುಗಾರಿಕೆ–ಮೀನುಗಾರಿಕೆ ಸಚಿವಾಲಯ, 5.45–ನಾನು ನ.ರತ್ನ ಬಾನುಲಿ ಸರಣಿ. ಖ್ಯಾತ ನಾಟಕಕಾರ ಹಾಗೂ ವಾಕ್ ಶ್ರವಣ ತಜ್ಞ ಡಾ.ನ.ರತ್ನ ಅವರ ಜೀವನಗಾಥೆ ಅವರದೇ ಧ್ವನಿಯಲ್ಲಿ, 6.50–ಕೃಷಿರಂಗ: ಅಡಿಕೆ ಹಾಗೂ ತೆಂಗಿನ ಬೆಳೆಯಲ್ಲಿ ಸಮಗ್ರ ರೋಗ ನಿರ್ವಹಣೆ. ಈ ಕುರಿತು ಮಂಡ್ಯದ ವಿ.ಸಿ. ಫಾರಂ ವಲಯ ಕೃಷಿ ಸಂಶೋಧನಾ ಕೇಂದ್ರದ ಪ್ರಾಧ್ಯಾಪಕರಾದ ಡಾ.ವಿ.ಬಿ.ಸನತ್‌ಕುಮಾರ್ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್.ಕೇಶವಮೂರ್ತಿ, 7.45–Talk in Kannada: ಗಿಡ ನೆಡುವಿಕೆ ಹಾಗೂ ಪೋಷಣೆ. ಮಾತನಾಡುತ್ತಾರೆ: ಸುನೀಲ್ ಆಚಾರ್, 9.30–ಕರ್ನಾಟಕ ಶಾಸ್ತ್ರೀಯ ಸಂಗೀತ: ಜಿ.ಎನ್.ಬಾಲಸುಬ್ರಹ್ಮಣ್ಯಂ, 10.00–ನಾಟಕ: "ಗಡಿ ದಾಟಿದಾಗ", ರಚನೆ: ಡಾ.ಹೆಚ್.ರಾಚಪ್ಪ, ನಿರ್ವಾಣ: ಪ್ರಭುಸ್ವಾಮಿ ಮಳಿಮಠ್

ಮೈಸೂರು ಮಿತ್ರ

ಸೋಮವಾರ 1 ಜುಲೈ 2024

ಡೆಂಗ್ಯೂ ನಿಯಂತ್ರಣಕ್ಕೆ ಪ್ರತಿ ಶುಕ್ರವಾರ ಈಡಿಸ್ ಸೊಳ್ಳೆ ಲಾರ್ವಾ ಉತ್ಪತ್ತಿ ತಾಣಗಳ ನಾಶ



ವಿಶೇಷ ಚಟುವಟಿಕೆಗೆ ಆರೋಗ್ಯ ಇಲಾಖೆ ನಿರ್ಧಾರ



ಸಾರ್ವಜನಿಕರ ಸಹಕಾರ–ಸಹಭಾಗಿತ್ವ ಅಗತ್ಯ



ಕಟ್ಟಡ ನಿರ್ಮಾಣಕ್ಕಾಗಿ ಬಳಸುವ ತೊಟ್ಟಿಯಲ್ಲಿ ಶೇಖರಿಸುವ ನೀರು ವಾರಕ್ಕೂ ಹೆಚ್ಚು ಕಾಲ ಇರದಂತೆ ನೋಡಿಕೊಳ್ಳಬೇಕು. ಅಥವಾ ತೊಟ್ಟಿಯ ಮೇಲ್ಭಾಗವನ್ನು ಮುಚ್ಚಲು ಗಮನ ನೀಡಬೇಕು. ಇದು ಸಾಧ್ಯವಾಗದಿದ್ದರೆ ಗಪ್ಪಿ ಮೀನುಗಳನ್ನು ತೊಟ್ಟಿಗೆ ಬಿಟ್ಟರೆ ಅವು ಸೊಳ್ಳೆ ಉತ್ಪತ್ತಿಯಾಗದಂತೆ ತಡೆಯಲಿವೆ. ಈ ಮೀನುಗಳು ಸೊಳ್ಳೆಯ ಲಾರ್ವಗಳನ್ನು ತಿಂದು ನಿಯಂತ್ರಣ ಮಾಡಲಿವೆ ಈ ಯಾವುದೇ ಕ್ರಮ ವಹಿಸದಿದ್ದರೆ, ಸೊಳ್ಳೆಗಳ ಉತ್ಪತ್ತಿಗೆ ಇದು ಎಡೆಮಾಡಿಕೊಡಲಿದೆ. ಹಾಗಾಗಿ ಈ ಕ್ರಮಗಳನ್ನು ಕೈಗೊಳ್ಳುವ ಮೂಲಕ ಕಟ್ಟಡ ನಿರ್ಮಿಸುವವರು ಡೆಂಗ್ಯೂ ನಿಯಂತ್ರಣಕ್ಕೆ ಸಹಕಾರ ನೀಡಬೇಕು.

-ಡಾ.ಸಿ.ಸುವರ್ಣ, ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ, ಮೈಸೂರು.

ಮೈಸೂರು ಜಿಲ್ಲೆಗೆ ಸಂಬಂಧಿಸಿದಂತೆ ಈ ವರ್ಷದ ಜನವರಿಯಿಂದ ಈವರೆಗೆ 3,493 ಮಂದಿಯ ರಕ್ತ ಪರೀಕ್ಷೆ ನಡೆಸಿದ್ದು, ಈ ಪೈಕಿ 481 ಮಂದಿಯಲ್ಲಿ ಡೆಂಗ್ಯೂ ಪಾಸಿಟಿವ್ ಕಂಡುಬಂದಿದೆ. ಜೂನ್‌ನಲ್ಲಿ 1,266 ಮಂದಿಯ ರಕ್ತ ಪರೀಕ್ಷೆ ನಡೆಸಿದ್ದು, ಈ ಪೈಕಿ 140 ಮಂದಿಗೆ ಡೆಂಗ್ಯೂ ಉಂಟಾಗಿದೆ. ಚಿಕುಂಗುನ್ಯಾ ಸಂಬಂಧ ಜಿಲ್ಲೆಯಲ್ಲಿ ಈ ವರ್ಷದ ಜನವರಿಯಿಂದ ಈವರೆಗೆ 2,416 ಮಂದಿಯ ಪರೀಕ್ಷೆ ನಡೆಸಿದ್ದು, ಈ ಪೈಕಿ 84 ಮಂದಿಯಲ್ಲಿ ಚಿಕುಂಗುನ್ಯಾ ಪಾಸಿಟಿವ್ ಆಗಿದೆ.

ಡೆಂಗ್ಯೂ ಪಾಸಿಟಿವಿಟಿ ರೇಟ್ ಇಳಿಮುಖ



ಮನೆ ಮನೆಗೆ ಆಶಾ ಕಾರ್ಯಕರ್ತೆಯರು ಭೇಟಿ ನೀಡಿ, ಅರಿವು ಮೂಡಿಸುತ್ತಿದ್ದಾರೆ. ಹೊರಾವರಣದಲ್ಲಿ ನೀರು ನಿಲ್ಲುವ ಜಾಗಗಳು, ಮನೆಯ ಫ್ರೀಜ್ ಪರಿಶೀಲನೆ ಮಾಡಿಸಲಾಗುತ್ತಿದೆ. ಸೊಳ್ಳೆ ಲಾರ್ವ ಕಂಡುಬಂದಲ್ಲಿ ಕೂಡಲೇ ನಾಶಪಡಿಸಲಾಗುತ್ತಿದೆ. ಸೊಳ್ಳೆ ಕಚ್ಚುವಿಕೆಯಿಂದ ಪಾರಾಗುವ ಮೂಲಕ ಅನಾರೋಗ್ಯದಿಂದ ಮುಕ್ತರಾಗುವಂತೆ ಅರಿವು ಮೂಡಿಸಲಾಗುತ್ತಿದೆ. ಜಿಲ್ಲೆಯಲ್ಲಿ ಕಳೆದ 15 ದಿನಗಳಿಂದ ಡೆಂಗ್ಯೂ ಪಾಸಿಟಿವಿಟಿ ರೇಟ್ ಇಳಿಮುಖವಾಗಿದೆ.

-ಡಾ.ಪಿ.ಸಿ.ಕುಮಾರಸ್ವಾಮಿ, ಜಿಲ್ಲಾ ಆರೋಗ್ಯಾಧಿಕಾರಿ, ಮೈಸೂರು.



●ಪವನ್‌ಮೂರ್ತಿ ಎಂ.ಬಿ

ಮೈಸೂರು,ಜೂ.30– ರಾಜ್ಯದಲ್ಲಿ ಡೆಂಗ್ಯೂ ಜ್ವರ ಆತಂಕ ಮೂಡಿಸಿದೆ. ಈ ಹಿನ್ನೆಲೆಯಲ್ಲಿ ಸೋಂಕಿನ ನಿಯಂತ್ರಣಕ್ಕಾಗಿ ಪ್ರತಿ ಶುಕ್ರವಾರವನ್ನು ಈಡಿಸ್ ಸೊಳ್ಳೆ ಲಾರ್ವಾ ಉತ್ಪತ್ತಿ ತಾಣಗಳನ್ನು ನಾಶಪಡಿಸುವ ಚಟುವಟಿಕೆ ದಿನವೆಂದು ಆರೋಗ್ಯ ಇಲಾಖೆ ನಿರ್ಧರಿಸಿದೆ.

ಡೆಂಗ್ಯೂ ವೈರಾಣು ಹರಡುವ ಈಡಿಸ್ ಈಜಿಪ್ಟೈ ಸೊಳ್ಳೆಯು ಸಾಮಾನ್ಯವಾಗಿ ಸ್ವಚ್ಛ ನೀರಿನಲ್ಲಿ ಸಂತಾನಾಭಿವೃದ್ಧಿ ಮಾಡುತ್ತದೆ. ಹಾಗಾಗಿ ನೀರನ್ನು ಶೇಖರಿಸಿಡುವ ಸಿಮೆಂಟ್ ತೊಟ್ಟಿ, ಕಲ್ಲು ಚಪ್ಪಡಿಯಿಂದ ನಿರ್ಮಿಸಿದ ತೊಟ್ಟಿ, ಡ್ರಮ್, ಬ್ಯಾರೆಲ್, ಮಣ್ಣಿನ ಮಡಿಕೆ ಮೊದಲಾದವುಗಳನ್ನು ಸ್ವಚ್ಛಗೊಳಿಸಿ ಈ ಸೊಳ್ಳೆ ಉತ್ಪತ್ತಿ ತಡೆಗಟ್ಟಲು ಪ್ರತಿ ಶುಕ್ರವಾರದಂದು ಪರಿಣಾಮಕಾರಿ ಚಟುವಟಿಕೆಗಳನ್ನು ನಡೆಸಲು ಆರೋಗ್ಯ ಇಲಾಖೆ ತೀರ್ಮಾನಿಸಿದೆ. ಅದರಂತೆ ಮೈಸೂರು ಜಿಲ್ಲೆಯಲ್ಲಿಯೂ ಪ್ರತಿ ಶುಕ್ರವಾರ ಚಟುವಟಿಕೆ ನಡೆಸಲು ಆರೋಗ್ಯ ಇಲಾಖೆ ಈಗಾಗಲೇ ಮುಂದಾಗಿದೆ.

ರಾಜ್ಯಾದ್ಯಂತ ಪ್ರತಿ ಶುಕ್ರವಾರ ಈಡಿಸ್ ಸೊಳ್ಳೆ ಲಾರ್ವಾ ಉತ್ಪತ್ತಿ ತಾಣಗಳನ್ನು ನಾಶಪಡಿಸಲು ಪರಿಣಾಮಕಾರಿ ಚಟುವಟಿಕೆ ನಡೆಸುವ ಸಂಬಂಧ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತ ಡಿ.ರಂದೀಪ್ ಅಧಿಕೃತ ಜ್ಞಾಪನಾ ಪತ್ರ ಮುಖೇನ ವಿಶೇಷ ಆಯುಕ್ತರು (ಆರೋಗ್ಯ ಮತ್ತು ಐಟಿ), ಬಿಬಿಎಂಪಿ ಹಾಗೂ ಎಲ್ಲಾ ಜಿಲ್ಲಾಧಿಕಾರಿಗಳು ಮತ್ತು ಎಲ್ಲಾ ಜಿಪಂ ಸಿಇಓಗಳಿಗೆ ಜೂ27ರಂದು ನಿರ್ದೇಶನ ನೀಡಿದ್ದಾರೆ.

ಪ್ರತಿ ಶುಕ್ರವಾರ ಸಾರ್ವಜನಿಕರು ಸ್ವತಃ ತಮ್ಮ ಮನೆಗಳು ಹಾಗೂ ಸಿಬ್ಬಂದಿ ವರ್ಗದವರು ಕಚೇರಿಗಳು, ಶಾಲಾ ಕಾಲೇಜುಗಳು, ಇತ್ಯಾದಿಗಳಲ್ಲಿ ನೀರು ತುಂಬುವ ಪರಿಕರಗಳನ್ನು ಸ್ವಚ್ಛಗೊಳಿಸುವುದು, ಮಳೆ ನೀರು ಸಂಗ್ರಹವಾಗುವ ಘನತ್ಯಾಜ್ಯ ವಸ್ತುಗಳ ವಿಲೇವಾರಿ ಮಾಡುವ ಮೂಲಕ ಡೆಂಗ್ಯೂ ಜ್ವರ ನಿಯಂತ್ರಣ ಕ್ರಮದಲ್ಲಿ ಅತಿ ಮುಖ್ಯವಾದ ಈಡಿಸ್ ಸೊಳ್ಳೆಗಳ ಉತ್ಪತ್ತಿ ತಾಣಗಳನ್ನು ನಾಶ ಮಾಡಬಹುದು. 2024ನೇ ಸಾಲಿನ ರಾಷ್ಟ್ರೀಯ ಡೆಂಗ್ಯೂ ದಿನ (ಮೇ 16) ಹಾಗೂ ಜುಲೈ ತಿಂಗಳಲ್ಲಿ ಆಚರಿಸಲ್ಪಡುವ ಡೆಂಗ್ಯೂ ವಿರೋಧಿ ಮಾಸಾಚರಣೆಯ ಧ್ಯೇಯವಾಕ್ಯವು 'ಸಮುದಾಯದೊಂದಿಗೆ ಸೇರಿ ಡೆಂಗ್ಯೂ ಜ್ವರ ನಿಯಂತ್ರಣ' ಎಂದಾಗಿದ್ದು, ಈ ಹಿನ್ನೆಲೆಯಲ್ಲಿ ಡೆಂಗ್ಯೂ ಜ್ವರ ನಿಯಂತ್ರಣ ಕ್ರಮಗಳ ಅನುಷ್ಠಾನದಲ್ಲಿ ಸಾರ್ವಜನಿಕರನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳಲು ನಿರ್ಧರಿಸಲಾಗಿದೆ.

ಡೆಂಗ್ಯೂ ಜ್ವರ ಪ್ರಸರಣದ ಅವಧಿಯನ್ನು ಪರಿಗಣಿಸಿ ಇತರ ಇಲಾಖೆ ಹಾಗೂ ಸಾರ್ವಜನಿಕರನ್ನು ಸಕ್ರಿಯವಾಗಿ ತೊಡಗಿಸಿಕೊಂಡು ನಡೆಸುವ ಸದರಿ ಚಟುವಟಿಕೆಯನ್ನು ಎಲ್ಲಾ ಹಂತಗಳಲ್ಲೂ ಸಮರೋಪಾದಿಯಲ್ಲಿ ಅನುಷ್ಠಾನಗೊಳಿಸಬೇಕು. ಈ ಚಟುವಟಿಕೆಯನ್ನು ಅಭಿಯಾನದಂತೆ ಅನುಷ್ಠಾನಗೊಳಿಸಲು ಸೂಚಿಸಿದೆ ಎಂದು ಡಿ.ರಂದೀಪ್ ತಮ್ಮ ಪತ್ರದಲ್ಲಿ ನಿರ್ದೇಶನ ನೀಡಿದ್ದಾರೆ.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಮೈಸೂರು ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ.ಸಿ.ಸುವರ್ಣ, ಪ್ರತಿ ಶುಕ್ರವಾರ ಈಡಿಸ್ ಸೊಳ್ಳೆ ಉತ್ಪತ್ತಿ ತಾಣಗಳನ್ನು ನಾಶ ಮಾಡುವ ದಿನವಾಗಿ ಆರೋಗ್ಯ ಇಲಾಖೆ ನಿರ್ಧರಿಸಿದೆ. ಅದರಂತೆ ಇತರ ದಿನಗಳಿಗಿಂತಲೂ ಹೆಚ್ಚು ಪ್ರಮಾಣದಲ್ಲಿ ಪ್ರತಿ ಶುಕ್ರವಾರ ಸೊಳ್ಳೆ ಉತ್ಪತ್ತಿ ತಾಣಗಳ ನಾಶಪಡಿಸುವ ಚಟುವಟಿಕೆಗಳನ್ನು ನಡೆಸಲಾಗುವುದು. ಜೂ.28ರಂದು ರಾಜ್ಯಾದ್ಯಂತ ಇದಕ್ಕೆ ಚಾಲನೆ ನೀಡಲಾಗಿದೆ ಎಂದು ತಿಳಿಸಿದರು.

ಮೈಸೂರು ಜಿಲ್ಲೆಗೆ ಸಂಬಂಧಿಸಿದಂತೆ ಜಿಲ್ಲಾ ಆರೋಗ್ಯಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಈ ಕಾರ್ಯಕ್ರಮಕ್ಕೆ ಜೂ.28ರಂದೇ ಚಾಲನೆ ನೀಡಲಾಗಿದೆ. ಮೈಸೂರಿನ ಇಂದಿರಾನಗರದ ಆರೋಗ್ಯ ಕೇಂದ್ರದ ಆವರಣದಲ್ಲಿ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ ಚಾಲನೆ ನೀಡಿದ್ದಾರೆ. ಪ್ರತಿ ಶುಕ್ರವಾರ ಆರೋಗ್ಯ ಇಲಾಖೆ ನೇತೃತ್ವದಲ್ಲಿ ಸ್ಥಳೀಯ ಸಂಸ್ಥೆಗಳು, ಇನ್ನಿತರ ಇಲಾಖೆಗಳು ಹಾಗೂ ಸಾರ್ವಜನಿಕರ ಸಹಭಾಗಿತ್ವದೊಂದಿಗೆ ಈಡಿಸ್ ಸೊಳ್ಳೆ ಉತ್ಪತ್ತಿ ತಾಣಗಳನ್ನು ನಾಶಪಡಿಸುವ ಚಟುವಟಿಕೆಗಳನ್ನು ನಡೆಸಲಾಗುವುದು ಎಂದರು.

ಜೂ.28ರಂದು ಮೈಸೂರಿನ ಆಲನಹಳ್ಳಿ ಬಡಾವಣೆಯಲ್ಲಿ ಸಾರ್ವಜನಿಕರಿಗೆ ಅರಿವು ಮೂಡಿಸಲಾಯಿತು. ಅಲ್ಲದೆ, ಎನ್‌ಆರ್ ಮೊಹಲ್ಲಾದ ಸರ್ಕಾರಿ ಪ್ರೌಢಶಾಲೆಯ ಆವರಣದಲ್ಲಿ ಶಾಲೆ ಮಕ್ಕಳು ಹಾಗೂ ಶಿಕ್ಷಕರಿಗೆ ಡೆಂಗ್ಯೂ ಕುರಿತು ಜಾಗೃತಿ ಮೂಡಿಸಲಾಯಿತು. 100 ಮಕ್ಕಳಿಗೆ ಜಾಗೃತಿ ಮೂಡಿಸಿದರೆ ಅವರ ಮೂಲಕ ದೊಡ್ಡ ಸಂಖ್ಯೆಯ ಜನಸಮುದಾಯಕ್ಕೆ ಜಾಗೃತಿ ಮೂಡಲು ಸಾಧ್ಯವಿದೆ. ತಮ್ಮ ಕಚೇರಿ ಸುತ್ತಮುತ್ತ ಸೊಳ್ಳೆಗಳ ಉತ್ಪತ್ತಿ ತಾಣಗಳ ನಾಶಪಡಿಸಲು ಎಲ್ಲಾ ಸರ್ಕಾರಿ–ಖಾಸಗಿ ಕಚೇರಿ ಹಾಗೂ ಸಂಘ–ಸಂಸ್ಥೆಗಳ ಮುಖ್ಯಸ್ಥರು ಜವಾಬ್ದಾರಿ ವಹಿಸಿದರೆ ಹೆಚ್ಚು ಪರಿಣಾಮಾರಿ ಆಗಲಿದೆ ಎಂದು ತಿಳಿಸಿದರು.

ಹುಬ್ಬಳ್ಳಿ ನೇಹಾಳಂತೆ ನಿನ್ನನ್ನೂ ಸಾಯಿಸುತ್ತೇನೆ

ಯುವಕನಿಂದ ವಿದ್ಯಾರ್ಥಿನಿಗೆ ಬೆದರಿಕೆ: ದೂರು ದಾಖಲು

ಮೈಸೂರು, ಜೂ.30– ಹುಬ್ಬಳ್ಳಿಯಲ್ಲಿ ನಡೆದಂತೆ ನಿನ್ನನ್ನೂ ಚುಚ್ಚಿ ಸಾಯಿಸುವುದಾಗಿ ವಿದ್ಯಾರ್ಥಿನಿಗೆ ಬೆದರಿಕೆ ಹಾಕಿರುವ ಬಗ್ಗೆ ಮೈಸೂರಿನ ಆಲನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರಿನಲ್ಲಿ ನಾಲ್ಕೈದು ವರ್ಷಗಳಿಂದ ವಿದ್ಯಾಭ್ಯಾಸ ಮಾಡುತ್ತಿರುವ ಬೇರೆ ಜಿಲ್ಲೆಯ ಯುವತಿ, ವಿಜಯಪುರ ಮೂಲದ ವ್ಯಕ್ತಿ ಹಾಗೂ ಮೈಸೂರಿನಲ್ಲಿರುವ ಆತನ ಸ್ನೇಹಿತನ ವಿರುದ್ಧ ಹೀಗೆ ಆರೋಪಿಸಿ, ದೂರು ನೀಡಿದ್ದಾರೆ.


ಯುವತಿಗೆ ಇನ್ಸ್ಟಾಗ್ರಾಮ್‌ನಲ್ಲಿ ಪರಿಚಯವಾದ ವಿಜಯಪುರ ಮೂಲದ ವ್ಯಕ್ತಿ, ತಾನು ಇಂಜಿನಿಯರ್ ಎಂದು ಹೇಳಿಕೊಂಡು ವಿದ್ಯಾಭ್ಯಾಸದ ಬಗ್ಗೆ ಸಲಹೆ ನೀಡುತ್ತಿದ್ದ. ಕೆಲ ದಿನಗಳ ನಂತರ ಇಬ್ಬರೂ ಮೊಬೈಲ್ ನಂಬರ್ ಎಕ್ಸ್‌ಚೇಂಜ್ ಮಾಡಿಕೊಂಡು ಮೆಸೇಜ್ ಮೂಲಕ ಸಂಭಾಷಣೆ ನಡೆಸಿದ್ದರು. ಒಂದು ದಿನ ಕೆಲಸ ನಿಮಿತ್ತ ಮೈಸೂರಿಗೆ ಬಂದಿರುವುದಾಗಿ ಹಾಸ್ಟೆಲ್ ಬಳಿ ಆಕೆಯನ್ನು ಭೇಟಿಯಾಗಿದ್ದ. ಆಗಲೂ ಶಿಕ್ಷಣದ ಬಗ್ಗೆ ಸಲಹೆ ನೀಡಿ, ಆಕೆಯ ಕುಟುಂಬದ ವಿವರವನ್ನೆಲ್ಲಾ ಪಡೆದುಕೊಂಡಿದ್ದ.

ನಂತರ ದಿನಗಳಲ್ಲಿ ವಿಪರೀತ ಕಾಟ ನೀಡಲು ಶುರು ಮಾಡಿದ. ಯುವತಿಯ ಫೋನ್ ಬ್ಯುಸಿ ಬಂದರೆ 'ಯಾರೊಂದಿಗೆ ಮಾತ ನಾಡುತ್ತಿದ್ದಿಯಾ?' ಎಂದು ಗದರುತ್ತಿದ್ದ. ಆಗ ವಿಡಿಯೋ ಕಾಲ್ ಮಾಡಿ ಖಚಿತಪಡಿಸದಿದ್ದರೆ ನಿಮ್ಮ ಮನೆಯವರಿಗೆ ಇಲ್ಲಸಲ್ಲದನ್ನು ಹೇಳುವುದಾಗಿ ಬೆದರಿಸುತ್ತಿದ್ದ. ಯುವತಿ ಭಯಗೊಳ್ಳುವುದನ್ನೇ ಬಂಡವಾಳ ಮಾಡಿಕೊಂಡು ಮೈಸೂರಿಗೆ ಬಂದಾಗಲೆಲ್ಲಾ ಭೇಟಿ ಮಾಡಿ, ರೆಸ್ಟೋರೆಂಟ್, ಕಾರಂಜಿ ಕೆರೆ, ಅರಮನೆ ಬಳಿ ಕರೆದುಕೊಂಡು ಹೋಗಿ ಸುತ್ತಾಡಿಸುತ್ತಿದ್ದ.

ಆದರೆ ಕಳೆದ ಮಾರ್ಚ್‌ನಲ್ಲಿ ಮೈಸೂರಿಗೆ ಬಂದು ಕರೆ ಮಾಡಿದ್ದು, ಯುವತಿ ತಾನು ಬರುವುದಿಲ್ಲ ಎಂದಿದ್ದಾರೆ. ಅಷ್ಟಕ್ಕೆ ಕುಪಿತಗೊಂಡ ಆತ ಪಿಜಿಗೆ ಬಂದು ಗಲಾಟೆ ಮಾಡುವುದಾಗಿ ಹೆದರಿಸಿದ್ದಾನೆ ಭಯದಿಂದ ಹಾಸ್ಟೆಲ್‌ನಿಂದ ಹೊರ ಬಂದ ಯುವತಿಯನ್ನು ಫ್ರೆಷ್‌ಅಪ್ ಆಗಬೇಕೆಂದು ಹೋಟೆಲ್‌ಗೆ ಕರೆದೊಯ್ದು, ಆಕೆಯೊಂದಿಗೆ ಅನುಚಿತವಾಗಿ ವರ್ತಿಸಿದ್ದಾನೆ. ಆತನಿಂದ ತಪ್ಪಿಸಿಕೊಂಡು ಆಟೋದಲ್ಲಿ ಪಿಜಿಗೆ ಹೋದ ಯುವತಿ ಹೆದರಿಕೆಯಿಂದ ಹುಷಾರು ತಪ್ಪಿದ್ದಾರೆ. ಚಿಕಿತ್ಸೆಗೆ ದಾಖಲಾಗಿದ್ದ ಆಸ್ಪತ್ರೆಗೂ ಬಂದು ಗಲಾಟೆ ಮಾಡಿದ ವ್ಯಕ್ತಿ, ನಿನ್ನ ಕುಟುಂಬದ ಎಲ್ಲರ ನಂಬರ್ ನನ್ನ ಬಳಿ ಇವೆ. ನಮ್ಮಿಬ್ಬರಿಗೂ ಸಂಬಂಧವಿರುವುದಾಗಿ ಎಲ್ಲರಿಗೂ ಹೇಳುತ್ತೇನೆ ಎಂದು ಬೆದರಿಸಿದ್ದಾನೆ.

ಏಪ್ರಿಲ್‌ನಲ್ಲೂ ಪಿಜಿ ಬಳಿ ಒಳಗೆ ಬರಲು ಪ್ರಯತ್ನಿಸಿದಾಗ ಯುವತಿ ಅಂಗಲಾಚಿ ತಡೆದಿದ್ದಾರೆ. ನಂತರವೂ ಕರೆ ಮಾಡಿ ಚಿತ್ರಹಿಂಸೆ ನೀಡುತ್ತಿದ್ದ ಕಾರಣ ನಂಬರ್ ಬ್ಲಾಕ್ ಮಾಡುವುದಾಗಿ ತಿಳಿಸಿದ್ದಾರೆ. ಸಿಟ್ಟಿಗೆದ್ದ ಆ ವ್ಯಕ್ತಿ, ನೀನು ನನಗೆ ಸಿಗದಿದ್ದರೆ ಹುಬ್ಬಳ್ಳಿಯಲ್ಲಿ ಹುಡುಗಿಯರನ್ನು ಚುಚ್ಚಿ ಸಾಯಿಸಿದಂತೆ ನಿನ್ನನ್ನೂ ಸಾಯಿಸುವುದಾಗಿ ಬೆದರಿಕೆ ಹಾಕಿದ್ದಾನೆ. ಕಾಟ ಸಹಿಸಲಾಗದೆ ಆತನ ನಂಬರ್ ಬ್ಲಾಕ್ ಮಾಡಿದ ಯುವತಿ, ತನ್ನ ಸಹೋದರನಿಗೆ ವಿಷಯ ತಿಳಿಸಿದ್ದಾರೆ. ಕೆಲ ದಿನಗಳ ಹಿಂದೆ ಮೈಸೂರಿನಲ್ಲಿರುವ ಆತನ ಸ್ನೇಹಿತನಿಂದ ಕಾನ್ಫರೆನ್ಸ್ ಕಾಲ್ ಮಾಡಿಸಿ, ಪ್ರಾಣ ಬೆದರಿಕೆ ಹಾಕಿದ್ದಾನೆ ಎಂದು ನೊಂದ ಯುವತಿ ದೂರಿನಲ್ಲಿ ತಿಳಿಸಿದ್ದಾರೆ.

ಮೈಮುಲ್ ಎಂಡಿ ಬಿ.ಎನ್.ವಿಜಯ್‌ಕುಮಾರ್‌ಗೆ ಬೀಳ್ಕೊಡುಗೆ



ಮೈಸೂರು, ಜೂ.30(ಎಸ್‌ಬಿಡಿ)– ಮೈಸೂರು ಜಿಲ್ಲಾ ಹಾಲು ಒಕ್ಕೂಟ(ಮೈಮುಲ್)ದ ವ್ಯವಸ್ಥಾಪಕ ನಿರ್ದೇಶಕ ಬಿ.ಎನ್.ವಿಜಯ್‌ಕುಮಾರ್ ನಿವೃತ್ತರಾದ ಹಿನ್ನೆಲೆಯಲ್ಲಿ ಆಡಳಿತ ಮಂಡಳಿ ವತಿಯಿಂದ ಅವರನ್ನು ಆತ್ಮೀಯವಾಗಿ ಬೀಳ್ಕೊಡಲಾಯಿತು.

ಮೈಮುಲ್ ಆವರಣದಲ್ಲಿ ನಡೆದ ಸರಳ ಸಮಾರಂಭದಲ್ಲಿ ಆಡಳಿತ ಮಂಡಳಿ ನಿರ್ದೇಶಕರು, ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ವಿಜಯ್‌ಕುಮಾರ್ ಅವರನ್ನು ಅಭಿನಂದಿಸಿ, ನಿವೃತ್ತಿ ಜೀವನಕ್ಕೆ ಶುಭ ಹಾರೈಸಿದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಬಿ.ಎನ್.ವಿಜಯ್‌ಕುಮಾರ್, 1987ರಲ್ಲಿ ಶಿವಮೊಗ್ಗದಿಂದ ತಾಂತ್ರಿಕ ಅಧಿಕಾರಿಯಾಗಿ ವೃತ್ತಿ ಆರಂಭಿಸಿದೆ. ನಂತರ ದಾವಣಗೆರೆ, ಬಳ್ಳಾರಿ ಬಳಿಕ ಬೆಂಗಳೂರಿನ ಕೆಎಂಎಫ್‌ನಲ್ಲಿ 7 ವರ್ಷ ಕೆಲಸ ಮಾಡುವ ಅವಕಾಶ ದೊರೆಯಿತು. ಈ ವೇಳೆ ಮೈಸೂರು ಪಾಕ್ ಸೇರಿ ಅನೇಕ ಉತ್ಪನ್ನ ಹೊರತರಲಾಯಿತು. 2004ರಲ್ಲಿ ಎನ್‌ಎಂಪಿ ಗುಣ ನಿಯಂತ್ರಣ ವಿಭಾಗದಲ್ಲಿ ಕಾರ್ಯ ನಿರ್ವಹಿಸಿ, 2008ರಲ್ಲಿ ಕೆಎಂಎಫ್ ಮಾರುಕಟ್ಟೆ ವಿಭಾಗದ ಮೂಲಕ 'ಗುಡ್ ಲೈಫ್' ಉತ್ಪನ್ನವನ್ನು ಹೊರರಾಜ್ಯಕ್ಕೂ ವಿಸ್ತರಿಸುವ ಯೋಜನೆ ಜಾರಿಗೊಳಿಸಲಾಯಿತು ಎಂದು ಸ್ಮರಿಸಿಕೊಂಡರು.

ನಂತರ 2010ರಲ್ಲಿ ಚನ್ನರಾಯಪಟ್ಟಣದಲ್ಲಿ ಹೊಸ ಪ್ಲಾಂಟ್ ನಿರ್ಮಿಸಿ, ಗುಲ್ಬರ್ಗ ಡೇರಿಗೆ ಪ್ರಧಾನ ವ್ಯವಸ್ಥಾಪಕನಾಗಿ ಹಾಲಿನ ಉತ್ಪನ್ನದ ಶೇಖರಣೆ ಪ್ರಮಾಣವನ್ನು ಹೆಚ್ಚಿಸುವ ಮೂಲಕ 2 ಕೋಟಿ ರೂ. ಲಾಭ ಗಳಿಸಲಾಯಿತು. ಮಂಗಳೂರು ಮಾರುಕಟ್ಟೆಯಲ್ಲಿ, ಡೆಂಪೋಡಿಯಲ್ಲಿ ನಾಲ್ಕು ವರ್ಷ ಹೊಸ ಯಂತ್ರೋಪಕರಣಗಳ ಅಳವಡಿಸಲಾಯಿತು. ರಾಮನಗರದಲ್ಲಿ 10 ಲಕ್ಷದ ಪ್ಲಾಂಟ್ ಪ್ರಾರಂಭಿಸಲಾಯಿತು ಎಂದು ತಿಳಿಸಿದರು.

ಮೈಸೂರು ಜಿಲ್ಲಾ ಹಾಲು ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕನಾಗಿ ಕರ್ತವ್ಯ ನಿರ್ವಹಿಸಿದ್ದು ತೃಪ್ತಿ ತಂದಿದೆ. ಇಲ್ಲಿ ಶೇಖರಣೆ ಪ್ರಮಾಣ ಶೇ.7ರಿಂದ ಶೇ.8ರಷ್ಟು ಹೆಚ್ಚಳಕ್ಕೆ ಕ್ರಮವಹಿಸಿದೆ. ನಂದಿನಿ ಪಾಕ ಸ್ಪರ್ಧೆ, ಶಾಲಾ ಅರಿವು, ವಿಶ್ವ ಹಾಲು ದಿನ ಹೀಗೆ ಹಲವು ಕಾರ್ಯಕ್ರಮದ ಮೂಲಕ ನಂದಿನಿ ಉತ್ಪನ್ನಗಳ ಬಗ್ಗೆ ಅರಿವು ಮೂಡಿಸುವಲ್ಲಿ ಯಶಸ್ವಿಯಾಗಿದ್ದೇವೆ. ಹಾಲಿನ ಮಾರಾಟ 3.20 ಲಕ್ಷ ಲೀಟರ್‌ಗೆ ಹೆಚ್ಚಾಗಿದೆ. ಹೊಸ ಘಟಕಗಳ ಸ್ಥಾಪನೆಯಾಗಿವೆ ಎಂದರು.

ಮೈಮುಲ್ ಅಧ್ಯಕ್ಷ ಪಿ.ಎಂ.ಪ್ರಸನ್ನ ಮಾತನಾಡಿ, ಹಿರಿಯ ಅಧಿಕಾರಿಗಳ ಬದ್ಧತೆ, ಉತ್ತಮ ಕಾರ್ಯ ವೈಖರಿಯಿಂದ ಮೈಸೂರು ಡೇರಿ ಇಷ್ಟೆಲ್ಲಾ ಸಾಧನೆ ಮಾಡಲು ಸಾಧ್ಯವಾಗಿದೆ. ವಿಜಯ್‌ಕುಮಾರ್ ಅವರ ನಿವೃತ್ತಿ ಜೀವನವೂ ಸುಖಕರವಾಗಿರಲಿ. ಮೈಮುಲ್ ಅಭಿವೃದ್ಧಿಗೆ ಇವರ ಸಲಹೆ ನಿರಂತರವಾಗಿರಲಿ. ಮುಂಬರುವ ವ್ಯವಸ್ಥಾಪಕ ನಿರ್ದೇಶಕರು ಇವರಂತೆಯೇ ಸಾಧನೆ ಮಾಡಲಿ ಎಂದು ಆಶಿಸಿದರು.

ಕಾರ್ಯಕ್ರಮದಲ್ಲಿ ನಿರ್ದೇಶಕರಾದ ಎ.ಟಿ.ಸೋಮಶೇಖರ್, ಕೆಜಿ.ಮಹೇಶ್, ಕೆಈರೇಗೌಡ, ಕೆ.ಎಸ್.ಕುಮಾರ್, ಸಿ.ಓಂಪ್ರಕಾಶ್, ಕೆ.ಊಮಾಶಂಕರ್, ದ್ರಾಕ್ಷಾಯಣಿ ಬಸವರಾಜಪ್ಪ ಲೀಲಾ ಬಿ.ಕೆ.ನಾಗರಾಜ್, ವಿ.ಶಿವಾಮಿ ಷಣ್ಮುಗಂ, ಬಿ.ಎ.ಪ್ರಕಾಶ್ ಪಿರಿಯಾಪಟ್ಟಣ, ಬಿ.ಎನ್.ಸದಾನಂದ, ಆರ್.ಚೆಲುವರಾಜು, ಬಿ.ಗುರುಸ್ವಾಮಿ, ಬಿ.ನೀಲಾಂಬಿಕ ಮಹೇಶ್ ಕುರಹಟ್ಟಿ, ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಬೈಕ್‌ಗಳ ಮುಖಾಮುಖಿ ಡಿಕ್ಕಿ: ಸ್ವಿಗ್ಗಿ ಡೆಲಿವರಿ ಬಾಯ್ ಸಾವು; ಇಬ್ಬರಿಗೆ ಗಂಭೀರ ಗಾಯ



ಮೈಸೂರು, ಜೂ.30(ಆರ್‌ಕೆ)– ಎರಡು ಬೈಕ್‌ಗಳ ನಡುವೆ ಮುಖಾಮುಖಿ ಡಿಕ್ಕಿ ಹೊಡೆದ ಪರಿಣಾಮ ಸ್ವಿಗ್ಗಿ ಡೆಲಿವರಿ ಬಾಯ್ ಸ್ಥಳದಲ್ಲೇ ಸಾವನ್ನಪ್ಪಿದ್ದು, ಮತ್ತೊಂದು ಬೈಕ್‌ನಲ್ಲಿದ್ದ ಇಬ್ಬರು ತೀವ್ರವಾಗಿ ಗಾಯಗೊಂಡ ಘಟನೆ ಮೈಸೂರಿನ ಮಾನಸ ಗಂಗೋತ್ರಿ ರಸ್ತೆಯಲ್ಲಿ ಭಾನುವಾರ ರಾತ್ರಿ ಸಂಭವಿಸಿದೆ. ಬೋಗಾದಿ ಕಡೆಯಿಂದ ಬರುತ್ತಿದ್ದ ಪಲ್ಸರ್ ಬೈಕ್ (ಕೆಎ–05, ಜೆಆರ್–5577) ವಿರುದ್ಧ ದಿಕ್ಕಿನಲ್ಲಿ ಬಂದ ಫ್ಯಾಷನ್ ಪ್ರೋ ಬೈಕ್ (ಕೆಎ–09, ಇಯು–4908) ನಡುವೆ ಮಾನಸ ಗಂಗೋತ್ರಿ ಬಯಲು ರಂಗಮಂದಿರದ ಗೇಟ್ ಎದುರು ಮುಖಾಮುಖಿ ಡಿಕ್ಕಿಯಾಗಿದೆ. ಇದರ ಪರಿಣಾಮ ಫ್ಯಾಷನ್ ಪ್ರೋ ಬೈಕ್ ಸವಾರ ಸ್ವಿಗ್ಗಿ ಡೆಲಿವರಿ ಬಾಯ್ ಸ್ಥಳದಲ್ಲೇ ಸಾವನ್ನಪ್ಪಿದ್ದು, ಪಲ್ಸರ್‌ನಲ್ಲಿದ್ದ ಇಬ್ಬರು ತೀವ್ರವಾಗಿ ಗಾಯಗೊಂಡಿದ್ದಾರೆ. ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಸ್ಥಳಕ್ಕೆ ಭೇಟಿ ನೀಡಿದ ವಿ.ವಿ.ಪುರಂ ಸಂಚಾರ ಪೊಲೀಸ್ ಠಾಣೆ ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಡಾಕ್ಟರ್ : ನಿಮ್ಮ ಬಾಯಿಲೆ ಪತ್ತೆ ಹಚ್ಚಲಾಗುತ್ತಿಲ್ಲ. ಅದು ಬಹುಶಃ ಕುಡಿತದಿಂದ ಇರಬೇಕು.

ಗುಂಡ : ಸರಿ ಡಾಕ್ಟರ್... ನಿಮ್ಮ ನಶೆ ಇಳಿದ ಮೇಲೆ ಬರ್ತೀನಿ...

ಮೈಸೂರು ಮಿತ್ರ

ಸೋಮವಾರ, 1 ಜುಲೈ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಕಾಲವೇ ನಿರ್ಧರಿಸುವುದು ನಮ್ಮ ಬಾಳಲ್ಲಿ ಜನರ ಮೌಲ್ಯವನ್ನು.
ಕಾಲ ಕಳೆದಂತೆ ದುರ್ಜನರು ನಮ್ಮಿಂದ ದೂರವಾದರೆ,
ಸಜ್ಜನರು ನಮ್ಮ ಜೊತೆಗೆ ಶಾಶ್ವತವಾಗಿ ಉಳಿಯುತ್ತಾರೆ.

ವೇದ ಸುಳ್ಳಾದರೂ / ಗಾದೆ ಸುಳ್ಳಾಗದು { ಹಟ್ಟಿ ತುಂಬಾ ಹಸು; ಹಾಲು ಮಾತ್ರ ತುಸು

ನಿಮ್ಮ ಪತ್ರಗಳು

ದೇಶದ ನೂತನ ಕಾಯ್ದೆಗಳಿಗೆ ಸ್ವಾಗತ

ಮಾನ್ಯರೆ,

ದೇಶದ ಸಂಸತ್ತು ಈಗಾಗಲೇ ಅಂಗೀಕರಿಸಿ, ರಾಷ್ಟ್ರಪತಿಗಳ ಸಹಿ ಪಡೆದಿರುವ ಮೂರು ಪ್ರಮುಖ ಕಾಯಿದೆಗಳಾದ ಭಾರತೀಯ ನ್ಯಾಯ ಸಂಹಿತೆ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಮತ್ತು ಭಾರತೀಯ ಸಾಕ್ಷ್ಯ ಅಧಿನಿಯಮ 2023 ಜುಲೈ 1ರಿಂದ ದೇಶಾದ್ಯಂತ ಜಾರಿಗೆ ಬರಲಿದ್ದು, ಓರ್ವ ವಕೀಲನಾಗಿ ಅದಕ್ಕಿಂತ ಹೆಚ್ಚಾಗಿ ಓರ್ವ ಭಾರತೀಯ ನಾಗರೀಕನಾಗಿ ಈ ನೂತನ ಕಾಯಿದೆಗಳನ್ನು ಸ್ವಾಗತಿಸುತ್ತೇನೆ. ಈ ನೂತನ ಕಾಯಿದೆಗಳು ಕ್ರಮವಾಗಿ ಭಾರತದ ದಂಡ ಸಂಹಿತೆ, ಅಪರಾಧ ಪ್ರಕ್ರಿಯಾ ಸಂಹಿತೆ ಮತ್ತು ಭಾರತೀಯ ಸಾಕ್ಷ್ಯ ನಿಯಮದ ಬದಲಿಗೆ ಜಾರಿಗೆ ಬರುತ್ತಿದ್ದು, ಹಿಂದಿನ ಕಾಯ್ದೆಗಳ ಬಹುತೇಕ ಕಲಂಗಳನ್ನು ಹಾಗೆಯೇ ಉಳಿಸಿಕೊಳ್ಳಲಾಗಿದೆ. ಕೆಲವು ಸೆಕ್ಷನ್‌ಗಳನ್ನು ತೆಗೆದು ಹಾಕಲಾಗಿದ್ದು, ಉದಾಹರಣೆಗೆ ಭಾರತೀಯ ದಂಡ ಸಂಹಿತೆಯಲ್ಲಿದ್ದ ದೇಶ ದ್ರೋಹ ಕಾನೂನನ್ನು ರದ್ದು ಪಡಿಸಲಾಗಿದೆ.

ಭಾರತೀಯ ದಂಡ ಸಂಹಿತೆಯ ಮೊದಲ ಅಧ್ಯಾಯದಲ್ಲಿ ಐದು ಸೆಕ್ಷನ್‌ಗಳು, ಎರಡನೇ ಅದ್ಯಾಯದಲ್ಲಿ 49 ಸೆಕ್ಷನ್‌ಗಳು ಇದ್ದವು. ಪ್ರಸ್ತುತ ಭಾರತದ ನೀತಿ ಸಂಹಿತೆಯಲ್ಲಿ ಈ ಎರಡು ಅಧ್ಯಾಯಗಳನ್ನು ಸೇರಿಸಿ ಒಂದು ಅಧ್ಯಾಯ ಮಾಡಲಾಗಿದೆ. ಹಲವಾರು ಸೆಕ್ಷನ್‌ಗಳ ಮರು ವಿಂಗಡನೆ ಮಾಡಲಾಗಿದೆ. ಹೀಗಾಗಿ ಈ ಅಧ್ಯಾಯದಲ್ಲಿ ಕೇವಲ 9 ಸೆಕ್ಷನ್‌ಗಳಿವೆ. ಈ ಸಂಹಿತೆಯ ಎರಡನೆಯ ಸೆಕ್ಷನ್‌ನಲ್ಲಿಯೇ 48 ಉಪ ಸೆಕ್ಷನ್‌ಗಳನ್ನು ಮಾಡಲಾಗಿದ್ದು, ವಿವರಣೆಗಳೆಲ್ಲವೂ ಒಂದೇ ಸೆಕ್ಷನ್‌ನಲ್ಲಿ ಕೇಂದ್ರೀಕೃತವಾಗಿದೆ. ಅದೇ ರೀತಿ ಉಳಿದ ಎರಡು ಸಂಹಿತೆಗಳಲ್ಲಿಯೂ ಕೂಡ ಕೆಲವೊಂದು ಮಾರ್ಪಾಡುಗಳನ್ನು ಮಾಡಲಾಗಿದೆ.

ಯಾವುದೇ ದೇಶದ ನ್ಯಾಯಾಂಗ ವ್ಯವಸ್ಥೆ ಸದೃಢವಾಗಿರಬೇಕಾದರೆ, ಉತ್ತಮ ಕಾನೂನುಗಳ ಅವಶ್ಯಕತೆ ಇದೆ. ಭಾರತೀಯ ನ್ಯಾಯಾಂಗ ಇಡೀ ವಿಶ್ವದಲ್ಲೇ ಮಹತ್ವದ ಸ್ಥಾನ ಹೊಂದಿದೆ. ಈ ಹಿನ್ನೆಲೆಯಲ್ಲಿ ನೂತನ ನ್ಯಾಯ ಸಂಹಿತೆ ಮಹತ್ವ ಪಡೆದುಕೊಳ್ಳುತ್ತವೆ. ಜುಲೈ ಒಂದರಿಂದ ದೇಶದ ಎಲ್ಲಾ ನ್ಯಾಯಾಲಯಗಳಲ್ಲಿ ನೂತನ ನ್ಯಾಯ ಸಂಹಿತೆಗಳ ಪ್ರಕಾರ ಪ್ರಕರಣಗಳನ್ನು ದಾಖಲಿಸಬೇಕಾಗುತ್ತದೆ. ದೇಶದ ಅನೇಕ ನ್ಯಾಯಾಲಯಗಳಲ್ಲಿ ಇದರ ಬಗ್ಗೆ ಈಗಾಗಲೇ ಕಾರ್ಯಾಗಾರ ನಡೆಯುತ್ತಿದೆ. ಯಾವುದೇ ಕಾನೂನಿನ ಅಂತಿಮ ಗುರಿ ಜನರ ರಕ್ಷಣೆಯೇ ಆಗಿದೆ. ದೇಶದ ಪ್ರತಿಯೊಬ್ಬ ಪ್ರಜೆ ನೆಲದ ಕಾನೂನನ್ನು ಗೌರವಿಸುವುದು ಎಲ್ಲರ ಕರ್ತವ್ಯವಾಗಿದೆ. ನೂತನ ನ್ಯಾಯಸಂಹಿತೆಗಳಿಗೆ ಮತ್ತೊಮ್ಮೆ ಸ್ವಾಗತ.

-ಕೆ.ವಿ.ವಾಸು, ವಕೀಲರು-ನೋಟರಿ, ಮೈಸೂರು.

ಕಾಂಗ್ರೆಸ್ ಕ್ಷಮೆ ಕೇಳುವುದರಲ್ಲಿ ತಪ್ಪಿಲ್ಲ

ಮಾನ್ಯರೆ,

ತುರ್ತು ಪರಿಸ್ಥಿತಿ 50ನೇ ವರ್ಷಕ್ಕೆ ಕಾಲಿಡುತ್ತಿರುವ ಸಂದರ್ಭದಲ್ಲಿಯೇ ಲೋಕಸಭೆಯಲ್ಲಿ 18ನೇ ಲೋಕಸಭೆ ಸ್ಪೀಕರ್ ಆಗಿ ಆಯ್ಕೆಯಾದ ಓಂ ಬಿರ್ಲಾ ತುರ್ತು ಪರಿಸ್ಥಿತಿಯ ವಿರುದ್ಧ ನಿರ್ಣಯವನ್ನು ಓದಿದ್ದು ಕಾಂಗ್ರೆಸ್ ಸದಸ್ಯರನ್ನು ಕೆರಳಿಸಿತು ಎಂದು ವರದಿಯಾಗಿದೆ. ಇದರ ನಡುವೆ ಸಂಸತ್‌ನ ಆವರಣದಲ್ಲಿ ಎನ್‌ಡಿಎ ಸಂಸದರು ತುರ್ತು ಪರಿಸ್ಥಿತಿ ಜಾರಿ ಮಾಡಿ ಸಂವಿಧಾನವನ್ನು ಉಲ್ಲಂಘಿಸಿದ್ದ ಕಾರಣ ಕಾಂಗ್ರೆಸ್ ದೇಶದ ಜನರ ಕ್ಷಮೆ ಕೋರಬೇಕೆಂದು ಪ್ರತಿಭಟನೆ ನಡೆಸಿದ್ದಾರೆ. ಇದೇ ಸಂದರ್ಭದಲ್ಲಿ 10 ವರ್ಷದ ನಂತರ ವಿರೋಧ ಪಕ್ಷದ ನಾಯಕನ ಸ್ಥಾನ ಗಳಿಸಿದ ರಾಹುಲ್ ಗಾಂಧಿಯವರು, ನಾವು ಪ್ರತಿಯೊಬ್ಬ ಭಾರತೀಯನ ಪರವಾಗಿ ಸಂಸತ್ತಿನಲ್ಲಿ ಧ್ವನಿ ಎತ್ತುತ್ತೇವೆ. ಸಂವಿಧಾನ ರಕ್ಷಿಸುತ್ತೇವೆ ಎಂದು ಹೇಳಿದ್ದಾರೆ.

ಕಳೆದ ಐದು ವರ್ಷಗಳಿಂದ ಹಾಗೂ ಲೋಕಸಭಾ ಚುನಾವಣೆ ವೇಳೆಯಲ್ಲಿ ಸರ್ವಾಧಿಕಾರಿ ಆಡಳಿತ, ಸಂವಿಧಾನ ಬದಲಾವಣೆ ಮಾಡುತ್ತಾರೆ. ಸಂವಿಧಾನ ಅಪಾಯದಲ್ಲಿದೆ ಎಂದು ಸಂವಿಧಾನದ ಪ್ರತಿ ಹಿಡಿದು ಪ್ರಧಾನಿ ಮೋದಿಯವರನ್ನು ರಾಹುಲ್ ಗಾಂಧಿಯವರು ಉಗ್ರವಾಗಿ ಟೀಕೆ ಮಾಡುತ್ತಿದ್ದರು. ಆದರೆ ತುರ್ತು ಪರಿಸ್ಥಿತಿ 50ನೇ ವರ್ಷಕ್ಕೆ ಕಾಲಿಡುತ್ತಿದ್ದರೂ ಕಾಂಗ್ರೆಸ್ ಇನ್ನೂ ಈ ಬಗ್ಗೆ ದೇಶದ ಜನರ ಕ್ಷಮೆ ಕೇಳಿಲ್ಲ ಎನ್ನುವುದು, ಕಾಂಗ್ರೆಸ್ ತನ್ನ ತಪ್ಪನ್ನು ಒಪ್ಪಿಕೊಳ್ಳಲು ಸಿದ್ಧವಿಲ್ಲ ಎನ್ನುವುದು ಕಾಂಗ್ರೆಸ್‌ಗೆ ಕಪ್ಪು ಚುಕ್ಕೆಯಾಗಿದೆ.

ತುರ್ತು ಪರಿಸ್ಥಿತಿಯಿಂದ ಕಾಂಗ್ರೆಸ್ ಪಾಠವನ್ನೂ ಕಲಿತಿದೆ. ಆದರೂ ಇನ್ನೂ ಈ ಬಗ್ಗೆ ಜನರ ಕ್ಷಮೆ ಕೇಳದಿರುವುದು ಜನರಿಗೆ, ಕಾಂಗ್ರೆಸ್ ಬಗ್ಗೆ ಇನ್ನೂ ಅನುಮಾನಗಳು ಉಳಿಯುವಂತೆ ಮಾಡಿದೆ. ಕ್ಷಮೆ ಕೇಳಿ ಪ್ರಾಯಶ್ಚಿತ ಮಾಡಿಕೊಳ್ಳುವುದರಿಂದ ಕಾಂಗ್ರೆಸ್‌ನ ಘನತೆಯೇನು ಕಡಿಮೆಯಾಗುವುದಿಲ್ಲ. ಬದಲಾಗಿ ಇನ್ನೂ ಹೆಚ್ಚಿನ ಘನತೆಯನ್ನು ತಂದುಕೊಡುತ್ತದೆ. ಆದ್ದರಿಂದ ಇನ್ನೂ ಕಾಲ ಮಿಂಚಿಲ್ಲ. ಈಗಲಾದರೂ ದೇಶದ ಜನರ ಕ್ಷಮೆ ಕೇಳಿ ಪ್ರತಿವರ್ಷ ತುರ್ತು ಪರಿಸ್ಥಿತಿಯ ಕರಾಳ ದಿನದಂದು ಆಗುತ್ತಿರುವ ಮುಜುಗರದಿಂದ ಪಾರಾಗಬಹುದು. ಅಷ್ಟೇ ಅಲ್ಲ, ಮತ್ತೊಬ್ಬರನ್ನು ಸರ್ವಾಧಿಕಾರಿ ಎಂದು ಟೀಕಿಸಬೇಕಾದರೆ ನೈತಿಕತೆ ಸಿಗುವುದು ಆಗ ಮಾತ್ರವೇ. ಇದು ನೈತಿಕತೆ ಪ್ರಶ್ನೆ ಕೂಡ. **-ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.**

ಫಲಿತಾಂಶ ಕುಸಿತಕ್ಕೆ ಬಿಇಓ ಮಾತ್ರ ಹೊಣೆಯಲ್ಲ

ಮಾನ್ಯರೆ,

ಹೆಚ್.ಡಿ.ಕೋಟೆ ತಾಲೂಕಿನಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶ ಕುಸಿತ ಕಂಡಿರುವುದಕ್ಕೆ ಶಾಸಕರು ಇತ್ತೀಚೆಗೆ ನಡೆದ ಕೆಡಿಪಿ ಸಭೆಯಲ್ಲಿ ಬಿಇಓ ಅವರನ್ನು ಹೊಣೆ ಮಾಡಿರುವುದು ಸರಿಯಲ್ಲ. ಈ ಬಾರಿಯ ಪರೀಕ್ಷೆಯನ್ನು ಸಿಸಿ ಟಿವಿ ಕ್ಯಾಮೆರಾ ಮೂಲಕ ವೆಬ್ ಕಾಸ್ಟಿಂಗ್ ವ್ಯವಸ್ಥೆಯಡಿ ಕಟ್ಟುನಿಟ್ಟಾಗಿ ನಡೆಸಲಾಗಿತ್ತು. ಪರೀಕ್ಷೆಗಳು ಕ್ರಮಬದ್ಧವಾಗಿ ನಡೆದಾಗ ಪರೀಕ್ಷಾ ಫಲಿತಾಂಶಗಳು ಏರುಪೇರಾಗುವುದು ಸಹಜ.

ನಮ್ಮ ಶಿಕ್ಷಣ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಬದಲಾಯಿಸಿದರೆ ಇಂತಹ ದುರವಸ್ಥೆಗಳು ಇಲ್ಲವಾಗುತ್ತವೆ. ಕಳಪೆ ಫಲಿತಾಂಶಕ್ಕೆ ಬಿಇಓ ಒಬ್ಬರನ್ನೇ ಹೊಣೆ ಮಾಡುವುದರ ಬದಲು, ಅದಕ್ಕಿಂತ ಮುಖ್ಯವಾಗಿ ಶಾಲೆಗಳಲ್ಲಿ ಕೊಠಡಿಗಳ ಕೊರತೆ, ನೈರ್ಮಲ್ಯ ಸಮಸ್ಯೆ, ಪೀಠೋಪಕರಣ ಕೊರತೆಯಂತವನ್ನು ಕ್ಷಿಪ್ರವಾಗಿ ಬಗೆಹರಿಸಬೇಕಾಗಿದೆ. ಶಾಲೆಗೆ ಪ್ರತಿದಿನ ತಡವಾಗಿ ಬರುವ ಶಿಕ್ಷಕರು, ಬಂದರು ಸರಿಯಾಗಿ ಬೋಧನೆ ಮಾಡದೆ ಕೈಯಲ್ಲಿ ಫೋನ್ ಹಿಡಿದುಕೊಂಡು ಅಲೆಯುವ ಶಿಕ್ಷಕರು, ಮುಂದಿನ ಪರೀಕ್ಷೆಗಳಿಗೆ ಸಿದ್ಧರಾಗಲು ಬರುವ ಪ್ರತಿಭಾವಂತ ಶಿಕ್ಷಕರು... ಹೀಗೆ ಫಲಿತಾಂಶದ ಮೇಲೆ ಹಲವು ವಿಚಾರಗಳು ಪ್ರಭಾವ ಬೀರುತ್ತವೆ. (ಶಿಸ್ತಿನಿಂದ ಬೋಧನೆಯನ್ನು ಮಾಡುವ ಸಾವಿರಾರು ಶಿಕ್ಷಕರು ನಮ್ಮಲ್ಲಿ ಇದ್ದರೆ ಅವರನ್ನು ಹೊರತುಪಡಿಸಿ) ಇವೆಲ್ಲಾ ಸಮಸ್ಯೆಗಳನ್ನು ಪರಿಹರಿಸದೆ ಬರಿ ಇಲಾಖಾ ಅಧಿಕಾರಿಗಳನ್ನು ಹೊಣೆ ಮಾಡುವುದು ಸರಿಯಲ್ಲ. ಶಿಕ್ಷಣ ಇಲಾಖೆ ಈಗಾಗಲೇ ತನ್ನ ಒಡಲಲ್ಲಿ ನೂರಾರು ಸಮಸ್ಯೆಗಳನ್ನು ಗಂಟು ಹಾಕಿಕೊಂಡಿದೆ. ಆದ್ದರಿಂದ ಬರಿ ಹುತ್ತವನ್ನು ಬಡಿದರೆ ಹಾವು ಸಾಯುವುದಿಲ್ಲ. ಶಿಕ್ಷಣ ವ್ಯವಸ್ಥೆಯ ಸಮಗ್ರ ಬದಲಾವಣೆಯಿಂದ ಮಾತ್ರ ಇದಕ್ಕೆ ಪರಿಹಾರ. **-ಕೆ.ಎಸ್.ಸುರೇಶ್, ಮುಖ್ಯಶಿಕ್ಷಕ, ಸರಗೂರು.**



ಜಿ. ಎಲ್. ತ್ರಿಪುರಾಂತಕ
ಮೊ: 96866-77284

ಬೆರಗು

ಅನ್ನ ದಾರಿದ್ರ್ಯವನ್ನು ನೀಗಿಸಬಹುದು..... ಬುದ್ಧಿ ದಾರಿದ್ರ್ಯವನ್ನು ನೀಗಿಸಲಾಗದು.....!

ಮನುಷ್ಯನಿಗೆ ಭೂಮಿಯ ಮೇಲೆ ಅಸ್ತಿತ್ವವಿರುವುದು ಅವನು ನಿತ್ಯ ತಿನ್ನುವ ಅನ್ನದಿಂದ ಮಾತ್ರ. ಮೂಲಭೂತ ಅವಶ್ಯಕತೆಗಳಲ್ಲಿ ಅತ್ಯಂತ ಮುಖ್ಯವಾದುದು ಅನ್ನ. '**ಎಲ್ಲಾರೂ ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ...**' ಎಂದು ಕನಕದಾಸರು ಜೀವನ ಸತ್ಯವನ್ನು ತಿಳಿಸಿದರೆ, '**ಅನ್ನ ದೇವರಿಗಿಂತ ಇನ್ನು ದೇವರಿಲ್ಲ, ಅನ್ನಕ್ಕೆ ಮೇಲು ಹಿರಿದಿಲ್ಲ, ಲೋಕಕ್ಕೆ ಅನ್ನವೇ ಪ್ರಾಣ ಸರ್ವಜ್ಞ**' ಎಂದು ಸರ್ವಜ್ಞರು ಅನ್ನದ ಮಹತ್ವವನ್ನು ನೇರವಾಗಿ ತಿಳಿಸಿದ್ದಾರೆ. ಮನುಷ್ಯ ಎಷ್ಟೇ ದುಡಿದರೂ ಅವನು ತಿನ್ನುವುದು ಒಂದೊತ್ತಿಗೆ ಒಂದಿಡಿ ಅನ್ನ ಅಷ್ಟೆ. ಆದರೆ ಮನುಷ್ಯ ಅನ್ನ ತಿನ್ನುವುದರಲ್ಲಿಯೂ ತನ್ನ ದೊಡ್ಡಸ್ತಿಕೆ ತೋರುತ್ತಿರುವುದು ಮಾತ್ರ ದುರದೃಷ್ಟಕರ. ಮೈಮೇಲೆ ಅಗತ್ಯ ಮೀರಿ ಚಿನ್ನ ಹಾಕಿಕೊಂಡು ಜನರೆದುರು ಮೆರೆದು ತನ್ನ ದೊಡ್ಡತನ ತೋರಲಿ, ಆದರೆ ಎಲೆ ಮೇಲೆ ಅಗತ್ಯವಿರುವಷ್ಟು ತಿನ್ನದೇ, ಅನ್ನ ಬಿಟ್ಟು ಎದ್ದು ದೊಡ್ಡಸ್ತಿಕೆ ತೋರುವ ಬುದ್ಧಿ ಮಾತ್ರ ಇರದಿರಲಿ. ಅನೇಕರಿಗೆ ಅನ್ನದ ಅನಾವೃಷ್ಟಿಯಾಗಿದ್ದರೆ, ಕೆಲವರಿಗೆ ಅತಿವೃಷ್ಟಿಯಾಗಿರುತ್ತದೆ. ಏನೇ ಆದರೂ, ಎಷ್ಟೇ ಸಿರಿವಂತನಾದರೂ ಅನ್ನದ ಮುಂದೆ ಜಂಭ ತೋರುವುದು ತರವಲ್ಲ. ಡಾ.ರಾಜ್‌ಕುಮಾರ್ ಯಶಸ್ಸಿನ ಉತ್ತುಂಗದಲ್ಲಿದ್ದಾಗಲೂ ನಿತ್ಯ ತಿನ್ನುವ ಅನ್ನಕ್ಕೆ ನಮಿಸಿ ಸೇವಿಸುತ್ತಿದ್ದರೂ ಎಂದರೆ ಅವರಿಗೆ ಅನ್ನದ ಮಹತ್ವ ಎಷ್ಟು ತಿಳಿದಿತ್ತು ಎಂಬುದನ್ನು ಅರಿಯಬೇಕಲ್ಲವೇ? ಮನುಷ್ಯನಿಗೆ ಅನ್ನಕ್ಕೆ ದಾರಿದ್ರ್ಯವಾದರೆ ನೀಗಿಸಬಹುದು, ಆದರೆ ಅನ್ನವನ್ನು ವ್ಯರ್ಥ ಮಾಡುವ ಬುದ್ಧಿಗೆ ದಾರಿದ್ರ್ಯವಾದರೆ ಅದನ್ನು ನೀಗಿಸುವುದು ಕಷ್ಟ.

'ವಿದ್ಯಾವಂತರೆಲ್ಲಾ ಬುದ್ಧಿವಂತರಲ್ಲ', ಬುದ್ಧಿವಂತರಾಗಲು ವಿದ್ಯಾವಂತರೇ ಆಗಬೇಕಿಲ್ಲ. ವಿವೇಕ, ವಿನಯ, ವಿಧೇಯತೆ, ವೈಚಾರಿಕತೆ, ಪ್ರಜ್ಞಾವಂತಿಕೆಯನ್ನು ಹೊಂದಲು ಶಿಕ್ಷಣವೇ ಬೇಕಿಲ್ಲ. ವಿದ್ಯಾವಂತನಾದವನ ಬಳಿ ಇಷ್ಟೂ ಲಕ್ಷಣಗಳು ಇರಬೇಕು ಎಂಬುದು ಸಮಾಜದ ನಿರೀಕ್ಷೆ. ಆದರೆ ವಿಡಂಬನೆ ಎಂದರೆ ವಿದ್ಯಾವಂತರಲ್ಲಿ ಬಹುತೇಕರು ಅಕ್ಷರಸ್ಥರಾಗಿಯೇ ಉಳಿಯುತ್ತಿರುವುದು. ಅವರಿಗೆ ಅಕ್ಷರ ದಾರಿದ್ರ್ಯವಿರುವುದಿಲ್ಲ, ಕಲಿತ ಅಕ್ಷರದಿಂದ ಅನ್ನ ಹುಟ್ಟಿಸಿಕೊಳ್ಳುವುದರಿಂದ ಅನ್ನದ ದಾರಿದ್ರ್ಯವೂ ಇರುವುದಿಲ್ಲ. ಆದರೆ ಅನೇಕರಲ್ಲಿ 'ಅನ್ನ ಬ್ರಹ್ಮಂ' ಎಂದು ಅನ್ನವನ್ನು ದೇವರಂತೆ ಕಾಣದೆ ಅನ್ನವನ್ನು ವ್ಯರ್ಥ ಮಾಡುವ ಬುದ್ಧಿ ದಾರಿದ್ರ್ಯವಿರುವುದು ಮಾತ್ರ ದುರದೃಷ್ಟಕರ.

ತಮ್ಮ ಮನೆಯಲ್ಲಿ ತಾವು ಖರೀದಿಸಿ ತಂದ ದಿನಸಿ, ತರಕಾರಿಯಲ್ಲಿ ತಯಾರಿಸಿದ ಅಡುಗೆಯನ್ನು ಒಂದು ತುತ್ತು ವ್ಯರ್ಥವಾಗದಂತೆ ಉಣ್ಣುವ, ಹೊರಗೆ ದುಡ್ಡು ಕೊಟ್ಟು ತೆಗೆದುಕೊಳ್ಳುವ ಚಾಟ್ಸ್ ಇತ್ಯಾದಿಯನ್ನು ಒಂದಗಳು ಬಿಡದಂತೆ ತಿನ್ನುವ ಅನೇಕ ಸುಶಿಕ್ಷತರೆನಿಸಿಕೊಂಡ ಮಂದಿ ಕಂಡವರ ಸಮಾರಂಭದಲ್ಲಿ ಮಾತ್ರ ಒಬ್ಬ ವ್ಯಕ್ತಿಗೆ ಒಂದು ಹೊತ್ತಿಗೆ ಸಾಕಾಗುವಷ್ಟು ಮೃಷ್ಟಾನ್ನವನ್ನು ಎಲೆಯಲ್ಲಿ ಬಿಟ್ಟು ವ್ಯರ್ಥ ಮಾಡುವ ದುರ್ಬುದ್ಧಿ ಇರುತ್ತದೆ ಇವರನ್ನು ಪ್ರಜ್ಞಾವಂತರೆನ್ನಬೇಕಾ? ವಿದ್ಯಾವಂತರೆನ್ನಬೇಕಾ? ಎಲೆಯಲ್ಲಿ ಏನನ್ನೂ ಬಿಡದೆ ತಿಂದರೆ ನೋಡಿದವರು ದರಿದ್ರ ಎಂದು ಭಾವಿಸುತ್ತಾರೆ ಎಂಬ ಪ್ರತಿಷ್ಠೆ ಕೆಲವರಿಗೆ ಇದೆ. ಸಂಪೂರ್ಣ ಎಲೆ ಖಾಲಿ ಮಾಡುವವರಿಗೆ ದರಿದ್ರವಲ್ಲ, ಎಲೆಯಲ್ಲಿ ಬಿಟ್ಟು ಹೊರಡುವವರು ನಿಜಕ್ಕೂ ಬುದ್ಧಿ ದರಿದ್ರರು.

ಎಷ್ಟೋ ಸಮಾರಂಭಗಳಲ್ಲಿ ಊಟ ಮಾಡಿ ಏಳುವಾಗ ಎಲೆಯನ್ನು ನೋಡಿದರೆ ಕಣ್ಣಿನಲ್ಲಿ ನೀರು ಬರುತ್ತದೆ. ಸತ್ತವರ ಸಮಾಧಿ ಮೇಲೆ ಎಡೆಗೆ ಇಟ್ಟ ಎಲೆಯಂತೆ ಕಾಣುತ್ತಿರುತ್ತದೆ. ಸಮಾಧಿ ಮೇಲಿನ ಅನ್ನವನ್ನು ಕೆಲವು ಪ್ರಾಣಿಪಕ್ಷಿಗಳಾದರೂ ತಿನ್ನುವುದರಿಂದ ಅದು ವ್ಯರ್ಥವಾಗದು. ಆದರೆ ಸಮಾರಂಭದಲ್ಲಿ ಎಲೆಯಲ್ಲಿ ಬಿಡುವ ಅನ್ನ ಯಾವ ಪ್ರಾಣಿಗಳಿಗೂ ಸಿಗದೆ ಕಸದ ತೊಟ್ಟಿಯನ್ನು ಸೇರುತ್ತಿರುತ್ತದೆ. ಹೀಗೆ ಅನ್ನ ವ್ಯರ್ಥ ಮಾಡುವವರು ಬದುಕಿದ್ದು ಸತ್ತಂತೆ ಅಲ್ಲವೇ? ಸಮಾರಂಭದಲ್ಲಿ ವಿಶೇಷ ಭಕ್ಷ್ಯಭೋಜನ ಮಾಡಿಸಲು ಕಾರ್ಯದ ಮನೆಯವರು ಎಷ್ಟು ಸಾಲ ಮಾಡಿ ಸಾಮಗ್ರಿಗಳನ್ನು ತಂದಿರುತ್ತಾರೋ? ಅಡುಗೆ ಮಾಡುವ ಬಾಣಸಿಗರು ಶ್ರಮ ಹಾಗೂ ಆಸಕ್ತಿಯಿಂದ ರುಚಿಕರವಾದ ಅಡುಗೆ ತಯಾರು ಮಾಡಿರುತ್ತಾರೆ, ಅದನ್ನು ಬಡಿಸುವವರು ಸಹ ಶಿಸ್ತಿನಿಂದ ಬಡಿಸುತ್ತಿರುತ್ತಾರೆ. ಇವೆಲ್ಲಕ್ಕಿಂತ ಹೆಚ್ಚಾಗಿ ಅನ್ನವನ್ನು ಬೆಳೆವ ರೈತನ ಬೆವರು, ಅದು ಅಂಗಡಿಗೆ ತಲುಪಲು ಶ್ರಮಿಸಿರುವ ಕೈಗಳ ಶ್ರಮ, ಈ ಕಷ್ಟಕಾರ್ಪಣ್ಯಗಳೆಲ್ಲ ಅನ್ನವನ್ನು ವ್ಯರ್ಥ ಮಾಡುವ ಅಧಮರಿಗೆ ಕಾಣುವುದೇ ಇಲ್ಲವೇನೋ?

ಎಷ್ಟೋ ಜನ ಪೋಷಕರು ಎಳೆಯ ಮಕ್ಕಳಿಗೂ ಒಂದು ಎಲೆ ಹಾಕಿಸುತ್ತಾರೆ. ಅದಕ್ಕೆ ಅಗತ್ಯ ಮೀರಿ ತರಹೇವಾರಿ ಐಟಂಗಳನ್ನು ಬಡಿಸುವಾಗ ಸುಮ್ಮನಿರುತ್ತಾರೆ. ಆ ಮಕ್ಕಳೋ ಒಂದರ್ಧ ದೋಸೆಯನ್ನು, ಐಸ್‌ಕ್ರೀಂ ಅನ್ನು ತಿಂದು ಎಲ್ಲವನ್ನೂ ಎಲೆಯಲ್ಲಿಯೇ ಬಿಡುತ್ತವೆ. ಮಕ್ಕಳಿಗೆ ತಿಳಿಯುವುದಿಲ್ಲ, ಅವರನ್ನು ಹೆತ್ತವರ ಬುದ್ಧಿಗೆ ಏನಾಗಿರುತ್ತದೆ ಅರ್ಥವಾಗದು. ಇನ್ನು ನೀರಿನ ಬಾಟಲಿ ಕುರಿತು ಹೇಳುವುದಾದರೆ ದುಃಖವಾಗುತ್ತದೆ. ಒಂದು ಲೀಟರ್ ಬಾಟಲಿಯ ಶುದ್ಧ ನೀರು ತಯಾರಾಗಲು ಎರಡು ಲೀಟರ್ ನೀರು ವ್ಯರ್ಥವಾಗಿರುತ್ತದೆ. ಅಂತಹದುರಲ್ಲಿ ಒಂದೆರಡು ಗುಟುಕು ಕುಡಿದು ಇಡೀ ಬಾಟಲಿ ನೀರನ್ನು ಟೇಬಲ್‌ನಲ್ಲಿಯೇ ಬಿಟ್ಟು ಹೊರಡುತ್ತಾರೆ ಸೋ ಕಾಲ್ಡ್ ಎಜುಕೇಟೆಡ್ ಜನ. ನೀರಿನ ಮೌಲ್ಯವನ್ನೇ ಅರಿಯದವರನ್ನು ಎಜುಕೇಟೆಡ್ ಎಂದು ಹೇಗೆ ಕರೆಯಲು ಸಾಧ್ಯ ಅಲ್ಲವೇ? ಕೆಲವು ಪ್ರಜ್ಞಾವಂತರೂ ಒಂದು ಗುಟುಕನ್ನು ವ್ಯರ್ಥ ಮಾಡದೆ ಉಳಿದ ಬಾಟಲಿ ನೀರನ್ನು ಕೈಯಲ್ಲಿ ಹಿಡಿದು ಮುಂದಿನ ಸಮಯದಲ್ಲಿ ಬಳಸಲು ಕೊಂಡೊಯ್ಯುತ್ತಾರೆ. ಇವರ ನಡೆಯನ್ನು ಪಾಲಿಸುವವರು ಕಡಿಮೆ.



> ಶುಭ ಅಥವಾ ಅಶುಭ ಕಾರ್ಯ ನಿಮಿತ್ತ ವಿಶೇಷ ಭೋಜನ ಮಾಡಿಸುವವರು ತಮ್ಮ ಪ್ರತಿಷ್ಠೆಗೋಸ್ಕರ ಬರುವ ಬಂಧುಗಳು ಒಂದು ಹೊತ್ತಿಗೆ ತಿನ್ನಲು ಆಗದಂತಹ ಅತಿಯಾದ ತರಹೇವಾರಿ ತಿನಿಸುಗಳನ್ನು ಮಾಡಿಸುವುದನ್ನು ಕಡಿಮೆ ಮಾಡಬೇಕು. ಹೆಚ್ಚು ತಿನಿಸುಗಳು/ಖಾದ್ಯಗಳನ್ನು ಮಾಡಿಸಿದಲ್ಲಿ, ಬಫೆ ಮಾಡಿಸಿದರೆ ಬಂಧುಗಳು ತಮಗೆ ಇಷ್ಟವಾದುದ್ದನ್ನು ಬಡಿಸಿಕೊಳ್ಳುವ ಸಾಧ್ಯತೆ ಇರುತ್ತದೆ. ಪಂಕ್ತಿ ಭೋಜನವಾದಲ್ಲಿ ಊಟ ಬಡಿಸುವ ಹುಡುಗರು ಮೆಷಿನ್ ರೀತಿಯಲ್ಲಿ ಮಕ್ಕಳು/ವೃದ್ಧರು ಎನ್ನದೇ ಎಲ್ಲರಿಗೂ ಒಂದೇ ಪ್ರಮಾಣದಲ್ಲಿ ಬಡಿಸಿ ತಮ್ಮ ಕೆಲಸ ಮುಗಿಸುತ್ತಾರೆ. ಅವರಿಗೆ ನಿಧಾನಕ್ಕೆ ಬಡಿಸುವ ಸಂಯಮ ಇರುವುದಿಲ್ಲ. ಹಾಗೆಯೇ ಊಟಕ್ಕೆ ಕುಳಿತ ಬಂಧುಗಳು ಸಹ ಬಡಿಸುವಾಗ ಎಚ್ಚರದಿಂದ ಇದ್ದು, ತಮಗೆ ಬೇಕಾದ್ದನ್ನು ಬಡಿಸಿಕೊಂಡು, ಬಡಿಸಿಕೊಂಡ ಎಲ್ಲವನ್ನೂ ತಿಂದು ಮುಗಿಸುವುದು ಸೂಕ್ತ. ನೀರಿನ ಬಾಟಲಿ ಏನಾದರೂ ಅರ್ಧ ಖಾಲಿಯಾಗಿದ್ದರೆ, ಅದನ್ನು ವ್ಯರ್ಥ ಮಾಡದೇ ತಮ್ಮೊಟ್ಟಿಗೆ ತೆಗೆದುಕೊಂಡು ಹೋಗುವುದು ಒಳಿತು. ಎಲೆಯಲ್ಲಿ ಊಟ ಬಿಡುವ ಮುನ್ನ ಈ ಪ್ರಪಂಚದಲ್ಲಿ ಊಟವಿಲ್ಲದೇ ನಿತ್ಯ ಜನ ಸಾವನ್ನಪ್ಪುತ್ತಿದ್ದಾರೆ ಎಂಬ ಸಂಗತಿಯನ್ನು ನೆನೆಸಿಕೊಳ್ಳುವುದು ಒಳಿತು. ಇಂದು ಹಿರಿಯರಾದವರು ಮಕ್ಕಳಿಗೆ ಆಹಾರದ ಮೌಲ್ಯವನ್ನು ತಿಳಿಸುವುದು ಅತ್ಯಗತ್ಯ.

ಮನುಷ್ಯನಿಗೆ ಪ್ರತಿಷ್ಠೆ ಎಂಬುದು ನೆತ್ತಿಗೇರಿದರೆ ತಲೆ ನಿಲ್ಲುವುದಿಲ್ಲ. ಕೆಲವೊಮ್ಮೆ ಮನುಷ್ಯನು ಮನುಷ್ಯನಾಗಿಯೇ ವರ್ತಿಸುವುದಿಲ್ಲ. ಹಣ, ಅಂತಸ್ತು ಮನುಷ್ಯನ ತಲೆ ತಿರುಗುವಂತೆ ಮಾಡಿಬಿಡುತ್ತದೆ. ಅನೇಕರು ಬುದ್ಧಿಗೇಡಿ, ಹೊಣೆಗೇಡಿಗಳಂತೆ ವರ್ತಿಸುತ್ತಾರೆ. ಮನುಷ್ಯ ಎಷ್ಟೇ ಎತ್ತರಕ್ಕೆ ಏರಿದರೂ ಸಹಜವಾಗಿ ವರ್ತಿಸಬೇಕು. ಅನ್ನದ ಮುಂದೆ ತಲೆಬಾಗಬೇಕು. ಅಕ್ಕಿ ಕೊಳ್ಳುವ ಶಕ್ತಿ ಇದೆ ಎಂದಾಕ್ಷಣ ಅಕ್ಕಿ ಬೆಳೆಯುವ ಶಕ್ತಿ ಇದೆ ಎಂದರ್ಥವಲ್ಲ. ಬಿಳಿ ಅನ್ನದ ಹಿಂದೆ, ಸಿಹಿಯಾದ ತಿನಿಸುಗಳ ಹಿಂದೆ ಅನೇಕರ ಬೆವರಿನ ಶ್ರಮ ಅಡಗಿರುತ್ತದೆ. ಅನೇಕರ ಕೈ ಕೆಸರಾಗಿರುತ್ತದೆ. ಇದೆಲ್ಲವನ್ನೂ ಅರಿಯದೆ ರಾಜಾರೋಷವಾಗಿ, ಯಾವುದೇ ನಾಚಿಕೆ ಇಲ್ಲದೆ ಅನ್ನ ಬೀಸಾಡುವುದು ಅವಮಾನಕರ ಸಂಗತಿ. ಜರ್ಮನ್ ದೇಶದಲ್ಲಿ ಹೋಟೆಲ್‌ನಲ್ಲಿ ಹಣ ಕೊಟ್ಟು ಆಹಾರ ಖರೀದಿಸಿ ವ್ಯರ್ಥ ಮಾಡಿದರೆ ದಂಡ ಹಾಕುತ್ತಾರೆ ಎಂದು ಓದಿದ ನೆನಪು. ಅದೇ ರೀತಿ ನಮ್ಮ ದೇಶದಲ್ಲೂ ಹೋಟೆಲ್ ಅಷ್ಟೇ ಅಲ್ಲ ಸಭೆ ಸಮಾರಂಭಗಳಲ್ಲಿ ಆಹಾರ ವ್ಯರ್ಥ ಮಾಡುವವರಿಗೆ ದಂಡ ಹಾಕಿದರೆ ಈ ದುರಭ್ಯಾಸ ಸ್ವಲ್ಪ ಮಟ್ಟಿಗಾದರೂ ಕಡಿಮೆಯಾಗಬಹುದು. ಅನ್ನ ವ್ಯರ್ಥವಾಗುವುದು ತಪ್ಪಿಸಬಹುದು.

ಇಂದು ಆಹಾರ ಧಾನ್ಯಗಳ, ಖಾದ್ಯ ತೈಲಗಳ, ತರಕಾರಿಗಳ ಬೆಲೆ ಕಡಿಮೆ ಏನಿಲ್ಲ. ಅಂತಹುದರಲ್ಲಿ ಸಮಾರಂಭಗಳಲ್ಲಿ ಹೇಗೆ ವ್ಯರ್ಥ ಮಾಡಲು ಮನಸ್ಸು ಬರುವುದೋ ತಿಳಿಯದು. ಎಲೆಗೆ ಹಾಕಿಸಿಕೊಳ್ಳದೇ ಇದ್ದರೆ, ಉಳಿದ ಆಹಾರ ಯಾವುದೋ ವೃದ್ಧಾಶ್ರಮಕ್ಕೋ, ಅನಾಥಾಶ್ರಮಕ್ಕೋ ತಲುಪಿ ಹಸಿದ ಹೊಟ್ಟೆಗಳಿಗೆ ಒಂದೊತ್ತಿನ ಮೃಷ್ಟಾನ್ನವಾಗುತ್ತದೆ. ಊಟ ಮಾಡಿದವರಿಗೆ ಒಂದು ರೀತಿಯ ಸಂತೃಪ್ತಿಯಾದರೆ, ಅದನ್ನು ಮಾಡಿಸಿದವರಿಗೆ ಒಂದು ರೀತಿಯ ಸಾರ್ಥಕತೆ ಇರುತ್ತದೆ. ಇವುಗಳ ಪರಿವೇ ಇಲ್ಲದೆ ತಿನ್ನುವ ಅನ್ನವನ್ನು ಮಣ್ಣು ಸೇರುವಂತೆ ಮಾಡುವ ತಿಳಿಗೇಡಿಗಳ ಬುದ್ಧಿಗೆ ಏನು ಹೇಳಬೇಕೋ ತಿಳಿಯದು.

ಮನುಷ್ಯನ ಬೌದ್ಧಿಕವಾಗಿ ವಿಕಾಸವಾಗಿ ಸಮಾಜದಲ್ಲಿ ಸರಿ ತಪ್ಪು ಯಾವುದೆಂದು ಗುರುತಿಸುವ ಮಟ್ಟಕ್ಕೆ ನಾಗರಿಕತೆ ಬೆಳೆಸಿಕೊಂಡಿದ್ದು ಸಮಾಧಾನಕರ ಸಂಗತಿ. ಮನುಷ್ಯ ಹೆಚ್ಚೆಚ್ಚು ನಾಗರೀಕನಾದಂತೆಲ್ಲಾ ನಾನು, ನನ್ನಿಂದ, ನನಗಾಗಿ ಎಂಬ ಅಹಂಭಾವವನ್ನು ಬೆಳೆಸಿಕೊಂಡ ಕಾರಣ ಬುದ್ಧಿಗೆ ಮಂಕು ಬಡಿಯುತ್ತದೆ ಎನಿಸುತ್ತದೆ. ತಿಳಿಯದ ಮಕ್ಕಳಿಗೆ ಬೇಕಾದರೆ ತಿಳಿಹೇಳಬಹುದು. ಎಲ್ಲವೂ ಗೊತ್ತು ಎನ್ನುವವರಿಗೆ ಏನು ತಾನೆ ಹೇಳಲು ಸಾಧ್ಯ? ಮಕ್ಕಳು ಹಿರಿಯರು ಹೇಳುವುದನ್ನು ಮಾಡುವುದಕ್ಕಿಂತ, ಹಿರಿಯರು ಮಾಡುವುದನ್ನು ಅನುಸರಿಸುವುದು ಹೆಚ್ಚು. ಅಂತಹುದರಲ್ಲಿ ಪೋಷಕರು ಅನ್ನ ವ್ಯರ್ಥ ಮಾಡಿದರೆ, ಅವರ ಮಕ್ಕಳು ಅನ್ನ ವ್ಯರ್ಥ ಮಾಡುವಾಗ ಯಾವುದೇ ಪಾಪಪ್ರಜ್ಞೆ ಹೊಂದಿರುವುದಿಲ್ಲ. ಈ ವಿಚಾರವನ್ನು ಮನಗಾಣಬೇಕಿದೆ.

ಶುಭ ಅಥವಾ ಅಶುಭ ಕಾರ್ಯ ನಿಮಿತ್ತ ವಿಶೇಷ ಭೋಜನ ಮಾಡಿಸುವವರು ತಮ್ಮ ಪ್ರತಿಷ್ಠೆಗೋಸ್ಕರ ಬರುವ ಬಂಧುಗಳು ಒಂದು ಹೊತ್ತಿಗೆ ತಿನ್ನಲು ಆಗದಂತಹ ಅತಿಯಾದ ತರಹೇವಾರಿ ತಿನಿಸುಗಳನ್ನು ಮಾಡಿಸುವುದನ್ನು ಕಡಿಮೆ ಮಾಡಬೇಕು. ಹೆಚ್ಚು ತಿನಿಸುಗಳು/ಖಾದ್ಯಗಳನ್ನು ಮಾಡಿಸಿದಲ್ಲಿ, ಬಫೆ ಮಾಡಿಸಿದರೆ ಬಂಧುಗಳು ತಮಗೆ ಇಷ್ಟವಾದುದ್ದನ್ನು ಬಡಿಸಿಕೊಳ್ಳುವ ಸಾಧ್ಯತೆ ಇರುತ್ತದೆ. ಪಂಕ್ತಿ ಭೋಜನವಾದಲ್ಲಿ ಊಟ ಬಡಿಸುವ ಹುಡುಗರು ಮೆಷಿನ್ ರೀತಿಯಲ್ಲಿ ಮಕ್ಕಳು/ವೃದ್ಧರು ಎನ್ನದೇ ಎಲ್ಲರಿಗೂ ಒಂದೇ ಪ್ರಮಾಣದಲ್ಲಿ ಬಡಿಸಿ ತಮ್ಮ ಕೆಲಸ ಮುಗಿಸುತ್ತಾರೆ. ಅವರಿಗೆ ನಿಧಾನಕ್ಕೆ ಬಡಿಸುವ ಸಂಯಮ ಇರುವುದಿಲ್ಲ. ಹಾಗೆಯೇ ಊಟಕ್ಕೆ ಕುಳಿತ ಬಂಧುಗಳು ಸಹ ಬಡಿಸುವಾಗ ಎಚ್ಚರದಿಂದ ಇದ್ದು, ತಮಗೆ ಬೇಕಾದ್ದನ್ನು ಬಡಿಸಿಕೊಂಡು, ಬಡಿಸಿಕೊಂಡ ಎಲ್ಲವನ್ನೂ ತಿಂದು ಮುಗಿಸುವುದು ಸೂಕ್ತ. ನೀರಿನ ಬಾಟಲಿ ಏನಾದರೂ ಅರ್ಧ ಖಾಲಿಯಾಗಿದ್ದರೆ, ಅದನ್ನು ವ್ಯರ್ಥ ಮಾಡದೇ ತಮ್ಮೊಟ್ಟಿಗೆ ತೆಗೆದುಕೊಂಡು ಹೋಗುವುದು ಒಳಿತು. ಎಲೆಯಲ್ಲಿ ಊಟ ಬಿಡುವ ಮುನ್ನ ಈ ಪ್ರಪಂಚದಲ್ಲಿ ಊಟವಿಲ್ಲದೇ ನಿತ್ಯ ಜನ ಸಾವನ್ನಪ್ಪುತ್ತಿದ್ದಾರೆ ಎಂಬ ಸಂಗತಿಯನ್ನು ನೆನೆಸಿಕೊಳ್ಳುವುದು ಒಳಿತು. ಹಿರಿಯರಾದವರು ಮಕ್ಕಳಿಗೆ ಆಹಾರದ ಮೌಲ್ಯವನ್ನು ತಿಳಿಸುವುದು ಅತ್ಯಗತ್ಯ.

ಪದ ತಾಂಬೂಲ:
ಭವಿಷ್ಯದಲ್ಲಿ ಚಿನ್ನಕ್ಕೆ ಬರವಾದರೆ
ಬದುಕುವ ಸಾಧ್ಯತೆ ಐತಿ
ಅನ್ನ ನೀರಿಗೆ ಬರವಾದರೆ
ಅಳಿಯುವುದು ಮನುಷ್ಯ ಸಂತತಿ

ವಿಟಿಯು ಅಂತರ ಕಾಲೇಜು ರಾಜ್ಯ ಮಟ್ಟದ ಅಥ್ಲೆಟಿಕ್ ಕ್ರೀಡಾಕೂಟಕ್ಕೆ ತೆರೆ

ಪುರುಷರ ವಿಭಾಗದಲ್ಲಿ ಪುತ್ತೂರು ವಿಸಿಇಟಿ, ಮಹಿಳಾ ವಿಭಾಗದಲ್ಲಿ ಮಂಗಳೂರಿನ ಸಹ್ಯಾದ್ರಿ ಇಂಜಿನಿಯರಿಂಗ್ ಕಾಲೇಜು ಚಾಂಪಿಯನ್

ಮೈಸೂರು,ಜೂ.30(ಎಸ್‌ಪಿಎನ್)- ಸರ್ ಎಂ.ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಮೈಸೂರು ಪ್ರಾದೇಶಿಕ ಕೇಂದ್ರದ ವತಿಯಿಂದ ಮೈಸೂರು ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ನಡೆದ ಎರಡು ದಿನಗಳ 2023-24ನೇ ಸಾಲಿನ 25ನೇ ಅಂತರ ಕಾಲೇಜು ರಾಜ್ಯ ಮಟ್ಟದ ಅಥ್ಲೆಟಿಕ್ ಕ್ರೀಡಾಕೂಟ ಸಮಾರೋಪಗೊಂಡಿತು.



ವಿಟಿಯು ಅಂತರ ಕಾಲೇಜು ರಾಜ್ಯ ಮಟ್ಟದ ಅಥ್ಲೆಟಿಕ್ ಕ್ರೀಡಾಕೂಟದಲ್ಲಿ ಪುರುಷರ ವಿಭಾಗದಲ್ಲಿ ಪುತ್ತೂರು ವಿಸಿಇಟಿ, ಮಹಿಳಾ ವಿಭಾಗದಲ್ಲಿ ಮಂಗಳೂರಿನ ಸಹ್ಯಾದ್ರಿ ಇಂಜಿನಿಯರಿಂಗ್ ಕಾಲೇಜು ಚಾಂಪಿಯನ್ ಶಿಫ್ ಟ್ರೋಫಿ ಪಡೆದು ಸಂಭ್ರಮಿಸಿದರು.

ಪುರುಷರ ವಿಭಾಗದಲ್ಲಿ ಪುತ್ತೂರು ವಿವೇಕಾನಂದ ತಾಂತ್ರಿಕ ಕಾಲೇಜು (ವಿಸಿಇಟಿ) ತಂಡ ಎಲ್ಲಾ ವಿಭಾಗದಲ್ಲಿ ಉತ್ತಮ ಪ್ರದರ್ಶನ ನೀಡಿ, ಚಾಂಪಿಯನ್ ಶಿಫ್ ಟ್ರೋಫಿ ತಮ್ಮದಾಗಿಸಿಕೊಂಡರೆ, ಮಹಿಳಾ ವಿಭಾಗದಲ್ಲಿ ಮಂಗಳೂರು ಸಹ್ಯಾದ್ರಿ ತಾಂತ್ರಿಕ ಕಾಲೇಜು ಮಹಿಳಾ ತಂಡ ಎಲ್ಲಾ ವಿಭಾಗದಲ್ಲಿ ಉತ್ತಮ ಪ್ರದರ್ಶನ ನೀಡಿ ಚಾಂಪಿಯನ್‌ಶಿಫ್ ಟ್ರೋಫಿ ತಮ್ಮದಾಗಿಸಿಕೊಂಡಿತು.

ಎಲ್ಲಾ ವಿಭಾಗದಲ್ಲೂ ಉತ್ತಮ ಪ್ರದರ್ಶನ ನೀಡಿ, ಚಾಂಪಿಯನ್ ಶಿಪ್ ಪಡೆದ ಪುರುಷ ಮತ್ತು ಮಹಿಳಾ ತಂಡಕ್ಕೆ ಮೈಸೂರಿನ ಅಪರ ಜಿಲ್ಲಾಧಿಕಾರಿ ಡಾ.ಪಿ. ಶಿವರಾಜು ಹಾಗೂ ಮೈಸೂರು ನಗರ ಪಾಲಿಕೆ ಆಯುಕ್ತ ಅಷಾದ್ ಉರ್ ರೆಹಮಾನ್ ಷರೀಫ್ ಟ್ರೋಫಿ ವಿತರಿಸಿದರು.

ನಂತರ ಎಡಿಸಿ ಡಾ.ಪಿ.ಶಿವರಾಜು ಮಾತನಾಡಿ, ಇಂದಿನ ವಿದ್ಯಾರ್ಥಿಗಳು ಎಲ್ಲಾ ರಂಗದಲ್ಲೂ ಉತ್ತಮ ಪ್ರದರ್ಶನ ನೀಡುತ್ತಿದ್ದು, ಪಠ್ಯದ ಜೊತೆಗೆ ಪಠ್ಯೇತರ ವಿಭಾಗದಲ್ಲಿ ಉತ್ತಮ ಸಾಧನೆ ಮಾಡುತ್ತಿದ್ದಾರೆ. ಕಾಲೇಜು ಅವಧಿಯಲ್ಲಿ ಆಯೋಜನೆಗೊಳ್ಳುವ ಇಂತಹ ಕ್ರೀಡೆಗಳಲ್ಲಿ ಭಾಗವಹಿಸುವುದು ಉತ್ತಮ ಎಂದು ಸಲಹೆ ನೀಡಿದರು.

ಮೈಸೂರು ನಗರಪಾಲಿಕೆ ಆಯುಕ್ತ ಅಸಾದ್ ಉರ್ ರೆಹಮಾನ್ ಷರೀಫ್ ಮಾತನಾಡಿ, ಇಂದಿನ ಇಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿಗಳು, ಹೊಸ ಹೊಸ ಆವಿಷ್ಕಾರಗಳನ್ನು ಕಂಡು ಹಿಡಿಯಲು ಹೆಚ್ಚಿನ ಆದ್ಯತೆ ನೀಡುತ್ತಿರುವುದರ ಜೊತೆಗೆ ಕ್ರೀಡೆ, ಲಲಿತಾ ಕಲೆಗಳಲ್ಲೂ ಹೆಚ್ಚಿನ ಆದ್ಯತೆ ನೀಡುತ್ತಿರುವುದು ಉತ್ತಮ ಬೆಳವಣಿಗೆ ಎಂದರು.

ವಿಟಿಯು ಪ್ರಾದೇಶಿಕ ಕೇಂದ್ರದ ಡಾ.ಟಿ.ಪಿ. ರೇಣುಕಾಮೂರ್ತಿ ಮಾತನಾಡಿ, ಕಾಲೇಜು ದಿನಗಳಲ್ಲಿ ವಿದ್ಯಾರ್ಥಿಗಳಲ್ಲಿ ಓದಿನ ಜೊತೆಗೆ ಕ್ರೀಡೆ, ಕಲೆ ಹಾಗೂ ಇತರೆ ಪಠ್ಯೇತರ ಚಟುವಟಿಕೆಗಳಲ್ಲೂ ಭಾಗವಹಿಸಬೇಕು. ಇದರಿಂದ ಮುಂದಿನ ಜೀವನ ರೂಪಿಸಿಕೊಳ್ಳಲು ಸಹಕಾರಿ ಎಂದರು. ಈ ವೇಳೆ ಪುರುಷರ ವಿಭಾಗದ ಬೆಸ್ಟ್ ಅಥ್ಲೆಟಿಕ್ ಆಗಿ ತುಮಕೂರಿನ ಎಸ್‌ಐಟಿ ಕಾಲೇಜಿನ ವಿದ್ಯಾರ್ಥಿ ಎಂ. ಕಾರ್ತಿಕ್ ಹೊರಹಮ್ಮಿದರೆ, ಮಹಿಳೆಯರ ವಿಭಾಗದಲ್ಲಿ ಮಂಗಳೂರಿನ ಶ್ರೀನಿವಾಸ ತಾಂತ್ರಿಕ ಕಾಲೇಜಿನ ವಿದ್ಯಾರ್ಥಿನಿ ಎಂ.ಎಸ್.ಚೈತನ್ಯ ಬೆಸ್ಟ್ ಅಥ್ಲೆಟಿಕ್ ಆಗಿ ಹೊರಹೊಮ್ಮಿ ಪ್ರಶಸ್ತಿ ಪಡೆದುಕೊಂಡರು.

ಈ ವೇಳೆ ಬೆಳಗಾವಿ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಪಿ.ವಿ.ಕಡಗಡ್ಕಲ್, ವಿಟಿಯು ಪ್ರಾದೇಶಿಕ ಕೇಂದ್ರದ ಸಂಘಟನಾ ಕಾರ್ಯದರ್ಶಿ ಡಾ.ಎಂ. ಪ್ರಸನ್ನಕುಮಾರ್, ಜಿ.ಎಲ್.ರಘುನಂದನ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ದೇಶ - ವಿದೇಶ

ನಕಲಿ ದಾಖಲೆ ಸಲ್ಲಿಸಿ ಉಚಿತ ಸೀಟು ಗಿಟ್ಟಿಸಿದ್ದ ವಿದ್ಯಾರ್ಥಿಗೆ 20 ವರ್ಷ ಜೈಲು!

ಪೆನ್ಸಿಲ್ವೇನಿಯಾ (ಅಮೆರಿಕ), ಜೂ.30– ಭಾರತದ ಆರ್ಯನ್ ಆನಂದ್ (19) ಎಂಬ ಹುಡುಗ, ತನ್ನ 10ನೇ ತರಗತಿಯ ಅಂಕ ಪಟ್ಟಿ ಸೇರಿದಂತೆ ಹಲವಾರು ದಾಖಲೆಗಳನ್ನು ನಕಲಿಯಾಗಿ ಸೃಷ್ಟಿಸಿದ್ದಲ್ಲದೆ, ತನ್ನ ಬದುಕಿರುವ ಅಪ್ಪನನ್ನೇ ದಿವಂಗತರಾಗಿದ್ದಾರೆ ಎಂದು ಸಾಬೀತುಪಡಿಸಲು ನಕಲಿ ಮರಣ ಪ್ರಮಾಣ ಪತ್ರ ತಯಾರಿಸಿ ಆನಂತರ ಸಿಕ್ಕಿಬಿದ್ದಿದ್ದಾನೆ.



ಆತ ಇಷ್ಟೆಲ್ಲಾ ಮಾಡಿದ್ದು ಅಮೆರಿಕದ ಪೆನ್ಸಿಲ್ವೇನಿಯಾದಲ್ಲಿರುವ ಲೆಹೈ ವಿಶ್ವವಿದ್ಯಾಲಯದಲ್ಲಿ ಸೀಟು ಪಡೆಯಲು. ಅಲ್ಲಿ ಓದಬೇಕೆಂಬ ಉತ್ಕಟ ಬಯಕೆಯನ್ನು ಹೊಂದಿದ್ದ ಆತ, ಅಲ್ಲಿ ತಂದೆ–ತಾಯಿ ಆಸರೆ ಕಳೆದುಕೊಂಡಿದ್ದ ಮಕ್ಕಳಿಗೆ ವಿಶ್ವವಿದ್ಯಾಲಯದಿಂದ ನೀಡಲಾಗುವ ಪೂರ್ಣಪ್ರಮಾಣ ವಿದ್ಯಾರ್ಥಿ ವೇತನದಡಿ ಸೀಟು ಪಡೆಯಲು ಹುನ್ನಾರ ಮಾಡಿದ್ದ. ಆದರೆ, ಅಲ್ಲಿ ಸೀಟು ಪಡೆದು ಓದಲು ಶುರು ಮಾಡಿದ ಮೇಲೆ ಆತನ ಕುಕೃತ್ಯ ಬೆಳಕಿಗೆ ಬಂದಿದೆ. ಅದರ ಪರಿಣಾಮ, ಅಲ್ಲಿನ ನ್ಯಾಯಾಲಯ ಆತನಿಗೆ 20 ವರ್ಷ ಕಠಿಣ ಸಜೆ ವಿಧಿಸಿದೆ. ಆದರೂ, ವಿಶ್ವವಿದ್ಯಾನಿಲಯದ ಮನವಿಯ ಮೇರೆಗೆ ಭಾರತಕ್ಕೆ ಗಡೀಪಾರು ಮಾಡಲಾಗಿದೆ.

ದಿಢೀರ್ ಪ್ರವಾಹ: ಮಿಲಿಟರಿ ಟ್ಯಾಂಕರ್ ಮುಳುಗಿ ಐವರು ಯೋಧರು ಹುತಾತ್ಮ

ಲಡಾಖ್, ಜೂ.30– ಕೇಂದ್ರಾಡಳಿತ ಪ್ರದೇಶವಾದ ಲಡಾಖ್‌ನ ವಾಸ್ತವಿಕ ನಿಯಂತ್ರಣ ರೇಖೆಯ ಬಳಿ ದಿಢೀರ್ ಸಂಭವಿಸಿದ ಪ್ರವಾಹದಲ್ಲಿ ಭಾರತೀಯ ಸೇನೆಯ ಐವರು ಯೋಧರು ಹುತಾತ್ಮರಾಗಿದ್ದಾರೆ. ನ್ಯೋಮಾ–ಚುಶುಲ್ ಪ್ರದೇಶದಲ್ಲಿ ಭಾರತೀಯ ಸೇನೆಯು ತರಬೇತಿ ನಡೆಸಿ ವಾಪಸ್ ಬರುವಾಗ ಹಠಾತ್ ಪ್ರವಾಹ ಸಂಭವಿಸಿದೆ. ಲೇಹ್‌ನಿಂದ 148 ಕಿ.ಮೀ. ದೂರದಲ್ಲಿರುವ ಬೋಧಿ ನದಿಯಲ್ಲಿ ಶನಿವಾರ ಮುಂಜಾನೆ ಈ ದುರಂತ ಸಂಭವಿಸಿದೆ.



ದಿಢೀರ್ ಪ್ರವಾಹದ ಕಾರಣದಿಂದಾಗಿ, ನದಿಯಲ್ಲಿ ನೀರಿನ ಮಟ್ಟ ಹೆಚ್ಚಾಗಿದೆ. ಇದರಿಂದ ಟಿ–72 ಟ್ಯಾಂಕ್ ನದಿಯಲ್ಲಿ ಮುಳುಗಿತು. ಬಲವಾದ ಪ್ರವಾಹದಿಂದಾಗಿ ಅದರಲ್ಲಿದ್ದ ಐವರು ಸೈನಿಕರು ನದಿಯಲ್ಲಿ ಕೊಚ್ಚಿ ಹೋಗಿದ್ದಾರೆ. ಜಾಗೃತಗೊಂಡ ಸೇನೆಯು ತಕ್ಷಣ ರಕ್ಷಣಾ ಕಾರ್ಯಾಚರಣೆಯನ್ನು ಪ್ರಾರಂಭಿಸಿ, ಯೋಧರಿಗಾಗಿ ನದಿಯಲ್ಲಿ ಹುಡುಕಾಟ ನಡೆಸಿತು. ಆದರೆ, ದುರದೃಷ್ಟವಶಾತ್, ಅವರೆಲ್ಲರೂ ಅಪಘಾತದಲ್ಲಿ ಪ್ರಾಣ ಕಳೆದುಕೊಂಡಿದ್ದಾರೆ ಎಂದು ರಕ್ಷಣಾ ಅಧಿಕಾರಿಗಳು ತಿಳಿಸಿದ್ದಾರೆ. ಐದು ಜನರ ಶವಗಳನ್ನು ಗುರುತಿಸಲಾಗಿದ್ದು, ಮೃತರಲ್ಲಿ ಕಿರಿಯ ನಿಯೋಜಿತ ಅಧಿಕಾರಿ ಇದ್ದರು ಎಂದು ತಿಳಿದುಬಂದಿದೆ.

ದೌಲತ್ ಬೇಗ್ ಓಲ್ಡಿಯಲ್ಲಿ ರಾತ್ರಿ 3 ಗಂಟೆ ವೇಳೆ ಟ್ಯಾಂಕ್ ತರಬೇತಿ ನಡೆಯುತ್ತಿತ್ತು. ಇದರಿಂದಾಗಿ ಅನೇಕ ಸೇನಾ ಟ್ಯಾಂಕರ್‌ಗಳು ಅಲ್ಲಿಗೆ ಧಾವಿಸಿದ್ದವು. ಈ ಸಮಯದಲ್ಲಿ, T-72 ಟ್ಯಾಂಕ್ ಮೂಲಕ ರಾತ್ರಿಯಲ್ಲಿ ನದಿಯನ್ನು ಹೇಗೆ ದಾಟುವುದು ಎಂಬ ತರಬೇತಿ ನಡೆಯುತ್ತಿತ್ತು. ಈ ವೇಳೆ ಘಟನೆ ನಡೆದಿದೆ.

ಈ ಮದುವೆಯಲ್ಲಿ ಅತಿಥಿಗಳಿಗೇ 66 ಸಾವಿರ ರೂಪಾಯಿ ಗಿಫ್ಟ್!

ಚೀನಾ, ಜೂ.30– ಕೆಲವು ಮದುವೆಗಳು ಎಷ್ಟು ಸರಳವಾಗಿ ನಡೆಯುತ್ತವೆಯೋ, ಇನ್ನೂ ಕೆಲವು ಮದುವೆಗಳು ಅಷ್ಟೇ ವೈಭವ, ವಿಜೃಂಭಣೆಯಿಂದ ನಡೆಯುತ್ತವೆ. ಭಾರತದಲ್ಲಿ ಅದ್ಧೂರಿ ಮದುವೆಯ ಲಗ್ನಪತ್ರಿಕೆ ಸೋಶಿಯಲ್ ಮೀಡಿಯಾದಲ್ಲಿ ಸೌಂಡ್ ಮಾಡುತ್ತಿದ್ದರೆ, ಅತ್ತ ಚೀನಾದಲ್ಲಿ ಮದುವೆಗೆ ಬಂದ ಅತಿಥಿಗಳಿಗೆ 66,000 ರೂಪಾಯಿ ನಗದು ಉಡುಗೊರೆ ನೀಡಿದ್ದಾರೆ. ಈ ಅದ್ಧೂರಿ ಮದುವೆಯೊಂದರ ಝಲಕ್ ವೈರಲ್ ಆಗುತ್ತಿದೆ.



ಚೀನಾದಲ್ಲಿ ನಡೆದ ಈ ಮದುವೆಗೆ ಅತಿಥಿಗಳಿಗೆ ಐದು ದಿನಗಳ ಕಾಲ ಪಂಚತಾರಾ ಹೋಟೆಲ್‌ನಲ್ಲಿ ಉಳಿಯಲು ಅವಕಾಶ ನೀಡಲಾಗಿತ್ತು ಮತ್ತು ಅತಿಥಿಗಳಿಗೆ ಓಡಾಡಲು ರೋಲ್ಸ್ ರಾಯ್ಸ್ ಕಾರುಗಳು ಮತ್ತು ಬೆಂಟ್ಲಿ ಕಾರನ್ನು ಮೀಸಲಿಡಲಾಗಿತ್ತು. ಇನ್ನು ಮದುವೆಯ ಅಲಂಕಾರವನ್ನಂತೂ ವರ್ಣಿಸಲು ಸಾಧ್ಯವೇ ಇರಲಿಲ್ಲ. ಎಲ್ಲೆಡೆ ಮಂಟಪವು ಹೂಗಳಿಂದ ಕಂಗೊಳಿಸುತ್ತಿತ್ತು ಮತ್ತು ಬಗೆಬಗೆಯ ಆಹಾರವಿತ್ತು. ಈ ಸಂಪೂರ್ಣ ಅಲಂಕಾರ ಯುರೋಪಿಯನ್ ವೈಬ್ ನೀಡುತ್ತಿತ್ತು. ಸಾಮಾನ್ಯವಾಗಿ ಚೀನೀ ವಿವಾಹಗಳಲ್ಲಿ, ಅತಿಥಿಗಳು ನವವಿವಾಹಿತರಿಗೆ ಹಣದಿಂದ ತುಂಬಿದ ಸಾಂಪ್ರದಾಯಿಕ ಕೆಂಪು ಪಾಕೆಟ್ಸ್ ಅನ್ನು ನೀಡುವ ಸಂಪ್ರದಾಯವಿದೆ. ನಮ್ಮ ಕಡೆ ಹೇಗೆ ಮುಯ್ಯಿ ಅಂತಾ ಇಡುತ್ತೇವೆಯೋ ಹಾಗೇ ಅಲ್ಲೂ ಸ್ವಲ್ಪ ಬೇರೆ ರೀತಿ ಈ ಸಂಪ್ರದಾಯವಿದೆ. ಆದರೆ ಈ ಮದುವೆಯಲ್ಲಿ ಈ ಸಂಪ್ರದಾಯವನ್ನೇ ಉಲ್ಟಾ ಮಾಡಲಾಗಿತ್ತು.

ಅತಿಥಿಗಳು ಹೊಸ ಜೋಡಿಗೆ ಲಕೋಟೆ ಕೊಡುವ ಬದಲಾಗಿ ಮದುವೆಯ ಜೋಡಿಗಳೇ ಅತಿಥಿಗಳಿಗೆ ಹಣ ತುಂಬಿದ ಕೆಂಪು ಪಾಕೆಟ್ ಅನ್ನು ನೀಡಿದ್ದಾರೆ. ಪ್ರತಿ ಅತಿಥಿಗೆ ಕೆಂಪು ಪಾಕೆಟ್‌ನಲ್ಲಿ ಅಂದಾಜು 66,000 ರೂ. ನೀಡಲಾಗಿದೆ.

ಮಾಲ್ಡೀವ್ಸ್ ಅಧ್ಯಕ್ಷರ ಮೇಲೆ ವಾಮಾಚಾರ: ಇಬ್ಬರು ಮಂತ್ರಿಗಳ ಬಂಧನ!



ಮೊಹಮ್ಮದ್ ಮುಯಿಝು

ಮಾಲ್ಡೀವ್ಸ್, ಜೂ.30– ಮಾಲ್ಡೀವ್ಸ್ ಅಧ್ಯಕ್ಷ ಮೊಹಮ್ಮದ್ ಮುಯಿಝು ಅವರ ಮೇಲೆ ವಾಮಾಚಾರ ಮಾಡಿದ ಆರೋಪದ ಮೇಲೆ ಅಲ್ಲಿನ ಇಬ್ಬರು ಮಂತ್ರಿಗಳನ್ನು ಬಂಧಿಸಿದ್ದಾರೆ. ಪರಿಸರ ಸಚಿವಾಲಯದ ರಾಜ್ಯ ಸಚಿವ ಫಾತಿಮತ್ ಶಮ್ನಾಜ್ ಅಲಿ ಸಲೀಂ ಮತ್ತು ಅವರ ಮಾಜಿ ಪತಿ ಆದಂ ರಮೀಜ್ ಅವರನ್ನು ಪೊಲೀಸರು ಬಂಧಿಸಲಾಗಿದೆ ಎಂದು ಮಾಲ್ಡೀವ್ಸ್‌ನ ಸ್ಥಳೀಯ ಮಾಧ್ಯಮ ವರದಿಗಳು ತಿಳಿಸಿವೆ.

ಬಂಧನಕ್ಕೊಳಗಾದ ಇಬ್ಬರ ಚಟುವಟಿಕೆಗಳ ಬಗ್ಗೆ ಅನುಮಾನಗಳು ಹುಟ್ಟಿಕೊಂಡ ನಂತರ ತನಿಖೆಯನ್ನು ಪ್ರಾರಂಭಿಸಲಾಗಿತ್ತು. ಆ ನಂತರ ಮಾಲ್ಡೀವ್ಸ್ ಸರ್ಕಾರದ ಮಂತ್ರಿಗಳ ಬಂಧನ ಮಾಡಲಾಗಿದೆ. ಮಾಟ–ಮಂತ್ರದ ಸ್ವರೂಪ ಅಥವಾ ಬಂಧನಕ್ಕೆ ಕಾರಣವಾಗುವ ಪುರಾವೆಗಳ ಬಗ್ಗೆ ಪೊಲೀಸರು ನಿರ್ದಿಷ್ಟ ವಿವರಗಳನ್ನು ಬಹಿರಂಗಪಡಿಸಿಲ್ಲ. ಆದರೆ ಮಾಲ್ಡೀವ್ಸ್ ರಾಜಕೀಯದಲ್ಲಿ ಈ ಪ್ರಕರಣವು ವ್ಯಾಪಕ ಗಮನ ಸೆಳೆದಿದೆ. ಆದರೆ ಈ ಇಬ್ಬರ ಬಂಧನದ ಬಗ್ಗೆ ಅಧಿಕೃತ ಕಾರಣ ಅಥವಾ ಮಾಟ–ಮಂತ್ರದ ಆಪಾದನೆ ಬಗ್ಗೆ ಯಾವುದೇ ಮಾಹಿತಿಯನ್ನು ಹಂಚಿಕೊಳ್ಳಲು ಪೊಲೀಸರು ನಿರಾಕರಿಸಿದ್ದಾರೆ. ಶಮ್ನಾಜ್ ಅವರನ್ನು ಇತರ ಇಬ್ಬರು ವ್ಯಕ್ತಿಗಳೊಂದಿಗೆ ಬಂಧಿಸಲಾಗಿದೆ. ಅವರೆಲ್ಲರನ್ನೂ ಏಳು ದಿನಗಳ ಕಾಲ ಕಸ್ಟಡಿಯಲ್ಲಿ ಇರಿಸಲಾಗಿದೆ. ಎಂದು ಮಾಲ್ಡೀವಿಯನ್ ನ್ಯೂಸ್ ಪೋರ್ಟಲ್ ಸನ್ ವರದಿ ಮಾಡಿದೆ.

ನಿಧನ

ಶತಾಯುಷಿ ಎನ್.ಎಸ್.ಮಲ್ಲೇಗೌಡ



ಮೈಸೂರು, ಜೂ.30– ಕೆ.ಆರ್.ನಗರ ತಾಲೂಕು, ಮಿರ್ಲೆ ಹೋಬಳಿ ನಾಟನಹಳ್ಳಿ ಗ್ರಾಮದ ಶತಾಯುಷಿ ಎನ್.ಎಸ್.ಮಲ್ಲೇಗೌಡ(ಕರಿಯಣ್ಣ) ಅವರು ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಭಾನುವಾರ ನಿಧನರಾದರು.

ಇವರು ಮಕ್ಕಳು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮಲ್ಲೇಗೌಡರ ಪಾರ್ಥಿವ ಶರೀರವನ್ನು ಸಂಜೆವರೆಗೆ ಅವರ ಪುತ್ರಿ ಜಯಕ್ಕ ಅವರ ಮೈಸೂರು ನಿವಾಸದಲ್ಲಿಟ್ಟು, ನಂತರ ಸ್ವಗ್ರಾಮಕ್ಕೆ ಕೊಂಡೊಯ್ಯಲಾಯಿತು. ಸೋಮವಾರ ಸ್ವಗ್ರಾಮದಲ್ಲೇ ಅಂತ್ಯಸಂಸ್ಕಾರ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನೆಲ್ಲಮಕ್ಕಡ ಶೀಲಾ



ಮೈಸೂರು, ಜೂ.30– ಮೈಸೂರಿನ ವಿವೇಕಾನಂದ ನಗರದಲ್ಲಿರುವ ಭರಣಿ ಆರ್ಟ್ಸ್ ಗ್ಯಾಲರಿಯ ಕಾವೇರಪ್ಪ ಅವರ ಪತ್ನಿ, ನೆಲ್ಲಮಕ್ಕಡ ಶೀಲಾ (ತಾಮನೆ ಕುಲ್ಲಚಂಡ) ಅವರು ಇಂದು (ಭಾನುವಾರ) ನಿಧನರಾದರು.

ಅವರಿಗೆ 71 ವರ್ಷ ವಯಸ್ಸಾಗಿತ್ತು. ಮೃತರು ಪತಿ, ಪುತ್ರ, ಪುತ್ರಿ, ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಸೋಮವಾರ) ಮಧ್ಯಾಹ್ನ 12 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪ್ರಧಾನಮಂತ್ರಿ ಫಸಲ್ ಭೀಮಾ ಯೋಜನೆಯಡಿ ನೋಂದಣಿ

ಮೈಸೂರು: ಮುಂಗಾರು ಹಂಗಾಮಿನಲ್ಲಿ ವಿವಿಧ ಬೆಳೆಗಳಿಗೆ ನಿಗದಿಪಡಿಸಲಾಗಿರುವ ವಿಮಾ ಮತ್ತು ರೈತರ ವಿಮಾ ಕಂತಿನ ವಿವರವನ್ನು ಬಿಡುಗಡೆ ಮಾಡಲಾಗಿದೆ.

ಟೊಮ್ಯಾಟೋ ಬೆಳೆಗೆ ಪ್ರತಿ ಹೆಕ್ಟೇರ್‌ಗೆ ವಿಮಾ ಮೊತ್ತ ರೂ.1,41,500 ಹಾಗೂ ರೈತರು ಪಾವತಿಸಬೇಕಾದ ಪ್ರೀಮಿಯಂ ಮೊತ್ತ ಪ್ರತಿ ಹೆಕ್ಟೇರ್‌ಗೆ ರೂ.7075 ಗಳಿದ್ದು, ಜು.15 ನೋಂದಣಿಗೆ ಕೊನೆಯ ದಿನಾಂಕವಾಗಿದೆ. ಅರಿಶಿಣ ಬೆಳೆಗೆ ರೂ.1,42,250 ಗಳಿದ್ದು, ರೈತರು ಪಾವತಿಸಬೇಕಾದ ಪ್ರೀಮಿಯಂ ಮೊತ್ತ ಪ್ರತಿ ಹೆಕ್ಟೇರ್‌ಗೆ ರೂ.7112.50 ಗಳಿದ್ದು, ನೋಂದಣಿಗೆ ಜು.31 ಕೊನೆಯ ದಿನಾಂಕವಾಗಿದೆ. ಎಲೆಕೋಸು ಬೆಳೆಗೆ ರೂ.75,500 ಹಾಗೂ ರೈತರು ಪಾವತಿಸಬೇಕಾದ ಪ್ರೀಮಿಯಂ ಮೊತ್ತ ಪ್ರತಿ ಹೆಕ್ಟೇರ್‌ಗೆ ರೂ.3775 ಗಳಿದ್ದು ಜುಲೈ 15 ಕೊನೆಯ ದಿನಾಂಕವಾಗಿದೆ. ಆಲೂಗಡ್ಡೆ ಬೆಳೆಗೆ ವಿಮಾ ಮೊತ್ತ ಪ್ರತಿ ಹೆಕ್ಟೇರ್‌ಗೆ ರೂ.72,250 ಹಾಗೂ ರೈತರು ಪಾವತಿಸಬೇಕಾದ ಪ್ರೀಮಿಯಂ ಮೊತ್ತ ಪ್ರತಿ ಹೆಕ್ಟೇರ್‌ಗೆ ರೂ.3612.50 ಗಳಿದ್ದು, ನೋಂದಣಿಗೆ ಜು.15 ಕೊನೆಯ ದಿನಾಂಕವಾಗಿದೆ. ವಿಮಾ ಯೋಜನೆಗೆ ಒಳಪಡಲು ದಾಖಲೆಯೊಂದಿಗೆ ಬ್ಯಾಂಕ್/ಡಿಜಿಟಲ್ ಸೇವಾ ಕೇಂದ್ರ / ಸಾಮಾನ್ಯ ಸೇವಾ ಕೇಂದ್ರ ಅಥವಾ ಗ್ರಾಮ ಒನ್‌ಗಳಲ್ಲಿ ನೋಂದಣಿ ಮಾಡಿಕೊಳ್ಳಬಹುದು.

ಮಾಹಿತಿಗಾಗಿ ಮೈಸೂರು ಜಿಪಂನ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ದೂ.ಸಂ: 0821–2430450 ಅಥವಾ 9844364293, ತಾಲ್ಲೂಕುಗಳಾದ ನಂಜನಗೂಡು ದೂ.ಸಂ: 08221–226201/7899130113, ಕೆ.ಆರ್.ನಗರ ದೂ.ಸಂ: 08223–262791/8310552021, ಟಿ.ನರಸೀಪುರ ದೂ.ಸಂ: 08227–260086/9945651056, ಹುಣಸೂರು ದೂ.ಸಂ: 08222–252447/9964316665, ಹೆಚ್.ಡಿ. ಕೋಟೆ ದೂ.ಸಂ:08228–255261/9900227393, ಪಿರಿಯಾಪಟ್ಟಣ ದೂ.ಸಂ:08223–273535/9844358044ನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾದಬ್ರಹ್ಮ ಡಾ.ಹಂಸಲೇಖಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಪ್ರದಾನ

ಚಂದನವನದ ಮೆರಗು ಹೆಚ್ಚಿಸಿದವರು ಡಾ.ರಾಜ್, ರವಿಚಂದ್ರನ್: ಹಂಸಲೇಖ ಬಣ್ಣನೆ

ಮಂಡ್ಯ,ಜೂ.30– ಕನ್ನಡ ಚಲನಚಿತ್ರ ರಂಗ ಆರಂಭದ ದಿನಗಳಲ್ಲಿ ಏನೇನೋ ಲೋಪಗಳಿದ್ದವು. ಆದರೆ ಅವುಗಳನ್ನೆಲ್ಲಾ ಬದಿಗೊತ್ತಿ ಚಂದನವನದ ಮೆರಗನ್ನು ಹೆಚ್ಚಿಸಿದವರು ವರನಟ ಡಾ.ರಾಜ್‌ಕುಮಾರ್ ಹಾಗೂ ವಿ.ರವಿಚಂದ್ರನ್ ಎಂದು ಖ್ಯಾತ ಚಲನಚಿತ್ರ ನಿರ್ದೇಶಕ ನಾದಬ್ರಹ್ಮ ಡಾ.ಹಂಸಲೇಖ ಬಣ್ಣಿಸಿದರು.

ಭಾನುವಾರ ನಗರದ ರೈತ ಸಭಾಂಗಣದಲ್ಲಿ ಕರ್ನಾಟಕ ಸಂಘದ ವತಿಯಿಂದ ನಡೆದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅವರು, ಕನ್ನಡ ಚಿತ್ರರಂಗದ ಆರಂಭದ ದಿನಗಳಲ್ಲಿ ತಂತ್ರಜ್ಞಾನ ಇರಲಿಲ್ಲ. ಎಲ್ಲದಕ್ಕೂ ಮದ್ರಾಸ್‌ಗೆ ಹೋಗುವ ಕಾಲವದು. ಆದರೆ ಕಾಲಕಳೆದಂತೆ ನೃತ್ಯಗಾರರು, ಸಾಹಸ ನಿರ್ದೇಶಕರು, ಕ್ಯಾಮರಾಮನ್‌ಗಳು ಇನ್ನಿತರೆ ಚಿತ್ರರಂಗಕ್ಕೆ ಅವಶ್ಯಕವಾದ ತಂತ್ರಜ್ಞರು ಹಾಗೂ ಅದಕ್ಕೆ ಬೇಕಾದ ಸಲಕರಣೆಗಳು ನಮ್ಮಲ್ಲೇ ಸಿಗುವಂತಾದವು. ಈ ರೀತಿ ಚಂದವನದ ಮೆರುಗನ್ನು ಡಾ.ರಾಜ್ ಮತ್ತು ರವಿಚಂದ್ರನ್ ಹೆಚ್ಚಿಸಿದರು ಎಂದು ಹೇಳಿದರು.

ನಾನು ಜನ ಕೇಂದ್ರಿತ ಸಂಗೀತ ನಿರ್ದೇಶಕನಾಗಿದ್ದು, ನನ್ನ ಧಮನಿಗಳಲ್ಲಿ ಬುದ್ಧ, ಬಸವ, ಅಂಬೇಡ್ಕರ್ ಹರಿಯುತ್ತಿದ್ದಾರೆ. ಸಿನಿಮಾ ಪ್ರಪಂಚದಲ್ಲಿ ತಮಾಷೆ, ಹಾಡು, ಐಟಂ ನೃತ್ಯಗಳು ಹಾಗೂ ಮನರಂಜನೆ ಕೇಂದ್ರೀಕೃತವಾಗಿರುತ್ತದೆ. ಅಲ್ಲಿ ಎಲ್ಲಾ ವಿಚಾರ ಹೇಳಲು ಆಗಲ್ಲ. ಆದರೆ ನಾನು ಈ ರಂಜನೆಯಲ್ಲಿ ಚಿಂತನೆ ಇಟ್ಟುಕೊಂಡಿರುವ ವ್ಯಕ್ತಿ ಎಂದು ಅಭಿಪ್ರಾಯಿಸಿದರು.

ಹಾಡು ಮಾತಿಗೆ ಗೌರವ ತಂದುಕೊಡಬೇಕೆಂದು ಹಾಡು ಮಾತಿನ ಹಾಡುಗಾರನಾಗಿರುವ ನನಗೆ ನಮ್ಮ ಚಿತ್ರರಂಗ ಇಷ್ಟು ಎತ್ತರಕ್ಕೆ ಬೆಳೆಯುತ್ತಿರುವುದು ಸಂತಸ ತಂದಿದೆ. ಬೆಂಗಳೂರಿನಲ್ಲಿ 500 ರೆಕಾರ್ಡಿಂಗ್ ಸ್ಟುಡಿಯೋಗಳು, 1000 ವಾದ್ಯಗಾರರು ಸೇರಿದಂತೆ ಅನೇಕ ರೀತಿಯ ಸಿನಿ ತಂತ್ರಜ್ಞಾನ ಬೆಳೆಯುತ್ತಿದೆ. ನಮ್ಮ ಹಠ ಚಂದನವನವನ್ನು ಗಟ್ಟಿಗೊಳಿಸುತ್ತಿದ್ದು, ದೇಸಿ ಸಂಗೀತಕ್ಕೆ ನಾವು ಶಕ್ತಿ ತುಂಬಬೇಕು ಎಂದರು.

> **ನಾನು ಡಾ.ರಾಜ್‌ಕುಮಾರ್ ಸಿದ್ಧಾಂತದಲ್ಲಿ ನಡೆದುಕೊಂಡು ಬಂದವನು. ಕಲೆ, ಸಂಗೀತ ಎಲ್ಲರಿಗೂ ಬೇಕೆಂಬ ಡಾ.ರಾಜ್ ಆದರ್ಶವನ್ನು ಮೈಗೂಡಿಸಿಕೊಂಡಿದ್ದೇನೆ. ಕೆವಿಶಂಕರಗೌಡರು ಮೊದಲ ಪ್ರಶಸ್ತಿ ಆರಂಭಿಸಿದಾಗ ಅವರ ಪ್ರಶಸ್ತಿಯನ್ನು ನಾನೇ ಪಡೆದೆ. ನಾನು ಅವರ ಪರಮ ಅಭಿಮಾನಿಯಾಗಿದ್ದು, ಕಬ್ಬಿನ ಹಾಲು, ಹಸಿರು ಶಾಲು, ವಿದ್ಯಾಸಂಸ್ಥೆಗಳು ಮಂಡ್ಯದಲ್ಲಿ ಆರಂಭವಾಗಿದ್ದೆ ಜಿಲ್ಲೆ ಕಟ್ಟಿದ ಹಲವು ಮಹನೀಯರಿಂದ. ಮಹನೀಯರ ಆದರ್ಶಗಳು ನಮಗೆ ಮಾರ್ಗದರ್ಶನವಾಗಬೇಕು.....ಡಾ.ಹಂಸಲೇಖ**

ನಿತ್ಯ ಸಚಿವ ಕೆ.ವಿ.ಶಂಕರಗೌಡರು ನಾಟಕ, ಕಲೆ ಮೂಲಕ ಮಂಡ್ಯ ಜಿಲ್ಲೆಯನ್ನು ಕಟ್ಟಿದರು. ಹಾಡಿನಿಂದ ಮಂಡ್ಯ ಜನತೆಯನ್ನು ರಂಜಿಸಿ, ಚಿಂತಿಸಿ, ಒಟ್ಟುಗೂಡಿಸುವ ಕೆಲಸವನ್ನು ಮಾಡಬೇಕೆಂಬ ದೃಷ್ಟಿಯಿಂದ ಮಂಡ್ಯದಲ್ಲಿ ಅನನ್ಯ ಸಂಸ್ಥೆಯಲ್ಲಿ ದೇಸಿ ವಿದ್ಯಾಸಂಸ್ಥೆಯ ಸಂಗೀತ ಶಾಲೆ ಆರಂಭಿಸಿದ್ದೇನೆ. ಈ ಸಂಸ್ಥೆಯನ್ನು ಸಂಗೀತಾಸಕ್ತರು ಬಳಸಿಕೊಳ್ಳಬೇಕೆಂದು ಸಲಹೆ ನೀಡಿದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿಯಿಂದ ನನ್ನ ಮೇಲೆ ಋಣ ಭಾರ ಹೆಚ್ಚಿದೆ. ಇದಕ್ಕಾಗಿ ನಾನು, ನನ್ನ ಬಳಗ ಹಾಗೂ ನನ್ನ ಪತ್ನಿ ಕೃತಜ್ಞತೆ ಸಲ್ಲಿಸುತ್ತೇವೆ. ಮಂಡ್ಯ ಜಿಲ್ಲೆಯನ್ನು ಕಥೆಗಳ ಮೂಲಕ ಚಿಂತನಾ ಲಹರಿ ಎಬ್ಬಿಸಿದ ಮೊದಲ ಚಿಂತಕ ಬೆಸಗರಹಳ್ಳಿ ರಾಮಣ್ಣ ಅವರು ಭಿತ್ತಿದ ಚಿಂತನೆಗಳಿಂದ ಐಪಿಎಸ್ ಅಧಿಕಾರಿ ರವಿಕಾಂತೇಗೌಡ ಜನ್ಮಿಸಿದ್ದಾರೆ. ನನ್ನನ್ನ ಮೂಲತ: ಮಂಡ್ಯ ಜಿಲ್ಲೆಯ ಕನ್ನಂಬಾಡಿ ಗ್ರಾಮದವರೆಂದು ಜಿಲ್ಲೆಯ ಪ್ರಮುಖರು ಗುರುತಿಸುತ್ತಾರೆ. ಅದು ನಿಜಕ್ಕೂ ಸಂತಸದ ವಿಚಾರವಾಗಿದೆ ಎಂದು ಹೇಳಿದರು.

ಕೆವಿಎಸ್ ಪ್ರಶಸ್ತಿ ಪಡೆದ ಬಳಿಕ ಇದೇ ಕರ್ನಾಟಕ ಸಂಘ ಡಾ.ಜಿ.ಮಾದೇಗೌಡರ ಪ್ರಶಸ್ತಿಯನ್ನು ನನಗೆ ಕೊಡುತ್ತೇನೆ ಎಂದಾಗ ಬೇಡ ಎಂದೆ. ಆದರೆ ಬಲವಂತವಾಗಿ ಪ್ರಶಸ್ತಿಯನ್ನು ನನಗೆ ನೀಡಿದರು. ಇದೀಗ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿಯನ್ನು ಒಪ್ಪಿಕೊಳ್ಳಿ ಎಂದಾಗ ನಿರಾಕರಿಸಿದನಾದರೂ ಪ್ರೀತಿಯಿಂದ ಬಲವಂತ ಮಾಡಿದಾಗ ಬೇಡ ಎನ್ನಲು ಸಾಧ್ಯವಾಗದೇ ಮಹನೀಯರ ಹೆಸರಿನ ಪ್ರಶಸ್ತಿಯನ್ನು ಪಡೆದಿದ್ದೇನೆ. ಈ ಘಳಿಗೆ ನಿಜಕ್ಕೂ ಸಂತಸದ ಕ್ಷಣ ಎಂದು ಬಣ್ಣಿಸಿದರು.

ಆದಿಚುಂಚನಗಿರಿ ಮಠದ ವಿಶ್ವಮಾನವ ಶಾಖಾ ಮಠದ ಶ್ರೀ ಪುರುಷೋತ್ತಮಾನಂದ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಿದ್ದರು. ವೇದಿಕೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ಬೆಂಗಳೂರಿನ ಕೇಂದ್ರ ವಲಯದ ಐಜಿ ಡಾ.ಬಿ.ಆರ್. ರವಿಕಾಂತೇಗೌಡ, ಶಾಸಕ ರವಿಕುಮಾರ್ ಗಣಿಗ, ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ, ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಬಿ.ಜಯಪ್ರಕಾಶ್‌ಗೌಡ, ಪಾದಯಾತ್ರಿಗಳಾದ ತಗ್ಗಹಳ್ಳಿ ವೆಂಕಟೇಶ್, ಲೋಕೇಶ್ ಚಂದಗಾಲು, ವಿಜಯಲಕ್ಷ್ಮಿ ರಘುನಂದನ್ ಸೇರಿದಂತೆ ಹಲವು ಮಂದಿ ಗಣ್ಯರು ಉಪಸ್ಥಿತರಿದ್ದರು.



ಮಂಡ್ಯದಲ್ಲಿ ಭಾನುವಾರ ನಡೆದ ಸಮಾರಂಭದಲ್ಲಿ ನಾದಬ್ರಹ್ಮ ಡಾ.ಹಂಸಲೇಖ ಅವರಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಪ್ರದಾನ ಮಾಡಲಾಯಿತು. ಈ ವೇಳೆ ಶ್ರೀಮತಿ ಲತಾ ಹಂಸಲೇಖ, ಶ್ರೀ ಪುರುಷೋತ್ತಮಾನಂದ ಸ್ವಾಮೀಜಿ, ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ, ಶಾಸಕರು ಗಣ್ಯರು ಉಪಸ್ಥಿತರಿದ್ದರು.

ಡಿ.ಸಿ.ತಮ್ಮಣ್ಣ ಅವರ ನಾಮಫಲಕ ಧ್ವಂಸ; ಕೆ.ಎಂ.ದೊಡ್ಡಿ ಪೊಲೀಸ್ ಠಾಣೆಗೆ ದೂರು

ಭಾರತೀನಗರ,ಜೂ.30– ಮದ್ದೂರು ಕ್ಷೇತ್ರದಲ್ಲಿ ರಾಜಕೀಯ ವೈಶಮ್ಯಗಳು ದಿನದಿಂದ ದಿನಕ್ಕೆ ತಾರಕಕ್ಕೇರುತ್ತಿದೆ. ಇದಕ್ಕೆ ಸಾಕ್ಷಿ ಎಂಬಂತೆ ಜೆಡಿಎಸ್ ಪಕ್ಷದ ಮಾಜಿ ಸಚಿವ ಡಿ.ಸಿ.ತಮ್ಮಣ್ಣ ಅವರ ಭಾವಚಿತ್ರವಿರುವ ಗ್ರಾಮಗಳ ಹೆಸರಿರುವ ನಾಮಫಲಕವನ್ನು ಕಿಡಿಗೇಡಿಗಳು ಧ್ವಂಸಗೊಳಿಸಿದ್ದಾರೆ.

ಮಾಜಿ ಸಚಿವ ಡಿ.ಸಿ.ತಮ್ಮಣ್ಣ ಅವರ ಅಭಿಮಾನಿಗಳು ಭಾರತೀನಗರದ ಮಂಡ್ಯ ರಸ್ತೆ, ಕುರಿಕೆಂಪನದೊಡ್ಡಿ ಗೇಟ್ ಬಳಿ ಡಿ.ಸಿ.ತಮ್ಮಣ್ಣ ಅವರ ಭಾವಚಿತ್ರವುಳ್ಳ ನಾಮ ಫಲಕವನ್ನು ಅಳವಡಿಸಿದ್ದರು. ಇದರಲ್ಲಿ ದೇವರಹಳ್ಳಿ, ಕುರಿಕೆಂಪನ ದೊಡ್ಡಿ, ಶ್ರೀಸಣ್ಣಕ್ಕಿ ರಾಯಸ್ವಾಮಿ ದೇವಸ್ಥಾನಕ್ಕೆ ಮಾರ್ಗವಿದೆ ಎಂದು ನಮೂದಿಸಲಾಗಿತ್ತು ಇದಕ್ಕೆ ಇಟ್ಟಿಗೆ ಮತ್ತು ಸಿಮೆಂಟ್‌ನಿಂದ ಕಟ್ಟಡವನ್ನು ಕಟ್ಟಿ ಅದಕ್ಕೆ ಕಬ್ಬಿಣದ ರಾಡುಗಳನ್ನು ನೆಟ್ಟು ಗ್ರೈನೇಟ್‌ನಿಂದ ಲಕ್ಷಾಂತರ ರೂ ಖರ್ಚು ಮಾಡಿ ಫಲಕವನ್ನು ಅಳವಡಿಸಲಾಗಿತ್ತು.

ಇದನ್ನು ಕೆಲವರು ರಾಜಕೀಯವಾಗಿ ಒಡೆದು ಪುಡಿಪುಡಿ ಮಾಡಿರುವ ಘಟನೆ ಜರುಗಿದೆ ಎಂದು ಅಭಿಮಾನಿಗಳು ಆಕ್ರೋಶ ವ್ಯಕ್ತಪಡಿಸಿ ಕಿಡಿಗೇಡಿಗಳನ್ನು ಪತ್ತೆ ಹಚ್ಚುವಂತೆ ಈಗ ಕೆ.ಎಂ.ದೊಡ್ಡಿ ಪೊಲೀಸ್ ಠಾಣೆ ಮೆಟ್ಟಿಲೇರಿ ದೂರು ನೀಡಿದ್ದಾರೆ.



ಮೈಶುಗರ್ ಕಾರ್ಖಾನೆಯಲ್ಲಿ ಕಬ್ಬು ಅರೆಯುವಿಕೆಗೆ ಚಾಲನೆ

ಪ್ರಸ್ತುತ 2,50,000 ಮೆಟ್ರಿಕ್ ಟನ್ ಕಬ್ಬು ನುರಿಸುವ ಗುರಿ



ಮೈಶುಗರ್‌ನ ಬಾಯ್ಲರ್‌ಗೆ ಅಗ್ನಿಸ್ಪರ್ಶ ಮಾಡುವ ಮೂಲಕ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಕಬ್ಬು ಅರೆಯುವಿಕೆಗೆ ಚಾಲನೆ ನೀಡಿದರು.

ಮಂಡ್ಯ,ಜು.30– ರಾಜ್ಯದ ಸರ್ಕಾರದ ಒಡೆತನದ ಏಕೈಕ ಸಕ್ಕರೆ ಕಾರ್ಖಾನೆಯಾದ ಮಂಡ್ಯದ ಮೈಶುಗರ್ ಕಾರ್ಖಾನೆಯ ಪ್ರಸಕ್ತ ಸಾಲಿನ ಕಬ್ಬು ಅರೆಯುವಿಕೆ ಕಾರ್ಯ ಆರಂಭಗೊಂಡಿದೆ. ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಕಬ್ಬು ಅರೆಯುವ ಕಾರ್ಯಕ್ಕೆ ಚಾಲನೆ ನೀಡಿದರು.

ಕಾರ್ಖಾನೆ ಆವರಣದಲ್ಲಿ ಜಿಲ್ಲೆಯ ಶಾಸಕರು, ಜಿಲ್ಲಾಡಳಿತದ ಅಧಿಕಾರಿಗಳು, ರೈತ ಮುಖಂಡರ ಸಮ್ಮುಖದಲ್ಲಿ ವಿಶೇಷ ಪೂಜೆ ಸಲ್ಲಿಸಿ ಬಳಿಕ ಬಾಯ್ಲರ್‌ಗೆ ಅಗ್ನಿ ಸ್ಪರ್ಶ ಮಾಡುವ ಮೂಲಕ ಚಾಲನೆ ನೀಡಲಾಯಿತು.

ನಂತರ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿ, ಸ್ಥಗಿತವಾಗಿದ್ದ ಮೈಶುಗರ್ ಕಾರ್ಖಾನೆಯನ್ನು ಪುನರಾರಂಭಿಸಲು ಸರ್ಕಾರದಿಂದ ಕಳೆದ ಸಾಲಿನಲ್ಲಿ 50 ಕೋಟಿ ರೂ. ನೀಡಲಾಗಿದೆ. 2023–24ನೇ ಸಾಲಿನಲ್ಲಿ 2,41,305 ಮೆಟ್ರಿಕ್ ಟನ್ ಕಬ್ಬು ನುರಿಸಲಾಗಿದ್ದು, ಕಬ್ಬು ಸರಬರಾಜು ಮಾಡಿದ ರೈತ–ಭಾಂದವರಿಗೆ ಸಂಪೂರ್ಣವಾಗಿ ಹಣವನ್ನು ಪಾವತಿಸಲಾಗಿದೆ ಎಂದು ಸ್ಪಷ್ಟಪಡಿಸಿದರು.

ಈ ಬಾರಿ ಸರಿಯಾಗಿ ಮಳೆ ಬಾರದ ಕಾರಣ ಕಬ್ಬಿನ ಕೊರತೆ ಇದೆ ಆದರೂ ಸಹ ಸುಮಾರು 2,50,000 ಮೆಟ್ರಿಕ್ ಟನ್ ಕಬ್ಬು ನುರಿಸುವ ಉತ್ತಮ ಗುರಿಯನ್ನು ಹೊಂದಲಾಗಿದೆ. ಪ್ರಸ್ತುತ 1,90,000 ಟನ್ ಕಬ್ಬು ಒಪ್ಪಿಗೆಯಾಗಿದ್ದು, ಉಳಿದ ಕಬ್ಬನ್ನು ನಾನ್–ಒಪ್ಪಿಗೆ ಮತ್ತು ಹೊರಜಿಲ್ಲೆಯ ಮೂಲಕ ನುರಿಸಲಾಗುವುದು ಎಂದು ಅವರು ತಿಳಿಸಿದರು.

ಕಾರ್ಖಾನೆಯ ಲಾಭ, ನಷ್ಟದ ಆಧಾರದ ಮೇಲೆ ಸದ್ಯಕ್ಕೆ ಕಾರ್ಯ ನಿರ್ವಹಿಸುವುದು ಕಷ್ಟಕರ. ರೈತರ ಹಿತದೃಷ್ಟಿಯಿಂದ ಸಕ್ಕರೆ ಕಾರ್ಖಾನೆಯನ್ನು ನಡೆಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಸಕ್ಕರೆ ಕಾರ್ಖಾನೆ ಲಾಭದಾಯಕವಾಗಿ ನಡೆಯಲಿದೆ ಎಂಬ ನಂಬಿಕೆ ಇದೆ ವಿಶ್ವಾಸ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಶಾಸಕ ರವಿಕುಮಾರ್ ಗಣಿಗ, ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ, ಮೈಷುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಜಿಲ್ಲಾಧಿಕಾರಿ ಡಾ.ಕುಮಾರ, ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್. ನಾಗರಾಜು, ಜಿ.ಪಂ. ಸಿಇಓ ಶೇಕ್ ತನ್ವೀರ್ ಆಸೀಫ್ ಸೇರಿದಂತೆ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಮಂಡ್ಯ ಜಿಲ್ಲೆಯಲ್ಲಿ ಡೆಂಗ್ಯೂ ತಡೆಗೆ ಕ್ರಮ

ಮಂಡ್ಯ,ಜೂ.30–ಜಿಲ್ಲೆಯಲ್ಲಿ ಡೆಂಗ್ಯೂ ಪ್ರಕರಣಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಆರೋಗ್ಯ ಇಲಾಖೆ ಅಧಿಕಾರಿಗಳು ಸೂಕ್ತ ಕ್ರಮಕೈಗೊಳ್ಳುವಂತೆ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಸೂಚಿಸಿದ್ದಾರೆ.

ರಾಜ್ಯದಲ್ಲಿ ವೇಗವಾಗಿ ಹರಡುತ್ತಿರುವ ಮಹಾಮಾರಿ ಡೆಂಗ್ಯೂ ಜ್ವರವನ್ನು ತಡೆಯಲು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಕೆಲವು ಸೂಚನೆಗಳನ್ನು ನೀಡಿದ್ದು, ಅವುಗಳನ್ನು ಪಾಲಿಸಿ, ಜನರಿಗೆ ಈ ಬಗ್ಗೆ ತಕ್ಕ ಜಾಗೃತಿ ಮೂಡಿಸಬೇಕೆಂದು ಸೂಚಿಸಿದ್ದಾರೆ ಎಂದರು.

ಅದರಂತೆ ನಾನು ಸಹ ಮಂಡ್ಯ ಜಿಲ್ಲಾಡಳಿತ ಮತ್ತು ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ಜಿಲ್ಲೆಯಲ್ಲಿ ಡೆಂಗ್ಯೂ ಪ್ರಕರಣಗಳು ಹೆಚ್ಚಾಗದಂತೆ ಕ್ರಮ ವಹಿಸಿ, ಜನರಲ್ಲಿ ಈ ಬಗ್ಗೆ ಜಾಗೃತಿ ಮೂಡಿಸಬೇಕೆಂದು ಸೂಚಿಸಿದ್ದೇನೆ ಎಂದರು.

ಭಾನುವಾರ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದ ಪ್ರತಿ ಜಿಲ್ಲೆಯಲ್ಲೂ ಆಯಾ ಜಿಲ್ಲಾಧಿಕಾರಿ, ಜಿಪಂ ಸಿಇಓ ಹಾಗೂ ಡಿಎಚ್‌ಓ ಸಭೆ ಮಾಡಿ, ಡೆಂಗ್ಯೂ ತಡೆಯಲು ಮುಂಜಾಗೃತಾ ಕ್ರಮ ತೆಗೆದುಕೊಳ್ಳುವ ಬಗ್ಗೆ ಚರ್ಚೆ ನಡೆಸಿದ್ದಾರೆ. ಮಂಡ್ಯದಲ್ಲೂ ಸಹ ಈ ಬಗ್ಗೆ ಸಭೆ ನಡೆದಿದ್ದು, ಅಧಿಕಾರಿಗಳು ಕ್ರಮ ವಹಿಸಿದ್ದಾರೆ ಎಂದರು.

ಡೆಂಗ್ಯೂ ತಡೆಗೆ ಕ್ರಮ: ಮಂಡ್ಯದಲ್ಲಿ ಡೆಂಗ್ಯೂ ಜ್ವರಕ್ಕೆ ಸಂಬಂಧಿಸಿದಂತೆ ಈವರೆಗೆ ಯಾವುದೇ ಗಂಭೀರ ಪ್ರಕರಣಗಳು ಕೇಳಿ ಬಂದಿಲ್ಲವಾದರೂ ಜಿಲ್ಲಾಡಳಿತ ಮತ್ತು ಆರೋಗ್ಯ ಇಲಾಖೆ ಈ ಬಗ್ಗೆ ನಿಗಾವಹಿಸಿದೆ. ಈಗಾಗಲೇ ಜಿಲ್ಲಾಧಿಕಾರಿ ಡಾ.ಕುಮಾರ, ಸಿಇಓ ಶೇಕ್ ತನ್ವೀರ್ ಆಸೀಫ್ ಮತ್ತು ಡಿಎಚ್‌ಓ ಡಾ.ಮೋಹನ್ ಈ ಬಗ್ಗೆ ಸಭೆ ನಡೆಸಿ, ತಾಲೂಕು ಆಡಳಿತ ಮತ್ತು ಆರೋಗ್ಯ ಇಲಾಖೆಗಳಿಗೆ ತೆಗೆದುಕೊಳ್ಳಬೇಕಾದ ಅಗತ್ಯ ಮುಂಜಾಗೃತಾ ಕ್ರಮಗಳ ಬಗ್ಗೆ ಸೂಚನೆಗಳನ್ನು ಕೊಟ್ಟಿದ್ದಾರೆ.

ಕೇಂದ್ರೀಯ ವಿದ್ಯಾಲಯದ ಕಟ್ಟಡ ಉದ್ಘಾಟನೆಗೆ ಸಜ್ಜು

ಮಂಡ್ಯ,ಜೂ.30– ಸ್ವಂತ ಕಟ್ಟಡವಿಲ್ಲದೆ ತಾತ್ಕಾಲಿಕವಾಗಿ ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಕೇಂದ್ರೀಯ ವಿದ್ಯಾಲಯ ಸ್ವಂತ ಕಟ್ಟಡದ ಕಾಮಗಾರಿ ಕೆಲಸಗಳು ಅಂತಿಮ ಹಂತದಲ್ಲಿದ್ದು, ಕಾಮಗಾರಿ ಕೆಲಸಗಳು ಪೂರ್ಣಗೊಳ್ಳಲಿದೆ. ಜಿಲ್ಲಾಧಿಕಾರಿ ಡಾ.ಕುಮಾರ ಸಭೆಗಳನ್ನು ನಡೆಸಿ ಕಾಮಗಾರಿ ಪೂರ್ಣಗೊಳಿಸುವಂತೆ ಸೂಚನೆ ನೀಡಿದ್ದರಲ್ಲದೆ ಉದ್ಘಾಟನೆಗೆ ಸಿದ್ದಗೊಂಡಿದೆ.

ಒಂದನೇ ಪುಟದಿಂದ

ಡಾ.ಯತೀಂದ್ರ ಗ್ಯಾಂಗ್ ಭಾಗಿ ಆರೋಪ

ಹೊರ ಗುತ್ತಿಗೆ ನೌಕರರ ತಲೆದಂಡ

ಮೈಸೂರು, ಜೂ.30–ಮುಡಾದಲ್ಲಿ ಸಾವಿರಾರು ಕೋಟಿ ರೂ. ಭ್ರಷ್ಟಾಚಾರ ಎಸಗುತ್ತಿರುವ ಅಧಿಕಾರಿಗಳು ಅಪ್ಪಿ–ತಪ್ಪಿಯೂ ತಾವು ಸಿಕ್ಕಿ ಹಾಕಿಕೊಳ್ಳಬಾರದು ಎಂಬ ಕಾರಣಕ್ಕಾಗಿ ಹೊರ ಗುತ್ತಿಗೆ ನೌಕರರನ್ನು ಬಳಸಿಕೊಳ್ಳುವ ತಂತ್ರಗಾರಿಕೆ ನಡೆಸುತ್ತಿದ್ದಾರೆ ಎಂದು ವಿಧಾನ ಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಆರೋಪಿಸಿದರು.

ಮುಡಾದ ಪ್ರಮುಖ ದಾಖಲಾತಿಗಳು ಇರುವ ರೆಕಾರ್ಡ್ ರೂಂಗೆ ಹೊರ ಗುತ್ತಿಗೆ ನೌಕರರನ್ನು ಅಧಿಕಾರಿಗಳು ನಿಯೋಜಿಸಿದ್ದಾರೆ. ರೆಕಾರ್ಡ್ ರೂಂನಲ್ಲಿ ನಡೆದ ಅಕ್ರಮದಲ್ಲಿ ಸಿಕ್ಕಿ ಹಾಕಿಕೊಂಡರೆ ಅದು ಹೊರ ಗುತ್ತಿಗೆ ನೌಕರನ ತಲೆಗೇ ಬರುತ್ತದೆಯೇ ಹೊರತು, ಅಧಿಕಾರಿಗಳಿಗೆ ಶಿಕ್ಷೆಯಾಗುವುದಿಲ್ಲ. ಅಕ್ರಮ ಎಸಗಿದ್ದಾರೆ ಎಂದು ಹೊರ ಗುತ್ತಿಗೆದಾರರನ್ನು ವಜಾ ಮಾಡುವುದರೊಂದಿಗೆ ಪ್ರಕರಣ ಮುಗಿದು ಹೋಗುತ್ತದೆ. ಆ ನೌಕರನಿಗೂ ಕಾನೂನಿ ನಂತೆ ಶಿಕ್ಷೆಯಾಗುವುದಿಲ್ಲ. ಮತ್ತೊಂದೆಡೆ ಅಕ್ರಮ ಎಸಗುವ ಅಧಿಕಾರಿಗಳೂ ಕೂಡ ಬಚಾವ್ ಆಗಿ ಬಿಡುತ್ತಾರೆ. ಇದು ಅಧಿಕಾರಿಗಳ ಐನಾತಿ ಐಡಿಯಾ ಎಂದು ವಿಶ್ವನಾಥ್ ಹೇಳಿದರು.

ಇಲ್ಲಿನ ಭ್ರಷ್ಟಾಚಾರದಲ್ಲಿ ಎಲ್ಲರೂ ಫಲಾನುಭವಿಗಳೇ. ಮುಖ್ಯಮಂತ್ರಿ ಸಿದ್ದರಾಮಯ್ಯ ಹೆಸರಲ್ಲಿ ದರೋಡೆ ನಡೆಸಲಾಗುತ್ತಿದೆ ಎಂದ ಅವರು, ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ರಿಯಲ್ ಎಸ್ಟೇಟ್ ಗಿರಾಕಿ. ತನ್ನ ಅಪ್ಪಟ ಶಿಷ್ಯನಾಗಿರುವ ಈತನನ್ನು ಸಿದ್ದರಾಮಯ್ಯನವರು ಇಲ್ಲಿ ಬಂದು ಕೂರಿಸಿದ್ದಾರೆ. ಮುಡಾ ಆಯುಕ್ತ ದಿನೇಶ್ ಕುಮಾರ್‌ಗೆ ಭೈರತಿ ಸುರೇಶ್ ಜೊತೆ ನೇರ ಸಂಪರ್ಕವಿದ್ದು, ಈ ಹಗರಣದಲ್ಲಿ ಭೈರತಿ ಸುರೇಶ್ ಅವರದೂ ಕೂಡ ದೊಡ್ಡ ಪಾತ್ರವಿದೆ ಎಂದರು.

ಬಲ್ಲಹಳ್ಳಿಯಲ್ಲಿ ಬಡಾವಣೆ ನಿರ್ಮಾಣ ಮಾಡಲು ರೈತರೊಂದಿಗೆ ಶೇ.50:50 ಅನುಪಾತದಲ್ಲಿ ಜಮೀನು ಪಡೆಯಲು ಪ್ರಾಧಿಕಾರದ ಸಭೆಯಲ್ಲಿ ತೀರ್ಮಾನವಾಗಿತ್ತು. ಆದರೆ ಇದುವೇ ಬ್ರಹ್ಮಾಂಡ ಭ್ರಷ್ಟಾಚಾರಕ್ಕೆ ವರದಾನವಾಗಿ ಪರಿಣಮಿಸಿದ್ದು, ಇದನ್ನು ಉಲ್ಲೇಖಿಸಿಯೇ ನಿಯಮ ಮೀರಿ ಶೇ.50:50 ಅನುಪಾತದ ಹೆಸರಿನಲ್ಲಿ ಸಾವಿರಾರು ಕೋಟಿ ರೂ. ಹಗರಣ ನಡೆಸಲಾಗಿದೆ. ಪ್ರಾಧಿಕಾರದ ಹಿಂದಿನ ಆಯುಕ್ತರಾದ ಕಾಂತರಾಜ್ ಅವರು, ಮೂಲೆ ನಿವೇಶನ, ಬಿಡಿ ನಿವೇಶನ ಸೇರಿದಂತೆ ಒಟ್ಟು 9 ಸಾವಿರ ನಿವೇಶನಗಳನ್ನು ಉಳಿಸಿ ಹೋಗಿದ್ದರು. ಆದರೆ ಈಗ ಅದರಲ್ಲಿ 5 ಸಾವಿರ ನಿವೇಶನ ಮಾಯವಾಗಿ ಬಿಟ್ಟಿದೆ. ಆ ನಿವೇಶನಗಳನ್ನು ನಿಯಮ ಉಲ್ಲಂಘಿಸಿ ಪರಭಾರೆ ಮಾಡುವ ಮೂಲಕ ಸುಮಾರು 5 ಸಾವಿರ ಕೋಟಿ ರೂ. ಹಗರಣ ನಡೆಸಲಾಗಿದೆ. ಮುಡಾ ಬ್ರೋಕರ್‌ಗಳ ಆಶ್ರಯ ತಾಣವಾಗಿದೆ. ಅಧಿಕಾರಿಗಳು ಹಾಗೂ ರಾಜಕಾರಣಿಗಳ ಹಣ ದಾಹಕ್ಕೆ ಎಲ್ಲೆಯೇ ಇಲ್ಲದಂತಾಗಿದೆ. ಈಗಿನ ಕಾಂಗ್ರೆಸ್ ಸರ್ಕಾರ ಮಾತ್ರವಲ್ಲದೆ, ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲೂ ಹಗರಣ ನಡೆದಿದೆ. ತಪ್ಪಿತಸ್ಥರು ಯಾರೇ ಆಗಿದ್ದರೂ ಶಿಕ್ಷೆ ಆಗಲೇಬೇಕು ಎಂದ ಅವರು, ಸರ್ಕಾರ ಈಗ ರಚಿಸಲಿರುವ ಎಸ್‌ಐಟಿ ಸರ್ಕಾರದ ಹಿಡಿತದಲ್ಲಿರುತ್ತದೆ. ಅದಕ್ಕೆ ಸರ್ಕಾರದ ಮಾರ್ಗದರ್ಶನವೂ ಇರುತ್ತದೆ. ಆದ್ದರಿಂದ ಎಸ್‌ಐಟಿ ತನಿಖೆ ನಿಷ್ಪಕ್ಷಪಾತವಾಗಿರುವುದಿಲ್ಲ. ಹೀಗಾಗಿ ಮುಡಾ ಬ್ರಹ್ಮಾಂಡ ಭ್ರಷ್ಟಾಚಾರ ಹಗರಣವನ್ನು ಸಿಬಿಐ ತನಿಖೆಗೆ ವಹಿಸಬೇಕು ಎಂದು ಆಗ್ರಹಿಸಿದರು.

ಮೈಸೂರು ನಗರ ಯೋಜನಾ ಬದ್ಧವಾಗಿ ಬೆಳೆಯಲಿ, ನಗರದ ಸೌಂದರ್ಯ ಇಮ್ಮಡಿಗೊಳ್ಳಲಿ, ಸೂರು ರಹಿತರಿಗೆ ಸೂರು ಸಿಗಲಿ ಎಂಬ ಸದುದ್ದೇಶದಿಂದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು 'ಮೈಸೂರು ವಿಶ್ವಸ್ಥ ಮಂಡಳಿ' ಸ್ಥಾಪಿಸಿದರು. ನಂತರ ಇದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವಾಯಿತು. ನಾಲ್ವಡಿಯವರು ಸದುದ್ದೇಶದಿಂದ ಸ್ಥಾಪಿಸಿದ ಸಂಸ್ಥೆಯನ್ನು ರಾಜಕಾರಣಿಗಳು ಕುಲಗೆಡಿಸಿದ್ದಾರೆ ಎಂದು ವಿಶ್ವನಾಥ್ ಆಕ್ರೋಶ ವ್ಯಕ್ತಪಡಿಸಿದರು.

ಕೊಡಗಲ್ಲಿ ಭಾರಿ ವಾಹನ ಸಂಚಾರ ನಿಷೇಧ

ನಿರ್ಬಂಧಿತ ವಾಹನಗಳು: ಮರದ ದಿಮ್ಮಿ ಮತ್ತು ಮರಳು ಸಾಗಣೆ, 18,500 ಕೆಜಿಗಿಂತ ಹೆಚ್ಚಿನ ತೂಕದ ಸರಕು ಮತ್ತು ಸಾಗಣೆ, ಭಾರಿ ವಾಹನಗಳಾದ ಬುಲೆಟ್ ಟ್ಯಾಂಕರ್ಸ್, ಶಿಪ್ ಕಾರ್ಗೋ ಕಂಟೈನರ್ಸ್, ಲಾಂಗ್ ಚಾಸಿಸ್ (ಮಲ್ಟಿ ಆಕ್ಸಿಲ್), ಆರ್ಟಿಕ್ಯೂಲೇಟೆಡ್ ವಾಹನಗಳ ಸಂಚಾರವನ್ನು ನಿರ್ಬಂಧಿಸಿ ಆದೇಶಿಸಲಾಗಿದೆ.

ವಿನಾಯಿತಿ ವಾಹನಗಳು: ಅಡುಗೆ ಅನಿಲ, ಪೆಟ್ರೋಲ್ ಡೀಸೆಲ್ ಸೇರಿದಂತೆ ಇತರೆ ಇಂಧನ, ಹಾಲು ಪೂರೈಕೆ, ಸರ್ಕಾರಿ, ಶಾಲಾ–ಕಾಲೇಜು ಮತ್ತು ಸಾರ್ವಜನಿಕ ಪ್ರಯಾಣಿಕರ ವಾಹನಗಳು ಮೋಟಾರು ವಾಹನ ಕಾಯ್ದೆಯ ಸೂಚನಾ ಫಲಕಗಳನ್ನು ಅಳವಡಿಸಿಕೊಂಡು ಸಂಚರಿಸಲು ಜಿಲ್ಲಾ ಪೊಲೀಸ್ ಅಧೀಕ್ಷಕರು ಅನುಮತಿ ನೀಡಿದ್ದಾರೆ. ಕೊಡಗು ಜಿಲ್ಲೆಯ ಮೂಲಕ ಹಾದುಹೋಗುವ ರಾಷ್ಟ್ರೀಯ ಹೆದ್ದಾರಿ 275ರ ಕುಶಾಲನಗರ ಮತ್ತು ಸಂಪಾಜೆಯಲ್ಲಿ ಚೆಕ್‌ಪೋಸ್ಟ್ ನಿರ್ಮಿಸಿ, ದಿನದ 24 ಗಂಟೆ ಸೂಕ್ತವಾಗಿ ನಿಗಾ ವಹಿಸಲು ಸಿಬ್ಬಂದಿ ನಿಯೋಜಿಸಲಾಗಿದೆ ಮೊಬೈಲ್ ಪ್ಯಾಟ್ರೋಲಿಂಗ್, ಆದೇಶ ಉಲ್ಲಂಘಿಸಿದವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಪೊಲೀಸ್ ಹಾಗೂ ಸಾರಿಗೆ ಇಲಾಖೆಗೆ ಸೂಚಿಸಲಾಗಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಭ್ರಷ್ಟಾಚಾರ: ಸಿ.ಟಿ.ರವಿ

ಇದನ್ನೇ ಮಾಡಿದ್ದಾರೋ ಎಂದು ತಿಳಿಯಬೇಕಾದ ಅವಶ್ಯಕತೆ ಇದೆ ಎಂದರು.

ಮೈಸೂರಿನ ನಾಲ್ಕೈದು ಪಟ್ಟು ಜಾಸ್ತಿ ಬೆಲೆ ಬೆಂಗಳೂರಿನಲ್ಲಿದೆ. ಅಲ್ಲಿ ಇನ್ನೆಷ್ಟು ಲೂಟಿ ಹೊಡೆದಿದ್ದಾರೋ ಗೊತ್ತಿಲ್ಲ. ಮೈಸೂರಿನ ಸೂಕ್ಷ್ಮ ಜನರು ಗಮನಿಸುತ್ತಿರೀ. ಇಲ್ಲೇ ಈ ರೀತಿಯ ಲೂಟಿಯಾದರೆ, ಬೆಂಗಳೂರಿನಂತಹ ದೊಡ್ಡ ದೊಡ್ಡ ಸಿಟಿಗಳಲ್ಲಿ ಇನ್ನೆಷ್ಟು ಲೂಟಿ ಹೊಡೆದಿದ್ದಾರೆ ಎಂಬುದನ್ನು ನೋಡಬೇಕು. ಇದೊಂದು ಚಾರ್ಲ್ಸ್ ಶೋಭರಾಜ್‌ನನ್ನು ಮೀರಿಸಿದ ಕತರ್ನಾಕ್ ಗ್ಯಾಂಗ್ ಆಗಿದೆ ಎಂದು ಟೀಕಿಸಿದರು.

ಸಿದ್ದರಾಮಯ್ಯರ ಕೃಪೆ: ಸಿದ್ದರಾಮಯ್ಯನವರ ಕೃಪಾಕಟಾಕ್ಷದಲ್ಲಿಯೇ ಈ ಹಗರಣ ನಡೆದಿದ್ದು, ಈ ಬಗ್ಗೆ ಸಮಗ್ರ ತನಿಖೆಯಾಗಬೇಕು. ಕೋಟ್ಯಾಂತರ ರೂ. ಮೌಲ್ಯದ ನಿವೇಶನಗಳನ್ನು ದೊಡ್ಡವರ ಕೃಪಾಕಟಾಕ್ಷವಿಲ್ಲದೇ ಪರಭಾರೆ ಮಾಡಲು ಸಾಧ್ಯವಿಲ್ಲ. ದೊಡ್ಡವರ ಕೃಪಾಕಟಾಕ್ಷ ಇಲ್ಲದೆ ಯಾರೋ ಕಮಿಷನರ್ ಮಾಡಿದ್ದಾನೆ ಎಂದರೆ ನಂಬಲು ಸಾಧ್ಯವಿಲ್ಲ. ಸಿಐಡಿ ತನಿಖೆ ಎಂದು ಮುಚ್ಚಿಹಾಕುತ್ತಾರೆ. ಆದ್ದರಿಂದ ಸಿಬಿಐ ತನಿಖೆಯಾಗಬೇಕು ಎಂದು ಒತ್ತಾಯಿಸಿದರು.

ಲೂಟಿ ಹೊಡೆದಿದ್ದಾರೆ: ಮೈಸೂರು ಮಹಾರಾಜರು ಸುಂದರ ನಗರವನ್ನು ನಿರ್ಮಾಣ ಮಾಡಿದ್ದರು. ಆದರೆ, ಕಳ್ಳ–ಕಾಕರು ಸೇರಿಕೊಂಡು ಲೂಟಿ ಹೊಡೆಯುತ್ತಿದ್ದಾರೆ. ಬಹಳ ಗಂಭೀರವಾದ ಹಾಗೂ ಮಹಾ ಮೋಸದ ಸಂಗತಿಯಾಗಿದ್ದು, ಕೇಳಿದರೆ ಭಯವಾಗುತ್ತದೆ ಎಂದರು.

ಇದರ ಬಗ್ಗೆ ಪ್ರಾಥಮಿಕ ಮಾಹಿತಿ ಇದ್ದು, ಪಕ್ಷದ ಶಾಸಕರಾದ ಟಿ.ಎಸ್.ಶ್ರೀವತ್ಸ ಮತ್ತು ನಾಯಕರಾದ ರಘು ಕೌಟಿಲ್ಯ ಅವರು ಇನ್ನಷ್ಟು ಮಾಹಿತಿ ಕಲೆ ಹಾಕುತ್ತಿದ್ದಾರೆ. ಪಕ್ಷದ ಕಡೆಯಿಂದಲೂ ಹೋರಾಟ ಮಾಡುತ್ತೇವೆ. ಮೈಸೂರಿನ ಜನತೆಗೂ ಇವರು ಮಾಡಿರುವ ಮೋಸದ ಕೆಲಸವನ್ನು ತಿಳಿಸುತ್ತೇವೆ. ಎಂದು ಸಿ.ಟಿ.ರವಿ ಹೇಳಿದರು.

ಧ್ವನಿ ಎತ್ತುತ್ತಿಲ್ಲ...

ಹಿಡಿದುಕೊಂಡು ಸದಾ ಕಾಲ ಮುಡಾದಲ್ಲೇ ಅಲೆದಾಡುತ್ತಿರುತ್ತಾರೆ. ಮುಡಾದ ಯಾವುದೇ ಕೋಣೆಗೆ ಹೋದರೂ ಮಂಜೇಗೌಡರೇ ಸಿಗುತ್ತಾರೆ. ಅವರು ಬೆಳಗ್ಗೆ ಹಲ್ಲುಜ್ಜುವುದರಿಂದ ಹಿಡಿದು ಟಿಫನ್ ಮಾಡುವುದು, ಊಟ ಮಾಡುವುದು, ಕೊನೆಗೆ ಮಲಗುವುದೂ ಕೂಡ ಮುಡಾದಲ್ಲೇ ಎಂದು ವಿಶ್ವನಾಥ್ ಕುಹಕವಾಡಿದರು.

ಇನ್ನು ಮುಡಾದಲ್ಲಿ ಸಾವಿರಾರು ಕೋಟಿ ರೂ. ಬ್ರಹ್ಮಾಂಡ ಭ್ರಷ್ಟಾಚಾರ ನಡೆದರೂ ಕೂಡ ಮುಡಾ ಅಧ್ಯಕ್ಷ ಕೆ.ಮರೀಗೌಡ ತುಟಿ ಬಿಚ್ಚದೇ ತೆಪ್ಪಗೆ ಇದ್ದಾರೆ. ಪ್ರಸಾದ ಹೋಗುವುದರಿಂದ ಅವರು ಧನಿಯೇ ಎತ್ತುತ್ತಿಲ್ಲ ಎಂದು ವಿಶ್ವನಾಥ್ ಚುಚ್ಚಿದರು.

ರಾಜ್ಯ ಮಟ್ಟದ ಯೋಗ ಸ್ಪರ್ಧೆ

ಸ್ಥಾನಗಳಿಗೆ ನಗದು ಬಹುಮಾನ ನೀಡಲಾಯಿತು. 4ನೇ, 5ನೇ, 6ನೇ ಸ್ಥಾನದವರಿಗೆ ಪ್ರಮಾಣ ಪತ್ರ ಮತ್ತು ಪದಕ ನೀಡಲಾಯಿತು. ಕಾರ್ಯಕ್ರಮದಲ್ಲಿ ಯೋಗ ಫೆಡರೇಶನ್ ಆಫ್ ಮೈಸೂರಿನ ಅಧ್ಯಕ್ಷ ಶ್ರೀಹರಿ ಮಾತನಾಡಿ, ಬಲಿಷ್ಠ ಭಾರತಕ್ಕಾಗಿ ಪ್ರತಿಯೊಬ್ಬರು ಯೋಗ ಮಾಡಬೇಕು. ಹಿಂದೆ ಹರಿದ್ವಾರ ಅಥವಾ ಋಷಿಕೇಶವನ್ನು ಯೋಗದ ರಾಜಧಾನಿ ಎನ್ನುತ್ತಿದ್ದರು. ಆದರೆ ಇದೀಗ ಮೈಸೂರನ್ನು ಯೋಗದ ರಾಜಧಾನಿ ಎನ್ನಲಾಗುತ್ತಿದೆ. ಯೋಗ ಕ್ಷೇತ್ರ ಇಂದು ದೊಡ್ಡಮಟ್ಟದಲ್ಲಿ ಬೆಳೆದಿದೆ. ಅಂತಾರಾಷ್ಟ್ರೀಯ ಯೋಗದಿನದಂದು ಮೈಸೂರಿನಲ್ಲಿ ನಡೆದ ಸಾಮೂಹಿಕ ಯೋಗ ಪ್ರದರ್ಶನ ಗಿನ್ನಿಸ್ ದಾಖಲೆ ನಿರ್ಮಿಸಿದೆ. ಪ್ರಧಾನಿ ನರೇಂದ್ರ ಮೋದಿ ಮೈಸೂರಿನಲ್ಲಿ ನಡೆದ ಅಂತಾರಾಷ್ಟ್ರೀಯ ಯೋಗದಿನದಲ್ಲಿ ಪಾಲ್ಗೊಂಡು ಈ ನೆಲೆದ ಹೆಮ್ಮೆಯನ್ನು ಹೆಚ್ಚಿಸಿದ್ದಾರೆ. ಆದ್ದರಿಂದ ಮೈಸೂರಿನ ಈ ಶ್ರೀಮಂತ ಪರಂಪರೆ ಮತ್ತಷ್ಟು ಹೆಚ್ಚಿಸಬೇಕು ಎಂದರು.



ರಾಜ್ಯಮಟ್ಟದ ಯೋಗಾಸನ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಮರಿಮಲ್ಲಪ್ಪ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿಗಳು. ದೈಹಿಕ ಶಿಕ್ಷಕ ಸ್ವಾಮಿಗೌಡ ಅವರಿದ್ದಾರೆ.

ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜಿನ ಸ್ಥಾನಿಕ ವೈದ್ಯಾಧಿಕಾರಿ ಡಾ.ಹೆಚ್.ಎ. ಶಶಿರೇಖಾ ಮಾತನಾಡಿ, ದೈನಂದಿನ ಜೀವನದಲ್ಲಿ ಯೋಗ ಪ್ರಮುಖ ಪಾತ್ರ ವಹಿಸುತ್ತದೆ. ದೈಹಿಕ ಆರೋಗ್ಯ, ಮಾನಸಿಕ ಆರೋಗ್ಯ, ಸಾಮಾಜಿಕ ಆರೋಗ್ಯ ಸುಸ್ಥಿರತೆಗೆ ಯೋಗ ಅಡಿಪಾಯವಾಗಿದೆ. ದೇಹವು ದೈಹಿಕವಾಗಿ ಆರೋಗ್ಯಕರವಾಗಿದ್ದಾಗ, ಮನಸ್ಸು ಸ್ಪಷ್ಟವಾಗಿ ಕೇಂದ್ರೀಕೃತವಾ ಗಿರುತ್ತದೆ. ಒತ್ತಡವು ನಿಯಂತ್ರಣದಲ್ಲಿದೆ. ಯೋಗದ ಮೊರೆ ಹೋದವರು ದೈಹಿಕ, ಮಾನಸಿಕ, ಭಾವನಾತ್ಮಕ ಹಾಗೂ ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರ ಕಂಡು ಕೊಂಡಿದ್ದಾರೆ ಎಂದರು.

ಯೋಗ ಗುರು ಡಾ.ಗಣೇಶ್ ಕುಮಾರ್ ಮಾತನಾಡಿ, ಮೈಸೂರು ಅರಸರು ಯೋಗಕ್ಕೆ ದೊಡ್ಡ ಕೊಡುಗೆ ನೀಡಿದ್ದಾರೆ. ಆ ಪರಂಪರೆಯನ್ನು ನಾವು ಮತ್ತಷ್ಟು ಹೆಚ್ಚಿಸಬೇಕು. ಒಲಂಪಿಕ್ಸ್ ನಲ್ಲಿ ಯೋಗವನ್ನು ಒಂದು ಕ್ರೀಡೆಯನ್ನಾಗಿ ಸೇರಿಸ ಲಾಗಿದೆ. 2036ರಲ್ಲಿ ಭಾರತದಲ್ಲಿ ಒಲಂಪಿಕ್ಸ್ ಆಯೋಜಿಸಲು ಚಿಂತಿಸಲಾಗಿದೆ. ಇದರಲ್ಲಿ ನಮ್ಮ ಯೋಗ ಪಟುಗಳು ಪಾಲ್ಗೊಂಡು ದೇಶದ ಕೀರ್ತಿ ಹೆಚ್ಚಿಸಲು ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಬೇಕು ಎಂದು ಸಲಹೆ ನೀಡಿದರು.

ಮಂಡ್ಯ ಜಿಲ್ಲಾ ಕಾರಾಗೃಹ ಅಧೀಕ್ಷಕ ಟಿ.ಕೆ.ಲೋಕೇಶ್ ಮಾತನಾಡಿ, ಕೋಪ, ತಾಪ, ದುಡುಕುತನದಿಂದ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿ ಕೈದಿಗಳು ಎನಿಸಿಕೊಂಡವರು ಜೈಲಿನಲ್ಲಿ ಬಂಧಿಯಾಗಿದ್ದಾರೆ. ನಮ್ಮಲ್ಲಿ ಅಂತವರಿಗೆ ನಿತ್ಯ ಯೋಗಭ್ಯಾಸ ಮಾಡಿಸಲಾಗುತ್ತಿದೆ. ಇದರಿಂದ ಅವರಲ್ಲಿ ಸಾಕಷ್ಟು ಬದಲಾವಣೆಯಾಗಿದೆ. ಈ ನಿಟ್ಟಿನಲ್ಲಿ ಯೋಗ ಪರಿಣಾಮಕಾರಿಯಾಗಿ ಕೆಲಸ ಮಾಡಿದೆ ಎಂದು ತಿಳಿಸಿದರು.

ವಿಜೇತರು: 8 ವರ್ಷದ ಒಳಗಿನ ವಿಭಾಗ : (ಬಾಲಕ) ರುಚಿತ್, ನಿತಿನ್, ಚಿರಂತ್, ಪುಣ್ಯವರ್ಧನ್ ಎಸ್. ರಾಜ್, ಶ್ರೀಕರ್ ಬಿ.ದೀಪಕ್, ರಾಘವ್. ಬಾಲಕಿಯರ ವಿಭಾಗ : ಹರ್ಷಾ, ಸನ್ನಿಧಿ, ಸಮೃದ್ಧಿ, ಶರದಿ ಎಸ್.ರಾವ್, ಗಾನವಿ, ಅರುಷಿ., 15 ವರ್ಷ 20 ವರ್ಷ ವಿಭಾಗ : ಬಾಲಕ : ಕವೀಶ್, ವಿನಯ್ ಕುಮಾರ್, ಅಭಿಷೇಕ್ ಹೆಗ್ಗಡೆ, ನಾಗಶ್ರೀ ಶೈಲ್, ಶಿವಾನಂದ್, ನಂದೀಶ್., ಯುವತಿಯರ ವಿಭಾಗ : ಮಧುಶಾಲಿನಿ, ಕಾವ್ಯಾ, ಅಂಕಿತಾ, ಜಾಹನ್ವಿ, ಮೋನಿಷಾ, ದೀಕ್ಷಾ., 21– 30 ಪುರುಷ : ಭರತ್ ಗೌಡ, ಶರತ್, ಸಂದೇಶ, ಅರುಣ್, ಆದಿತ್ಯಾ, ಯೋಗೇಶ್., ಮಹಿಳಾ : ಗಾನಶ್ರೀ, ದೀಪಾ, ಸ್ಪಂದನಾ, ಸುಚಿತ್ರಾ, ಭರತ್, ಲಕ್ಷ್ಮೀ ಯಾದವ್, 31– 40 ವಿಭಾಗ : ಪುರುಷ : ವಿನೋದ್ ರಾಜ್ , ಸನೀಶ್, ಘರಾನ್, ಆದರ್ಶ., ಮಹಿಳಾ ವಿಭಾಗ : ವೀಣಾ, ಸ್ಮಿತಾ, ಸ್ಪಂದನಾ, ಚೈತ್ರಾ, ರಶ್ಮಿ, ಪ್ರಿಯಾ, 50 ವರ್ಷ ಪುರುಷ : ಅಶ್ವತ್ಥ ನಾರಾಯಣ, ರವಿ ಪ್ರಕಾಶ್, ವಿಜಯ್ ರಘುನಾಥ್, ರಾಮಸ್ವಾಮಿ, ಮಹದೇವ ನಾಯಕ್, ಗೋಪಾಲ್, ಜಗದೀಶ್., ಮಹಿಳಾ ವಿಭಾಗ : ಸರೋಜಾ, ಶಶಿಬಾಲ ರಾಮಮೂರ್ತಿ, ಸುಬ್ಬಲಕ್ಷ್ಮಿ, ಸರೋಜಾ, ರೂಪಾ ಎನ್ ರಾವ್, ಲಲಿತಾ ಬಹುಮಾನ ಪಡೆದರು.

ಇದೇ ಸಂದರ್ಭ ಡಾ.ಗಣೇಶ್ ಕುಮಾರ್ ಹಾಗೂ ಡಾ. ಹೆಚ್.ಎ.ಶಶಿರೇಖಾ ಅವರಿಗೆ ಅವರ ಶಿಷ್ಯರಿಂದ ಗುರುವಂದನೆ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಮೈಸೂರು ವಿವಿ ದೈಹಿಕ ಶಿಕ್ಷಣ ನಿರ್ದೇಶಕ ಡಾ.ಸಿ.ವೆಂಕಟೇಶ, ಮೈಸೂರು ಯೋಗ ಒಕ್ಕೂಟದ ಗೌರವಾಧ್ಯಕ್ಷ ಡಾ.ಚಂದ್ರಶೇಖರ್, ಅಧ್ಯಕ್ಷ ಟಿ.ಜಲೇಂದ್ರ ಕುಮಾರ್, ಯೋಗ ಫೆಡರೇಶನ್ ಆಫ್ ಮೈಸೂರಿನ ಕಾರ್ಯದರ್ಶಿ ಶಶಿಕುಮಾರ್, ಯೋಗ ಸ್ಪೋರ್ಟ್ಸ್ ಫೌಂಡೇಶನ್ ಖಜಾಂಚಿ ಎಂ.ಎನ್.ಮೋಹನ್, ಕರ್ನಾಟಕ ಸ್ಟೇಟ್ಸ್ ಅಮೆಚೂರ್ ಯೋಗ ಅಸೋಸಿಯೇಷನ್ ಉಪಾಧ್ಯಕ್ಷ ಗಿರೀಶ್, ಕಾರ್ಯದರ್ಶಿ ಎ.ನಟರಾಜು, ಬಸವಮಾರ್ಗ ಸಂಸ್ಥೆಯ ಎಸ್.ರಾಜು, ಯೋಗ ಗುರುಗಳಾದ ಗೀತಾ ಕುಮಾರ್, ಪ್ರೇಮ್ ಕುಮಾರ್ ಸೇರಿದಂತೆ ಇತರರು ಇದ್ದರು.

ಕಾರ್ಯಕರ್ತರೇ ಬಿಜೆಪಿ ಮಾಲೀಕರು

ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ

ಮೈಸೂರು, ಜೂ.30(ಎಂಕೆ)– ಬಿಜೆಪಿಯಲ್ಲಿ ಕಾರ್ಯಕರ್ತರೆ ಮಾಲೀಕರಾಗಿದ್ದು, ಮಾಲೀಕರಾದವರಲ್ಲಿ ಪಕ್ಷವನ್ನು ಸರ್ವ ವ್ಯಾಪ್ತಿ, ಸರ್ವ ಸ್ಪರ್ಶಿ ಮಾಡಬೇಕಾದ ಜವಾಬ್ದಾರಿ ಇದೆ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ, ಬಿಜೆಪಿ ಕಾರ್ಯಕರ್ತರಿಗೆ ತಮ್ಮ ಜವಾಬ್ದಾರಿ ಕುರಿತು ಎಚ್ಚರಿಸಿದರು.

ನಗರದ ಚಾಮರಾಜಪುರಂನಲ್ಲಿರುವ ಬಿಜೆಪಿಗೆ ಕಚೇರಿಗೆ ವಿಧಾನಪರಿಷತ್ ಸದಸ್ಯರಾದ ಬಳಿಕ ಮೊದಲ ಬಾರಿಗೆ ಆಗಮಿಸಿದ ಅವರು, ಜಿಲ್ಲೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಭೆ ನಡೆಸಿದರು. ನಂತರ ನಡೆದ ಅಭಿನಂದನಾ ಕಾರ್ಯಕ್ರಮದಲ್ಲಿ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡಿದ ಅವರು, ದೇಶದಲ್ಲಿರುವ ಎಲ್ಲಾ ಪಕ್ಷಕ್ಕೂ ಮಾಲೀಕರಿದ್ದಾರೆ. ಕುಟುಂಬಕ್ಕೆ ಮೀಸಲಾಗಿವೆ. ಆದರೆ ಬಿಜೆಪಿಯಲ್ಲಿ ಕಾರ್ಯಕರ್ತರೆ ಮಾಲೀಕರು ಎಂದರು.

ನಾವೆಲ್ಲರೂ ನಮ್ಮ ಪಕ್ಷದ ಮಾಲೀಕರರಾಗಿದ್ದು, ಮಾಲೀಕರಾದ ಮೇಲೆ ಪಕ್ಷವನ್ನು ಸರ್ವ ವ್ಯಾಪ್ತಿ ಹಾಗೂ ಸರ್ವ ಸ್ಪರ್ಶಿ ಮಾಡುವುದು ನಮ್ಮ ಜವಾಬ್ದಾರಿಯಾಗಿದೆ. ಬಿಜೆಪಿ ಭಾರತವನ್ನು ಪರಮ ವೈಭವದ ಸ್ಥಿತಿಗೆ ತೆಗೆದುಕೊಂಡು ಹೋಗಬೇಕೆನ್ನುವ ಉದ್ದೇಶದಿಂದ ಕೆಲಸ ಮಾಡುತ್ತಿದೆ. ಸಮಾಜದಲ್ಲಿ ಯಾವುದೋ ಒಂದು ವರ್ಗ ನರಳುತ್ತಿದ್ದರೆ, ಅಜ್ಞಾನದಿಂದ ಕೂಡಿದ್ದರೆ, ರಾಷ್ಟ್ರೀಯ ಭಾವನೆಯೊಂದಿಗೆ ಜೋಡಿಸಿಕೊಳ್ಳದಿದ್ದರೆ ಪರಮ ವೈಭವದ ಸ್ಥಿತಿಗೆ ತಲುಪಲು ಸಾಧ್ಯವಿಲ್ಲ ಎಂದು ಹೇಳಿದರು.

ಪ್ರತಿಯೊಬ್ಬರ ಪ್ರಯತ್ನವೂ ಇರಬೇಕು. ಜೋಡೆತ್ತಿನ ರೀತಿಯಲ್ಲಿರಬೇಕು. ಜೋಡೆತ್ತು ಎಂದರೆ ಮಂಡ್ಯ ಜೋಡೆತ್ತಲ್ಲ. ರಾಷ್ಟ್ರವನ್ನು ಮುನ್ನಡೆಸಲು ಒಟ್ಟಿಗೆ ಹೆಜ್ಜೆಹಾಕುವ ಜೋಡೆತ್ತುಗಳಾಗಬೇಕು. ಲೋಕಸಭಾ ಚುನಾವಣೆ ಗೆಲುವಿನ ನಂತರ ನಮಗೆ ಸೋಲಿನ ಹತಾಶೆ ಕಡಿಮೆಯಾಗಿದೆ. ಗೆಲುವಿನ ಸಂಭ್ರಮದಲ್ಲಿದ್ದೇವೆ. ಇಂತಹ ಸಂದರ್ಭದಲ್ಲಿ ಮೈಮರೆತರೆ ಅದು ನಮ್ಮ ಸೋಲಿಗೆ ಮಾತ್ರವಲ್ಲದೆ ರಾಷ್ಟ್ರದ ಅಭ್ಯುದಯ ಸೋಲಿಗೂ ಕಾರಣವಾಗಬಹುದು. ಆದ್ದರಿಂದ ಇಂತಹ ಸಂದರ್ಭದಲ್ಲಿ ನಮ್ಮ ಜೊತೆಗಿಲ್ಲದ ವರ್ಗವನ್ನು ನಮ್ಮೊಂದಿಗೆ ಸೇರಿಕೊಳ್ಳಬೇಕು ಎಂದು ಸಲಹೆ ನೀಡಿದರು.

ನಾವು ಉಳಿದವರನ್ನು ಸಂಪರ್ಕ ಮಾಡಿ ಜೋಡಿಸುವ ಮೂಲಕ ಪಕ್ಷವನ್ನು ಗಟ್ಟಿಗೊಳಿಸುವ ಕೆಲಸ ಮಾಡಬೇಕು. ಪಕ್ಷ ವಿಧಾನ ಪರಿಷತ್ ಜವಾಬ್ದಾರಿ ಕೊಟ್ಟಿದ್ದು, ಇದು ಪಕ್ಷದ ಕಾರ್ಯಕರ್ತರ ನೋವಿಗೆ ಸ್ಪಂದಿಸಲು ಈ ಜವಾಬ್ದಾರಿ ಉಪಯೋಗವಾಗಬೇಕು. ರಾಜ್ಯದ ಸಮಸ್ಯೆಗಳಿಗೆ ಉಪಯೋಗವಾಗಬೇಕು. ಆ ನಿಟ್ಟಿನಲ್ಲಿ ವಿಧಾನ ಪರಿಷತ್ ಒಳಗೆ ಹಾಗೂ ಹೊರಗೆ ಕಾರ್ಯನಿರ್ವಹಿಸಲಾಗುವುದು ಎಂದು ಭರವಸೆ ನೀಡಿದರು. ಬಳಿಕ ನಗರ ಮತ್ತು ಜಿಲ್ಲಾ ಬಿಜೆಪಿ ವತಿಯಿಂದ ಸನ್ಮಾನಿಸಲಾಯಿತು. ಬಿಜೆಪಿ ರಾಜ್ಯ ಉಪಾಧ್ಯಕ್ಷ ರಾಜೇಂದ್ರ, ಶಾಸಕ ಟಿ.ಎಸ್. ಶ್ರೀವತ್ಸ, ನಗರಾಧ್ಯಕ್ಷ ಎಲ್.ನಾಗೇಂದ್ರ, ಪ್ರಧಾನ ಕಾರ್ಯದರ್ಶಿಗಳಾದ ಹೆಚ್.ಜಿ.ಗಿರಿಧರ್, ಬಿ.ಎಂ.ರಘು ಮತ್ತಿತರರು ಉಪಸ್ಥಿತರಿದ್ದರು.



ಬಿಜೆಪಿ ನಗರ ಮತ್ತು ಜಿಲ್ಲಾ ವಿಭಾಗದ ವತಿಯಿಂದ ಎಂಎಲ್‌ಸಿ ಸಿ.ಟಿ.ರವಿ ಅವರನ್ನು ಸನ್ಮಾನಿಸಲಾಯಿತು.

ರಿಯಾಸಿ ಭಯೋತ್ಪಾದಕ ದಾಳಿ: ರಜೌರಿಯ ಐದು ಸ್ಥಳಗಳಲ್ಲಿ NIA ದಾಳಿ

ರಿಯಾಸಿ ಭಯೋತ್ಪಾದಕ ದಾಳಿ ಪ್ರಕರಣಕ್ಕೆ ಸಂಬಂಧಿಸಿದಂತೆ ಎನ್‌ಐಎ ಜಮ್ಮು ಮತ್ತು ಕಾಶ್ಮೀರದ ರಜೌರಿ ಜಿಲ್ಲೆಯ ಐದು ಕಡೆಗಳಲ್ಲಿ ದಾಳಿ ನಡೆಸಿದೆ. ಜೂನ್ 15ರಂದು ಪ್ರಕರಣದ ತನಿಖೆಯನ್ನು ಎನ್‌ಐಎ ವಹಿಸಿಕೊಂಡಿತ್ತು. ಈ ಪ್ರಕರಣದ ತನಿಖೆಯ ಸಮಯದಲ್ಲಿ ಹೈಬ್ರಿಡ್ ಭಯೋತ್ಪಾದಕರು ಮತ್ತು ಭೂಗತ ಕಾರ್ಮಿಕರಿಗೆ ಸಂಬಂಧಿಸಿದ ಐದು ಸ್ಥಳಗಳಲ್ಲಿ ಎನ್‌ಐಎ ಶೋಧ ಕಾರ್ಯಾಚರಣೆ ನಡೆಸಿದೆ.

ಮೈಸೂರು ಮಿತ್ರ ಸೋಮವಾರ 1 ಜುಲೈ 2024


ಪ್ರವಾಹ ಆತಂಕದ ಮುಕ್ತಿ ನೀಡಿದ ಫ್ಲೈಓವರ್

● ಭಾಗಮಂಡಲ ಮೇಲ್ಸೇತುವೆ ನಿರ್ಮಾಣದಿಂದ ಸ್ಥಳೀಯರಿಗೆ ನೆಮ್ಮದಿ ● ಸಂಚಾರಕ್ಕೆ ಯಾವುದೇ ತೊಡಕಿಲ್ಲ

ಮಡಿಕೇರಿ, ಜೂ.30–ಕೊಡಗಿನ ಮೊದಲ ಫ್ಲೈ ಓವರ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಭಾಗಮಂಡಲ ಮೇಲ್ಸೇತುವೆ ನಿರ್ಮಾಣ ಸ್ಥಳೀಯ ನಿವಾಸಿಗಳಲ್ಲಿ ನೆಮ್ಮದಿ ಮೂಡಿಸಿದ್ದು, ಮಳೆಗಾಲದಲ್ಲಿ ಭಾಗ ಮಂಡಲ, ತಲಕಾವೇರಿ, ನಾಪೋಕ್ಲು ಮತ್ತಿತರ ಹತ್ತಾರು ಗ್ರಾಮಗಳ ನಿವಾಸಿಗಳಿಗೆ ಪ್ರವಾಹ ಆತಂಕದಿಂದ ಮುಕ್ತಿ ದೊರಕಿದೆ.

ಭಾಗಮಂಡಲದಲ್ಲಿ ಕಾವೇರಿ ನದಿ ನೀರು ಉಕ್ಕಿ ಹರಿದು ತೀವ್ರ ಪ್ರವಾಹವಾದರೂ ವಾಹನ ಮತ್ತು ಜನ ಸಂಚಾರಕ್ಕೆ ಯಾವುದೇ ತೊಡಕು ಉಂಟಾಗುವುದಿಲ್ಲ. ಕಾವೇರಿ ನೀರಾವರಿ ನಿಗಮದ ಮೂಲಕ ಫ್ಲೈ ಓವರ್ ಕಾಮಗಾರಿ ಅನುಷ್ಠಾನಗೊಂಡಿದ್ದು, ರಾಜ್ಯ ಸರ್ಕಾರ ಇದಕ್ಕಾಗಿ ಒಟ್ಟು 30 ಕೋಟಿ ರೂ. ವೆಚ್ಚ ಮಾಡಿದೆ. ಈ ಮೇಲ್ಸೇತುವೆ ನಿರ್ಮಾಣದಿಂದಾಗಿ ಭಾಗಮಂಡಲ ವ್ಯಾಪ್ತಿಯ ಹತ್ತಾರು ಹಳ್ಳಿಗಳ ಗ್ರಾಮಸ್ಥರು ಹಾಗೂ ತಲಕಾವೇರಿ ಮತ್ತು ಭಾಗಮಂಡಲ ಪುಣ್ಯಕ್ಷೇತ್ರಗಳಿಗೆ ಮಳೆಗಾಲ, ಪ್ರವಾಹದ ಯಾವುದೇ ಅಡ್ಡಿ ಆತಂಕಗಳಿಲ್ಲದೇ ಯಾತ್ರಾರ್ಥಿಗಳು ಪ್ರಯಾಣಿಸಬಹುದಾಗಿದೆ.

ಮಳೆಗಾಲದಲ್ಲಿ ಕಾವೇರಿ, ಕನ್ನಿಕೆ, ಸುಜ್ಯೋತಿ ನದಿಗಳು ಸಂಗಮವಾಗುವ ತ್ರಿವೇಣಿ ಸಂಗಮದಲ್ಲಿ ಸಹಜವಾಗಿಯೇ ಪ್ರವಾಹವಾಗುತ್ತದೆ. ಇದರಿಂದ ಮಡಿಕೇರಿ–ಭಾಗಮಂಡಲ–ತಲಕಾವೇರಿ ಮತ್ತು



ಭಾಗಮಂಡಲ–ಅಯ್ಯಂಗೇರಿ–ನಾಪೋಕ್ಲು ರಸ್ತೆಗಳ ಸಂಪರ್ಕ ಕಡಿದುಕೊಳ್ಳುವ ಜೊತೆಗೆ ರಸ್ತೆಗಳ ಮೇಲೆ ನೀರು ಹರಿಯುವ ಕಾರಣದಿಂದ ಎಲ್ಲಾ ವಾಹನಗಳ ಸಂಚಾರ ಸ್ಥಗಿತಗೊಳ್ಳುತ್ತಿತ್ತು.

ಎಡೆಬಿಡದೆ ಮಳೆ ಸುರಿದಲ್ಲಿ ತ್ರಿವೇಣಿ ಸಂಗಮ ಸಹಿತ ಭಾಗಮಂಡಲ ದ್ವೀಪದಂತಾಗಿ ಹೊರ ಜಗತ್ತಿನಿಂದ ಸಂಪರ್ಕ ಕಳೆದುಕೊಳ್ಳುತ್ತಿತ್ತು. ಶಾಲಾ–ಕಾಲೇಜುಗಳಿಗೆ ತೆರಳುವ ವಿದ್ಯಾರ್ಥಿಗಳಿಗೆ ಕಾವೇರಿ ನದಿ ಪ್ರವಾಹ ವಾರಗಳ ಕಾಲ ದಿಗ್ಬಂಧನ ಹೇರುತ್ತಿತ್ತು. ಮಳೆಗಾಲದಲ್ಲಿ ಆಸ್ಪತ್ರೆಗೆ ರೋಗಿಗಳನ್ನು ಕರೆದೊಯ್ಯಲು ಅಥವಾ ಮೃತದೇಹವನ್ನು ಬೆಡ್‌ಶೀಟ್‌ನಲ್ಲಿ ಕಟ್ಟಿ ಹೊತ್ತುಕೊಂಡು ಪ್ರವಾಹ ನೀರಿನಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ತೆರಳಬೇಕಾಗಿತ್ತು. ಈಗ ನಿರ್ಮಾಣ ಮಾಡಿರುವ ಫ್ಲೈಓವರ್ ಎಲ್ಲಾ ಸಮಸ್ಯೆಗಳಿಗೆ ಅಂತ್ಯ ಹಾಡಿದೆ.

ಈ ಮೇಲ್ಸೇತುವೆ ಭಾಗಮಂಡಲ ಪ್ರವೇಶ ದ್ವಾರದ ಎದುರಿನಿಂದ ಪ್ರಾರಂಭವಾಗಿ ತಲಕಾವೇರಿ ರಸ್ತೆಯನ್ನು ಸಂಪರ್ಕಿಸುತ್ತದೆ. ಮಾತ್ರವಲ್ಲದೇ ಭಾಗಮಂಡಲ ಹೃದಯ ಭಾಗದಿಂದ ಮೇಲ್ಭಾಗವಾಗಿ ಮತ್ತೊಂದು ಸಂಪರ್ಕ ರಸ್ತೆ ನಾಪೋಕ್ಲು ಕಡೆಗೆ ತೆರಳುವ ಸೇತುವೆ ಬಳಿ ಕೊನೆಗೊಳ್ಳುತ್ತದೆ. ಮಡಿಕೇರಿ–ಭಾಗಮಂಡಲ, ಭಾಗಮಂಡಲ–ತಲಕಾವೇರಿ, ಭಾಗಮಂಡಲ–ಅಯ್ಯಂಗೇರಿ ಎಂಬಂತೆ ಒಟ್ಟು 3 ಭಾಗಗಳಾಗಿ ವಿಂಗಡಿಸಲಾಗಿದೆ. ಮಳೆಗಾಲ ಸಹಿತ ವರ್ಷದ ಎಲ್ಲಾ ದಿನಗಳಲ್ಲೂ ಯಾವುದೇ ಅಡ್ಡಿ ಆತಂಕ, ವಾಹನ ದಟ್ಟಣೆಯ ಸಮಸ್ಯೆ ಇಲ್ಲದೇ ನಿಗದಿತ ಪ್ರದೇಶಗಳಿಗೆ ತಲುಪಬಹುದಾಗಿದೆ.

> “ಫ್ಲೈಓವರ್ ನಿರ್ಮಾಣದಿಂದ ಭಾಗಮಂಡಲ, ತಲಕಾವೇರಿ ಸೇರಿದಂತೆ ನೂರಾರು ಗ್ರಾಮಸ್ಥರು, ಸಾವಿರಾರು ಯಾತ್ರಾರ್ಥಿಗಳು, 600ಕ್ಕೂ ಅಧಿಕ ಶಾಲಾ–ಕಾಲೇಜು ಮಕ್ಕಳಿಗೆ ಅನುಕೂಲವಾಗಿದೆ. ಇದೀಗ ಪ್ರವಾಹ ಬಂದರೂ ರಸ್ತೆ ಸಂಪರ್ಕಕ್ಕೆ ಯಾವುದೇ ಸಮಸ್ಯೆಯಾಗಲ್ಲ. ಒಂದು ಕಾಲದಲ್ಲಿ ಅನಾರೋಗ್ಯ ಪೀಡಿತ, ಮೃತಪಟ್ಟವರನ್ನು ನದಿ ಪ್ರವಾಹದಲ್ಲೇ ಹೊತ್ತು ಸಾಗಲಾಗಿದೆ. ಬಾಳೆ ದಿಂಡಿನ ತೆಪ್ಪ ಮಾಡಿ ನದಿ ದಾಟಿದ ಉದಾಹರಣೆಯೂ ಇದೆ.
> –ಕುದುಕುಳಿ ಭರತ್, ಭಾಗಮಂಡಲ ಗ್ರಾಮಸ್ಥರು

> “ಮೇಲ್ಸೇತುವೆಯಿಂದಾಗಿ ತುಂಬಾ ಅನುಕೂಲವಾಗಿದೆ. ಆದರೆ, ಚರಂಡಿ ವ್ಯವಸ್ಥೆ ಸರಿಯಾಗದ ಕಾರಣ ರಸ್ತೆ ಮೇಲೆ ನೀರು ಹರಿಯುತ್ತಿದೆ. ಅಲ್ಲದೇ, ಫ್ಲೈಓವರ್ ಮೇಲಿನಿಂದಲೂ ಕೆಳ ಭಾಗದ ರಸ್ತೆಗೆ ನೀರು ಸುರಿಯುತ್ತದೆ. ಈ ಸಮಸ್ಯೆಯನ್ನು ಸರಿಪಡಿಸಬೇಕು.
> –ತೇಜಸ್, ಭಾಗಮಂಡಲ ನಿವಾಸಿ

ಎಲ್ಲೆಂದರಲ್ಲಿ ಕಸ ಎಸೆಯುವವರಿಗೆ ದಂಡ

ವಿರಾಜಪೇಟೆ ಪುರಸಭೆ ವಿಶೇಷ ಸಭೆಯಲ್ಲಿ ನಿರ್ಧಾರ



ಉಪವಿಭಾಗಾಧಿಕಾರಿ ವಿನಾಯಕ್ ನರ್ವಾಡೆ ಅಧ್ಯಕ್ಷತೆಯಲ್ಲಿ ನಡೆದ ಪುರಸಭೆ ವಿಶೇಷ ಸಭೆಯಲ್ಲಿ ಸದಸ್ಯರು ಚರ್ಚಿಸಿದರು.

ವಿರಾಜಪೇಟೆ, ಜೂ.30–ಪಟ್ಟಣದ ಎಲ್ಲೆಂದರಲ್ಲಿ ಕಸ ಎಸೆಯುವವರಿಗೆ ದಂಡ ವಿಧಿಸಲು ಪುರಸಭೆ ವಿಶೇಷ ಸಭೆಯಲ್ಲಿ ನಿರ್ಧರಿಸಲಾಯಿತು.

ವಿರಾಜಪೇಟೆ ಪುರಸಭೆ ಆಡಳಿತಾಧಿಕಾರಿಯಾದ ಉಪವಿಭಾಗಾಧಿಕಾರಿ ವಿನಾಯಕ್ ನರ್ವಾಡೆ ಅಧ್ಯಕ್ಷತೆಯಲ್ಲಿ ನಡೆದ ವಿಶೇಷ ಸಭೆಯಲ್ಲಿ ಪಟ್ಟಣದ ರಸ್ತೆಬದಿ ಸೇರಿದಂತೆ ಎಲ್ಲೆಂದರಲ್ಲಿ ಕಸ ಎಸೆಯಲಾಗುತ್ತಿದೆ. ಇದರಿಂದ ಮಾಲಿನ್ಯ ಹೆಚ್ಚಾಗಿ ಮಳೆಗಾಲದಲ್ಲಿ ರೋಗ ರುಜಿನಗಳು ಹರಡುತ್ತದೆ. ಆದ್ದರಿಂದ ಎಲ್ಲೆಂದರಲ್ಲಿ ಕಸ ಎಸೆಯುವವರನ್ನು ಪತ್ತೆಹಚ್ಚಿ ದಂಡ ವಿಧಿಸಲು ತೀರ್ಮಾನಿಸಲಾಯಿತು.

ಸಭೆಯ ಆರಂಭದಲ್ಲಿ ಸದಸ್ಯ ಸಿ.ಕೆ.ಪೃಥ್ವಿನಾಥ್ ಮಾತನಾಡಿ, ಗ್ರಾಮಾಂತರ ಪ್ರದೇಶದಿಂದ ಕಸ ತಂದು ಪಟ್ಟಣದ ಎಲ್ಲೆಂದರಲ್ಲಿ ಎಸೆಯಲಾಗುತ್ತಿದೆ. ಇವರನ್ನು ಪತ್ತೆಹಚ್ಚಿ 5 ಸಾವಿರ ರೂ. ದಂಡ ಹಾಕುವಂತೆ ಒತ್ತಾಯಿಸಿದರು. ಮತ್ತೊಬ್ಬ ಸದಸ್ಯರಾದ ಎಂ.ಕೆ.ದೇಚಮ್ಮ ಮಾತನಾಡಿ, ಬೀದಿಯಲ್ಲಿ ಕಸ ಹಾಕುವುದರಿಂದ ಬೀದಿನಾಯಿಗಳ ಹಾವಳಿ ಹೆಚ್ಚಾಗುತ್ತಿವೆ. ಇದನ್ನು ಪತ್ತೆಹಚ್ಚಲು ಅಗತ್ಯ ಸಿಬ್ಬಂದಿ ನೇಮಿಸಬೇಕು. ಕಸ ಸಂಗ್ರಹ ವಾಹನ ಎಲ್ಲಾ ಕಡೆ ಹೋಗಲು ಸಾಧ್ಯವಾಗುತ್ತಿಲ್ಲ ಎಂದು ಸಮಸ್ಯೆ ಬಗ್ಗೆ ಪ್ರಸ್ತಾಪಿಸಿ, ಸೂಕ್ತ ವ್ಯವಸ್ಥೆ ಕಲ್ಪಿಸುವಂತೆ ಮನವಿ ಮಾಡಿದರು.

ಸದಸ್ಯ ಡಿ.ಪಿ.ರಾಜೇಶ್ ಮಾತನಾಡಿ, ಈ ಸಮಸ್ಯೆಗೆ ಪ್ಲಾಸ್ಟಿಕ್ ಕ್ಯಾರಿ ಬ್ಯಾಗ್‌ಗಳು ಕಾರಣವಾಗುತ್ತಿವೆ. ಮೊದಲು ಪ್ಲಾಸ್ಟಿಕ್ ಬಳಕೆ ನಿರ್ಮೂಲನೆಗೆ ಸೂಕ್ತ ಕ್ರಮ ವಹಿಸಬೇಕು. ಸಭೆಯಲ್ಲಿ ಏನೇ ನಿರ್ಧರಿಸಿದರು ಅದರ ಕಾರ್ಯಗತ ಮಾಡಲು ಅಧಿಕಾರಿಗಳಿಗೆ ಇಚ್ಛಾಶಕ್ತಿ ಇರಬೇಕು ಎಂದರು.

ನಾಮನಿರ್ದೇಶಿತ ಸದಸ್ಯ ಶಬರೀಶ್ ಶೆಟ್ಟಿ ಮಾತನಾಡಿ, ಪಟ್ಟಣದಲ್ಲಿ ಬೀದಿನಾಯಿ ಹಾವಳಿಯಿಂದ ಶಾಲಾ ಮಕ್ಕಳು ಬಯಪಡುವಂತಾಗಿದೆ. ಪಟ್ಟಣದಲ್ಲಿ 8 ಸಾವಿರ ವಿದ್ಯಾರ್ಥಿಗಳಿದ್ದಾರೆ. ಬೀದಿನಾಯಿ ಹಾವಳಿ ತಡೆಗೆ ಕೂಡಲೇ ಕ್ರಮ ಕೈಗೊಳ್ಳಬೇಕು. ನಗರದ ರಾಜಕಾಲುವೆ, ಕೈತೋಡುವಿನಲ್ಲಿ ಒತ್ತುವರಿಯಾಗಿದೆ. ಪುರಸಭೆ ಸರ್ವೆ ನಡೆಸಿ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಸಭೆಯಲ್ಲಿ ಸದಸ್ಯರಾದ ರಂಜಿ ಪೂಣಚ್ಚ, ಜಿ.ಜಿ.ಮೋಹನ್, ಎಸ್.ಹೆಚ್.ಮತೀನ್, ಡಿ.ಪಿ.ರಾಜೇಶ್, ಮಹ್ಮದ್ ರಫಿ, ಪಸಿಹಾ ತಬಸಮ್, ಪುರಸಭೆ ಮುಖ್ಯಾಧಿಕಾರಿ ಚಂದ್ರಕುಮಾರ್, ತಾಲೂಕು ಆರೋಗ್ಯಾಧಿಕಾರಿ ಯತಿರಾಜ್, ಅರಣ್ಯಾಧಿಕಾರಿ ದೇವಯ್ಯ, ಸೆಸ್ಕ್ ಸಹಾಯಕ ಇಂಜಿನಿಯರ್ ಸುರೇಶ್, ನಗರ ಪೊಲೀಸ್ ಠಾಣಾಧಿಕಾರಿ ರವೀಂದ್ರ, ಸಮಾಜ ಕಲ್ಯಾಣಾಧಿಕಾರಿ ಪ್ರೀತಿ ಚಿಕ್ಕಮಾದಯ್ಯ, ಪುರಸಭೆ ಇಂಜಿನಿಯರ್ ರಾಮಣ್ಣಗೌಡ ಮತ್ತಿತರರು ಹಾಜರಿದ್ದರು.

ಈಜಲು ಹೋದ ಯುವಕ ಸಾವು

ಸುಂಟಿಕೊಪ್ಪ, ಜೂ.30–ಕೊಡಗಿಗೆ ಪ್ರವಾಸಕ್ಕೆ ಬಂದಿದ್ದ ಯುವಕ ಈಜಲು ತೆರಳಿ ಮುಳುಗಿ ಮೃತಪಟ್ಟಿರುವ ಘಟನೆ ಸಮೀಪದ ಹಾರಂಗಿ ಹಿನ್ನೀರು ಪ್ರದೇಶವಾದ ಹಾದ್ರೆಹೆರೂರಿನಲ್ಲಿ ಭಾನುವಾರ ನಡೆದಿದೆ.

ಮೈಸೂರು ನಿವಾಸಿ ಶಶಿ (30) ಮೃತಪಟ್ಟಿದ್ದು, ಈತ ಮೈಸೂರಿನಿಂದ 15 ಮಂದಿ ತಂಡದೊಂದಿಗೆ ಕೊಡಗಿಗೆ ಪ್ರವಾಸಕ್ಕೆ ಬಂದಿದ್ದ. ಸಂಜೆ ಹಾದ್ರೆಹೆರೂರಿನ ಹಾರಂಗಿ ಹಿನ್ನೀರು ಪ್ರದೇಶದಲ್ಲಿ ಈಜಲು ನೀರಿಗೆ ಇಳಿದಿದ್ದಾನೆ. ಈ ವೇಳೆ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾನೆ.

ಬಳಿಕ ಸ್ಥಳಕ್ಕೆ ಭೇಟಿ ನೀಡಿದ ಸುಂಟಿಕೊಪ್ಪ ಠಾಣೆ ಪೊಲೀಸರು, ಈಜು ತಜ್ಞರು, ಅಗ್ನಿಶಾಮಕ ಸಿಬ್ಬಂದಿಯೊಂದಿಗೆ ಮೃತದೇಹ ಪತ್ತೆಗೆ ಕಾರ್ಯಾಚರಣೆ ಕೈಗೊಂಡಿದ್ದು, ರಾತ್ರಿ ಆಗಿದ್ದರಿಂದ ಶವ ಇನ್ನೂ ಪತ್ತೆಯಾಗಿಲ್ಲ.



ಹಾದ್ರೆಹೆರೂರು ಗ್ರಾಮದ ಹಾರಂಗಿ ಹಿನ್ನೀರು ಪ್ರದೇಶ.

ಕಾಡು ಸೇರಿದ ಆನೆಗಳ ಹಿಂಡು



ಗೋಣಿಕೊಪ್ಪ, ಜೂ.30– ಪೊನ್ನಂಪೇಟೆ ತಾಲೂಕಿನ ಕೆಲ ಗ್ರಾಮಗಳ ಕಾಫಿ ತೋಟಗಳಲ್ಲಿ ಬೀಡುಬಿಟ್ಟಿದ್ದ ಆನೆ ಹಿಂಡನ್ನು ಕಾಡಿಗಟ್ಟುವಲ್ಲಿ ಅರಣ್ಯ ಇಲಾಖೆ ಯಶಸ್ವಿಯಾಗಿದೆ.

ಕಿರುಗೂರು, ಮತ್ತೂರು, ಅರ್ವತೋಕ್ಲು, ಬೇಗೂರು ಗ್ರಾಮಗಳ ಕಾಫಿ ತೋಟಗಳಲ್ಲಿ ಕೆಲ ದಿನಗಳಿಂದ ಬೀಡುಬಿಟ್ಟಿದ್ದ ಕಾಡಾನೆಗಳ ಹಿಂಡು ಅಪಾರ ಬೆಳೆಗಳನ್ನು ನಾಶಪಡಿಸಿವೆ. ಕಾಡಾನೆಗಳು ತೋಟಗಳಲ್ಲಿ ಬೀಡುಬಿಟ್ಟಿರುವ ಮಾಹಿತಿ ಅರಿತ ಪೊನ್ನಂಪೇಟೆಯ ಅರಣ್ಯಾಧಿಕಾರಿಗಳು, ಸಿಬ್ಬಂದಿ ಮತ್ತು ಆರ್‌ಆರ್‌ಟಿ ತಂಡ, ಆರ್‌ಎಫ್‌ಓ ಶಂಕರ್ ಅವರ ನಿರ್ದೇಶನದಂತೆ ಭಾನುವಾರ ಸಂಜೆ ಅರ್ವತೋಕ್ಲು ಗ್ರಾಮದ ಕೀರೆಹೊಳೆ ಮೂಲಕ ತಿತಿಮತಿ ಮೀಸಲು ಅರಣ್ಯಕ್ಕೆ ಓಡಿಸುವಲ್ಲಿ ಯಶಸ್ವಿಯಾಯಿತು.

ಕಾರ್ಯಾಚರಣೆಯಲ್ಲಿ ಆರ್‌ಎಫ್‌ಓ ಶಂಕರ್, ಡಿಆರ್‌ಎಫ್‌ಓ ದಿವಾಕರ್, ಗಸ್ತು ಅರಣ್ಯ ಪಾಲಕ ಅಂತೋಣಿ ಪ್ರಕಾಶ್ ಹಾಗೂ ಆರ್‌ಆರ್‌ಟಿ ತಂಡದ ಸಿಬ್ಬಂದಿ ಹರೀಶ್, ಸಂಜು, ಮಂಜು, ಸಚಿನ್, ಅರುಣ್, ಶಶಾಂಕ್ ಇತರರು ಪಾಲ್ಗೊಂಡಿದ್ದರು.

ಗಾಂಜಾ ಮಾರುತ್ತಿದ್ದವನ ಬಂಧನ



ತೋಮಿಜುದ್ದೀನ್

ಸುಂಟಿಕೊಪ್ಪ, ಜೂ.30– ಮಾದಾಪುರದ ನಂದಿಮೊಟ್ಟೆಯಲ್ಲಿ ಗಾಂಜಾ ಮಾರುತ್ತಿದ್ದ ಅಸ್ಸಾಂ ಮೂಲದ ಆರೋಪಿಯನ್ನು ಮಾಲು ಸಹಿತ ಪೊಲೀಸರು ಬಂಧಿಸಿದ್ದಾರೆ.

ನಂದಿಮೊಟ್ಟೆಯಲ್ಲಿ ನೆಲೆಸಿರುವ ತೋಮಿಜುದ್ದೀನ್ ಆಲಿಯಾಸ್ ಅನ್ವರ್ ಹುಸೈನ್(23) ಬಂಧಿತ. ಈತ ಸುಂಟಿಕೊಪ್ಪ ಮತ್ತು ಕುಶಾಲನಗರ ವ್ಯಾಪ್ತಿಯಲ್ಲಿ ಗಾಂಜಾ ಮಾರುತ್ತಿದ್ದು, ಸುಂಟಿಕೊಪ್ಪದ ಉಲುಗುಲಿ ತೋಟದ ಬಳಿ ಗಾಂಜಾ ಮಾರುತ್ತಿದ್ದಾಗ ಬಂಧಿಸಲಾಗಿದೆ. 750 ಗ್ರಾಂ ಗಾಂಜಾ ವಶಪಡಿಸಿಕೊಂಡಿರುವ ಸುಂಟಿಕೊಪ್ಪ ಠಾಣೆ ಪೊಲೀಸರು ಆರೋಪಿಯನ್ನು ನ್ಯಾಯಾಲಯ ವಶಕ್ಕೆ ಒಪ್ಪಿಸಿದ್ದಾರೆ.

ಇಂದು ಕಕ್ಕಬ್ಬೆಯಲ್ಲಿ ಮಾನವ ಸರಪಳಿ

ಮಡಿಕೇರಿ, ಜೂ.30–ಕೊಡಗು ಜಿಲ್ಲೆಯ ವಿವಿಧೆಡೆ ನಡೆಯುತ್ತಿರುವ ಬೃಹತ್ ಭೂ ಪರಿವರ್ತನೆ ಮತ್ತು ಭೂ ವಿಲೇವಾರಿ ಸ್ಥಗಿತಗೊಳಿಸುವಂತೆ ಒತ್ತಾಯಿಸಿ ಜು.1ರಂದು ಕಕ್ಕಬ್ಬೆ ಜಂಕ್ಷನ್‌ನಲ್ಲಿ ಬೆಳಗ್ಗೆ 10.30ಕ್ಕೆ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ವತಿಯಿಂದ ಮಾನವ ಸರಪಳಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ತಿಳಿಸಿದ್ದಾರೆ.



ಎನ್.ಯು.ನಾಚಪ್ಪ

ಸಿದ್ದಾಪುರ, ಕಕ್ಕಬ್ಬೆ, ಕುಂಜಿಲ, ಯವಕಪಾಡಿ, ನಾಲಡಿ ಸುತ್ತಮುತ್ತಲಿನ ಕೃಷಿ ಭೂಮಿಯನ್ನು ವಾಣಿಜ್ಯ ದುರುದ್ದೇಶದಿಂದ ಪರಿವರ್ತಿಸಲಾಗುತ್ತಿದೆ. ಇದರಿಂದ ನಮ್ಮ ಪ್ರಾಚೀನ ಭೂಮಿ ಮತ್ತು ದೀರ್ಘಕಾಲಿಕ ಜಲಮೂಲಗಳನ್ನು ಲೂಟಿ ಮಾಡಲಾಗುತ್ತಿದೆ. ಇದು ಸ್ಥಳೀಯ ಕೊಡವರ ಅಸ್ಮಿತೆ, ಅಸ್ತಿತ್ವ ಮತ್ತು ಕೊಡವ ಹಿತಾಸಕ್ತಿಗಳಿಗೆ ಹಾನಿಕಾರಕವಾಗಿದೆ. ಆದ್ದರಿಂದ ಎಲ್ಲಾ ಕೊಡವರು ಮಾನವ ಸರಪಳಿಯಲ್ಲಿ ಭಾಗವಹಿಸಿ ಪವಿತ್ರ ಕೊಡವ ಲ್ಯಾಂಡ್ ಸಂರಕ್ಷಣೆಗಾಗಿ ಪಣತೊಡಬೇಕು ಎಂದು ಮನವಿ ಮಾಡಿದ್ದಾರೆ.

ಮರ ಬಿದ್ದು ಮನೆ ಸಂಪೂರ್ಣ ಜಖಂ

ಕುಶಾಲನಗರ, ಜೂ.30– ತಾಲೂಕಿನ ನಂಜರಾಯಪಟ್ಟಣ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಬ್ಬಿನಗದ್ದೆ ಗ್ರಾಮದಲ್ಲಿ ಮರ ಬಿದ್ದು ಮನೆ ಸಂಪೂರ್ಣವಾಗಿ ಜಖಂ ಆಗಿ ಅಪಾರ ನಷ್ಟ ಉಂಟಾಗಿದೆ.

ಗ್ರಾಮದ ನಿವಾಸಿ ಆಟೋ ಚಾಲಕ ವಿಶ್ವನಾಥ ಅವರ ಮನೆ ಮೇಲೆ ಮರ ಉರುಳಿ ಬಿದ್ದಿದೆ. ಮನೆಯ ಛಾವಣಿ ಹಾಗೂ ಅಡುಗೆ ಕೋಣೆ ಸೇರಿದಂತೆ ಮನೆ ಜಖಂಗೊಂಡಿದೆ. ಗ್ರಾಪಂ ಅಧ್ಯಕ್ಷ ಸಿ.ಎಲ್.ವಿಶ್ವ, ಸದಸ್ಯರು ಹಾಗೂ ಅಧಿಕಾರಿಗಳು ಭೇಟಿ ನೀಡಿ, ಪರಿಶೀಲಿಸಿದರು.



ಆರ್‌ಬಿಐ ಲೋಕಪಾಲ ಯೋಜನೆ ಜನಜಾಗೃತಿ



ಚಾಮರಾಜನಗರದಲ್ಲಿ ನಡೆದ ಭಾರತೀಯ ರಿಸರ್ವ್ ಬ್ಯಾಂಕ್ ಏಕೀಕೃತ ಲೋಕಪಾಲ ಯೋಜನೆಯ ಜನಜಾಗೃತಿ ಕಾರ್ಯಕ್ರಮದಲ್ಲಿ ಲೋಕಪಾಲನ ವ್ಯವಸ್ಥಾಪಕರಾದ ಮಂಗಳಂ ವೆಂಕಟರಮನ್, ಶಾಹಿನ್ ಕೌಸರ್‌ಖಾನ್, ವಿನೋದ್ ನಾಯಕ್, ರಾಯ್ ಶಿವಕುಮಾರ್ ಭಾಗವಹಿಸಿದ್ದರು

ಚಾಮರಾಜನಗರ, ಜೂ.30–ನಗರದ ಡಾ.ರಾಜ್‌ಕುಮಾರ್ ಭವನದಲ್ಲಿ ಗ್ರಾಹಕರ ಅನುಕೂಲಕ್ಕಾಗಿ ಭಾರತೀಯ ರಿಸರ್ವ್ ಬ್ಯಾಂಕ್ ಏಕೀಕೃತ ಲೋಕಪಾಲ ಯೋಜನೆಯ ಜನಜಾಗೃತಿ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದಲ್ಲಿ ಬ್ಯಾಂಕಿಂಗ್ ಲೋಕಪಾಲನ ವ್ಯವಸ್ಥಾಪಕರಾದ ಮಂಗಳಂ ವೆಂಕಟರಮನ್ ಮಾತನಾಡಿ, ಗ್ರಾಹಕರ ದೂರುಗಳನ್ನು ಪರಿಹರಿಸಲು ಬ್ಯಾಂಕ್‌ಗಳಿಗೆ ಆರ್‌ಬಿಐ ಸೂಚನೆ ನೀಡಿದೆ. ಈ ಹಿನ್ನೆಲೆಯಲ್ಲಿ ಕಾಲಮಿತಿಯಲ್ಲಿ ಸಮಸ್ಯೆ ಪರಿಹರಿಸುವುದು ಹೇಗೆ ಎಂಬುದರ ಬಗ್ಗೆ ಮಾಹಿತಿ ನೀಡಿದರು.

ಲೋಕಪಾಲ ಯೋಜನೆಯಡಿ ಪರಿಹಾರ ವಿಧಾನ, ದೂರುಗಳನ್ನು ಆರ್‌ಬಿಐನ ಸಿಎಂಎಸ್ ಪೋರ್ಟಲ್ ಮತ್ತು ಯೋಜನೆಯ ಇತರ ಮಾಧ್ಯಮಗಳ ಮೂಲಕ ಹೇಗೆ ಸಲ್ಲಿಸಬೇಕು ಹಾಗೂ ವಂಚನೆ ತಡೆಯುವ ಮುಂಜಾಗ್ರತಾ ಕ್ರಮಗಳ ಬಗ್ಗೆ ವಿವರಣೆ ನೀಡಿದರು.

ಕಾರ್ಯಕ್ರಮದಲ್ಲಿ ಗ್ರಾಹಕರ ಪ್ರಶ್ನೆಗಳಿಗೆ ಬ್ಯಾಂಕ್‌ನ ಶಾಹಿನ್ ಕೌಸರ್‌ಖಾನ್, ವಿನೋದ್ ನಾಯಕ್, ರಾಯ್ ಶಿವಕುಮಾರ್ ಉತ್ತರಿಸಿದರು. ಇದೇ ವೇಳೆ ಲೋಕಪಾಲ ಯೋಜನೆ ಕರಪತ್ರ ಮತ್ತು ಕಿರು ಹೊತ್ತಿಗೆಯನ್ನು ಗ್ರಾಹಕರಿಗೆ ಹಂಚಲಾಯಿತು. ಸುಮಾರು 150 ಗ್ರಾಹಕರು ಭಾಗವಹಿಸಿದ್ದರು.

ಜು.20, ಚಾಮರಾಜೇಶ್ವರ ರಥೋತ್ಸವ

● ಜಿಲ್ಲಾಡಳಿತದಿಂದ ಸಕಲ ಸಿದ್ಧತೆ ● ರಥ ಕಟ್ಟುವ ಕಾರ್ಯ ಆರಂಭ

ಚಾಮರಾಜನಗರ, ಜೂ.30–ಆಷಾಢ ಮಾಸದ ಶ್ರೀ ಚಾಮರಾಜೇಶ್ವರಸ್ವಾಮಿ ರಥೋತ್ಸವ ಗಡಿ ಜಿಲ್ಲೆ ಚಾಮರಾಜನಗರದಲ್ಲಿ ಜು.20ರಂದು ನಡೆಯಲಿದ್ದು, ಜಿಲ್ಲಾ ಹಾಗೂ ತಾಲೂಕು ಆಡಳಿತ ಸಕಲ ಸಿದ್ಧತೆ ಕೈಗೊಂಡಿದೆ.

ಕೆಂಪನಂಜಾಂಬ ಸಮೇತ ಚಾಮರಾಜೇಶ್ವರಸ್ವಾಮಿ ರಥೋತ್ಸವ ಹಿನ್ನೆಲೆಯಲ್ಲಿ ರಥ ಕಟ್ಟುವ ಕೆಲಸ ಭರದಿಂದ ಸಾಗಿದೆ. ಕಳೆದ ಎರಡು ವರ್ಷದಿಂದ ಹೊಸ ರಥೋತ್ಸವ ನಡೆಯುತ್ತಿದ್ದು, ಈ ಬಾರಿಯೂ ರಥೋತ್ಸವದಲ್ಲಿ ಹೆಚ್ಚಿನ ಭಕ್ತರು ಪಾಲ್ಗೊಳ್ಳುವ ನಿರೀಕ್ಷೆಯಿದೆ. ಜಿಲ್ಲಾಡಳಿತ ಸುಸೂತ್ರವಾಗಿ ನಡೆಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳುತ್ತಿದೆ.

2017ರಲ್ಲಿ ಕಿಡಿಗೇಡಿಯೊಬ್ಬ ಹಚ್ಚಿದ ಬೆಂಕಿಗೆ ರಥ ಸುಟ್ಟು ಭಸ್ಮವಾಗಿತ್ತು. ಹೀಗಾಗಿ ಐದು ವರ್ಷಗಳ ಕಾಲ ರಥೋತ್ಸವ ನಡೆದಿರಲಿಲ್ಲ. 1.20 ಕೋಟಿ ರೂ. ವೆಚ್ಚದಲ್ಲಿ ನೂತನ ರಥ ನಿರ್ಮಿಸಲಾಗಿದ್ದು, ಕಳೆದ ಎರಡು ವರ್ಷದಿಂದ ಆಷಾಢ ಮಾಸದ ಪೂರ್ಣಿಮೆ ದಿನದಂದು ಪೂರ್ವಾಷಾಢ ನಕ್ಷತ್ರದಲ್ಲಿ ಚಾಮರಾಜೇಶ್ವರ ರಥೋತ್ಸವ ಅದ್ಧೂರಿಯಾಗಿ ನಡೆಯುತ್ತಿದೆ.



ಚಾಮರಾಜೇಶ್ವರ ರಥ ಕಟ್ಟುವ ಕಾರ್ಯಕ್ಕೆ ಚಾಲನೆ ನೀಡಲಾಯಿತು.

ಆಷಾಢದಲ್ಲಿ ಏಕೆ?: ಚಾಮರಾಜ ಒಡೆಯರ್ ಹುಟ್ಟಿದ ನಕ್ಷತ್ರದ ಅನುಸಾರವಾಗಿ ಚಾಮರಾಜೇಶ್ವರಸ್ವಾಮಿ ರಥೋತ್ಸವ ನಡೆಸಿಕೊಂಡು ಬರಲಾಗುತ್ತಿದೆ. ಮಹಾರಾಜರು ಹುಟ್ಟಿದ ನಕ್ಷತ್ರ ಆಷಾಢ ಮಾಸದ ಪೂರ್ವಾಷಾಢ ನಕ್ಷತ್ರ ದಿನ. ಹೀಗಾಗಿ ಅವರು ಹುಟ್ಟಿದ ನಕ್ಷತ್ರದಂದು ರಥೋತ್ಸವ ನಡೆಸಿಕೊಂಡು ಬರಲಾಗುತ್ತಿದೆ.

ನವಜೋಡಿ ಕಲರವ: ಆಷಾಢ ಮಾಸ ಬಂತೆಂದರೆ ನವದಂಪತಿ ಬೇರೆ ಇರಬೇಕಾದ ಸಂದರ್ಭ. ಆದರೆ, ಆಷಾಢ ಮಾಸದಲ್ಲಿ ಇಲ್ಲಿ ರಥೋತ್ಸವ ನಡೆಯುವುದರಿಂದ ಜೋಡಿಯಾಗಿ ಬಂದು ತೇರಿಗೆ ಹಣ್ಣು–ಧವನ ಎಸೆದರೆ ಇಷ್ಟಾರ್ಥ ಸಿದ್ಧಿಸುತ್ತದೆ ಎಂಬ ಪ್ರತೀತಿ ಇದೆ.

ಈ ಕಾರಣದಿಂದ ಜಿಲ್ಲೆ, ಹೊರ ಜಿಲ್ಲೆಗಳಿಂದಲೂ ನವದಂಪತಿ ಇಲ್ಲಿಗೆ ಬಂದು ಚಾಮರಾಜೇಶ್ವರ ದರ್ಶನ ಪಡೆಯುತ್ತಾರೆ. ರಥಕ್ಕೆ ಹಣ್ಣು ಧವನ ಎಸೆಯುವುದು ವಾಡಿಕೆ. ಹೀಗಾಗಿ ಜಾತ್ರೆಯಂದು ನಗರದ ಎಲ್ಲೆಡೆ ನವದಂಪತಿಗಳದ್ದೇ ಕಲರವ.

ಆರು ರಥಗಳ ವೈಭವ: ಚಾಮರಾಜೇಶ್ವರಸ್ವಾಮಿ ದೊಡ್ಡ ರಥದ ಮುಂದೆ ಗಣಪತಿ, ಸುಬ್ರಹ್ಮಣ್ಯಸ್ವಾಮಿ, ಚಂಡಿಕೇಶ್ವರ ಚಿಕ್ಕರಥ, ಮಹಾರಾಜರ ಉತ್ಸವ ಮೂರ್ತಿ ಸಾಗುತ್ತವೆ. ದೊಡ್ಡರಥದ ಹಿಂದೆ ಚಾಮುಂಡೇಶ್ವರಿ ಅಮ್ಮನವರ ಚಿಕ್ಕರಥ ಸಾಗುತ್ತದೆ. ಇದು ಜಾತ್ರೆಯ ಮತ್ತೊಂದು ವಿಶೇಷವಾಗಿದೆ.

ಕಳ್ಳರಿಂದ ಮನೆ ಮಾಲೀಕನ ಮೇಲೆ ಹಲ್ಲೆ



ಕುಲಗಾಣ ಗ್ರಾಮದ ಕಳ್ಳತನವಾದ ಮನೆಗಳನ್ನು ಪೊಲೀಸರು ಪರಿಶೀಲಿಸಿದರು.

ಬೇಗೂರು, ಜೂ.30– ಸರಣಿ ಮನೆಗಳವು ನಡೆಸಿದ ಕಳ್ಳರು, ನಂತರ ಮನೆ ಮಾಲೀಕನ ಮೇಲೆ ಹಲ್ಲೆ ನಡೆಸಿರುವ ಘಟನೆ ಸಮೀಪದ ಕುಲಗಾಣ ಗ್ರಾಮದಲ್ಲಿ ನಡೆದಿದೆ.

ಮೊದಲು ಗ್ರಾಮದ ಮಂಜುಳಾ, ಗುರುಸ್ವಾಮಿ, ಮಹದೇವಪ್ಪ ಅವರ ಮನೆಗಳ ಬೀಗ ಮುರಿದು ಕನ್ನ ಹಾಕಿದ ಕಳ್ಳರು, ನಂಜುಂಡಪ್ಪ ಅವರ ಮನೆಗೆ ನುಗ್ಗಿ ಕಳ್ಳತನ ಮಾಡುತ್ತಿದ್ದಾಗ ಸಿಕ್ಕಿಬಿದ್ದಿದ್ದಾರೆ. ಇದರಿಂದ ಗಾಬರಿಗೊಂಡು ಮಾಲೀಕ ನಂಜುಂಡಪ್ಪ ಕೂಗಿಕೊಂಡಿದ್ದಾರೆ. ಬಳಿಕ ಕಳ್ಳರು ನಂಜುಂಡಪ್ಪನ ಮೇಲೆ ಹಲ್ಲೆ ನಡೆಸಿ ಪರಾರಿಯಾಗಿದ್ದಾರೆ.

ಬಳಿಕ ನಂಜುಂಡಪ್ಪ ಬೇಗೂರು ಪೊಲೀಸ್ ಠಾಣೆಗೆ ದೂರು ನೀಡಿದರು. ಶ್ವಾನದಳದೊಂದಿಗೆ ಕಳ್ಳನವಾದ ಮನೆಗಳನ್ನು ಪೊಲೀಸರು ಪರಿಶೀಲಿಸಿದರು.

ನಾಲ್ವರು ಮುಸುಕುಧಾರಿಗಳು ಬಂದಿರುವುದಾಗಿ ನಂಜುಂಡಪ್ಪ ಪೊಲೀಸರಿಗೆ ತಿಳಿಸಿದ್ದಾರೆ.

ಇಬ್ಬರು ಮಹಿಳೆಯರಿಂದ 2.50 ಕೋಟಿಗೂ ಹೆಚ್ಚು ವಂಚನೆ

ಉಪ್ಪಿನಮೋಳೆ ಮಹಿಳೆಯರಿಂದ ಪೊಲೀಸರಿಗೆ ದೂರು



ಯಳಂದೂರು ಪಟ್ಟಣ ಪೊಲೀಸ್ ಠಾಣೆ ಮುಂಭಾಗ ಜಮಾಯಿಸಿದ ವಂಚನೆಗೊಳಗಾದ ಮಹಿಳೆಯರು.

ಯಳಂದೂರು, ಜೂ.30–ತಾಲೂಕಿನ ಉಪ್ಪಿನಮೋಳೆ ಗ್ರಾಮದಲ್ಲಿ ಇಬ್ಬರು ಮಹಿಳೆಯರು ಹಣವನ್ನು ದ್ವಿಗುಣ ಮಾಡಿಕೊಡುವುದಾಗಿ 2.50 ಕೋಟಿ ರೂ.ಗೂ ಹೆಚ್ಚು ವಂಚಿಸಿದ್ದಾರೆ ಎಂದು ಗ್ರಾಮದ ನೂರಾರು ಮಹಿಳೆಯರು ಪಟ್ಟಣ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಉಪ್ಪಿನಮೋಳೆ ಗ್ರಾಮದ ಸರಸ್ವತಿ ಹಾಗೂ ಚೌಡಮ್ಮ ಅವರು, ಗ್ರಾಮದ ನೂರಾರು ಜನರಿಗೆ ಹಣ ವಂಚಿಸಿದ್ದಾರೆ. ಹಣವನ್ನು ದ್ವಿಗುಣ ಮಾಡುವ ಆಮಿಷವೊಡ್ಡಿ, ಲಕ್ಷಾಂತರ ರೂ. ಕಟ್ಟಿಸಿಕೊಂಡು ಒಂದು ಬಿಳಿ ಚೀಟಿಯಲ್ಲಿ ಬರೆದುಕೊಟ್ಟಿದ್ದಾರೆ. ಮೊದಲು ಹಲವರಿಗೆ ಹಣ ಪಡೆದು ದ್ವಿಗುಣಗೊಳಿಸಿ ನೀಡಿ ವಿಶ್ವಾಸ ಗಳಿಸಿಕೊಂಡಿದ್ದಾರೆ. ಇದನ್ನು ನಂಬಿದ ನೂರಾರು ಮಹಿಳೆಯರಿಂದ ಮತ್ತಷ್ಟು ಹಣ ಕಟ್ಟಿದ್ದಾರೆ. ಆದರೆ, ಇದೇ ಹಣದಿಂದ ಸರಸ್ವತಿ ಹಾಗೂ ಚೌಡಮ್ಮ ಐಷರಾಮಿ ಜೀವನ ನಡೆಸುತ್ತಿದ್ದರು. ಜೊತೆಗೆ ಸ್ವಂತ ಚಿನ್ನಾಭರಣ, ಮನೆ, ಆಸ್ತಿ ಮಾಡಿದ್ದಾರೆ ಎಂದು ವಂಚನೆಗೊಳಗಾದವರು ದೂರಿನಲ್ಲಿ ತಿಳಿಸಿದ್ದಾರೆ.

ಹಣ ಮರುಪಾವತಿಸಲು ಇವರಿಂದ ಸಾಧ್ಯವಾಗಿಲ್ಲ. ಹಣ ಕಟ್ಟಿದವರು ಸರಸ್ವತಿ ಹಾಗೂ ಚೌಡಮ್ಮ ಮನೆ ಬಳಿಗೆ ನಿತ್ಯ ಹೋಗಿ ಹಣ ವಾಪಸ್ ನೀಡುವಂತೆ ಒತ್ತಾಯಿಸಿದ್ದಾರೆ ಆದರೆ, ಇವರು ಹಣ ನೀಡಿಲ್ಲ. ಇದರಿಂದ ಹಣ ಕಟ್ಟಿದವರೆಲ್ಲರೂ ಪಟ್ಟಣ ಪೊಲೀಸ್ ಠಾಣೆ ಮುಂಭಾಗ ಜಮಾಯಿಸಿ, ಪೊಲೀಸರಿಗೆ ದೂರು ನೀಡಿದರು.

ನಂತರ ಪೊಲೀಸರು ಸರಸ್ವತಿ ಹಾಗೂ ಚೌಡಮ್ಮ ಅವರನ್ನು ಠಾಣೆಗೆ ಕರೆಯಿಸಿ, ವಿಚಾರಣೆ ನಡೆಸಿದರು. ಈ ವೇಳೆ ಇವರಿಬ್ಬರೂ ನಮ್ಮ ಬಳಿ ಈಗ ಇಷ್ಟು ಹಣವಿಲ್ಲ, ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ಎಲ್ಲರಿಗೂ ಹಣ ವಾಪಸ್ ನೀಡುವುದಾಗಿ ಒಪ್ಪಿಕೊಂಡಿದ್ದಾರೆ. ನಂತರ ಗ್ರಾಮಸ್ಥರು ಮನೆ ತೆರಳಿದರು.

ಇಂದು ಕರವೇಯಿಂದ ಬೃಹತ್ ಧರಣಿ

ಚಾಮರಾಜನಗರ, ಜೂ.30–ಶೀಘ್ರ ಕನ್ನಡಿಗರಿಗೆ ಉದ್ಯೋಗದಲ್ಲಿ ಮೀಸಲಾತಿ ನೀಡುವ ಸಂಬಂಧ ಸಮಗ್ರ ಕಾಯ್ದೆ ರೂಪಿಸಬೇಕು ಎಂದು ಒತ್ತಾಯಿಸಿ ಕರ್ನಾಟಕ ರಕ್ಷಣಾ ವೇದಿಕೆ (ಟಿ.ಎ.ನಾರಾಯಣಗೌಡ ಬಣ) ಜಿಲ್ಲಾ ಘಟಕದ ವತಿಯಿಂದ ಜು.1ರಂದು ನಗರದ ಜಿಲ್ಲಾಡಳಿತ ಭವನ ಎದುರು ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ವೇದಿಕೆ ಜಿಲ್ಲಾಧ್ಯಕ್ಷ ಎಸ್.ನವೀನ್ ಕುಮಾರ್ ತಿಳಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆಯಿಂದ ಸಂಜೆ 4 ಗಂಟೆವರಗೆ ಧರಣಿ ಹಮ್ಮಿಕೊಳ್ಳಲಾಗಿದೆ. ಕೈಗಾರಿಕಾ ಉದ್ಯೋಗ ಸ್ಥಾಯಿ ಆದೇಶ ಕಾಯ್ದೆಯಡಿ ರಾಜ್ಯ ಸರ್ಕಾರ ಕಾನೂನು ರೂಪಿಸಿ, ಕನ್ನಡಿಗರಿಗೆ ಉದ್ಯೋಗ ಮೀಸಲಾತಿ ಒದಗಿಸಬೇಕು. ಎಲ್ಲಾ ಖಾಸಗಿ ಸಂಸ್ಥೆಗಳಲ್ಲಿ ಸಿ ಮತ್ತು ಡಿ ದರ್ಜೆಯ ಶೇ.100ರಷ್ಟು ಹುದ್ದೆಗಳು ಕನ್ನಡಿಗರಿಗೆ ಮೀಸಲಿಡಬೇಕು ಎಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಉಪಾಧ್ಯಕ್ಷ ಮಂಜೇಶ್, ಗುಂಡ್ಲುಪೇಟೆ ತಾಲೂಕು ಅಧ್ಯಕ್ಷ ಸುರೇಶ್‌ನಾಯಕ ಸದಸ್ಯರಾದ ಆನಂತ್‌ನಾಗ್, ಶ್ರೀನಿವಾಸ್ ಹಾಜರಿದ್ದರು.

ಚಾಮರಾಜೇಶ್ವರಸ್ವಾಮಿ ಮುತ್ತಿನ ಪಲ್ಲಕ್ಕಿ ಉತ್ಸವ

ಚಾಮರಾಜನಗರ, ಜೂ.30–ನಗರದ ಚಾಮರಾಜೇಶ್ವರಸ್ವಾಮಿ ದೇವಸ್ಥಾನದಲ್ಲಿ ಗಿರಿಜಾ ಕಲ್ಯಾಣ ಮಹೋತ್ಸವ ಅಂಗವಾಗಿ ಶ್ರೀ ಕೆಂಪನಂಜಾಂಬ ಸಮೇತ ಶ್ರೀ ಚಾಮರಾಜೇಶ್ವರಸ್ವಾಮಿ ಮುತ್ತಿನ ಪಲ್ಲಕಿ ಉತ್ಸವ ನಡೆಯಿತು.

ಉತ್ಸವಕ್ಕೆ ಶಾಸಕ ಪುಟ್ಟರಂಗಶೆಟ್ಟಿ ಚಾಲನೆ ನೀಡಿದರು. ಬಳಿಕ ನಗರದ ರಥಬೀದಿ, ಅಗ್ರಹಾರ, ದೊಡ್ಡಂಗಡಿ, ಚಿಕ್ಕಅಂಗಡಿ ಬೀದಿ ಮಾರ್ಗವಾಗಿ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಸಲಾಯಿತು. ನಂತರ ಮೂಲಕ ದೇವಸ್ಥಾನ ಪ್ರದಕ್ಷಿಣೆ ಹಾಕಿ ಚಾಮರಾಜೇಶ್ವರ ದೇವಸ್ಥಾನ ತಲುಪಿತು.

ಆಗಮಿಕರಾದ ದರ್ಶನ್, ಚಾಮುಂಡೇಶ್ವರಿ ದೇವಸ್ಥಾನ ಅರ್ಚಕರಾದ ನಾಗರಾಜ್ ದೀಕ್ಷಿತ್, ಅನೀಲ್ ಕುಮಾರ್ ದೀಕ್ಷಿತ್, ರಾಮಕೃಷ್ಣ ಭಾರದ್ವಾಜ್, ಉತ್ಸವ ಸಮಿತಿ ಸದಸ್ಯರು ಭಾಗವಹಿಸಿದ್ದರು.



ಗಿರಿಜಾ ಕಲ್ಯಾಣ ಮಹೋತ್ಸವ ಅಂಗವಾಗಿ ಕೆಂಪನಂಜಾಂಬ ಸಮೇತ ಚಾಮರಾಜೇಶ್ವರಸ್ವಾಮಿ ಮುತ್ತಿನ ಪಲ್ಲಕಿ ಉತ್ಸವ ನಡೆಯಿತು.

ಅತಿಥಿ ಉಪನ್ಯಾಸಕ ಹುದ್ದೆಗೆ ಅರ್ಜಿ ಆಹ್ವಾನ

ಚಾಮರಾಜನಗರ: ಗುಂಡ್ಲುಪೇಟೆ ಡಾ.ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆಗೆ ಅತಿಥಿ ಆಂಗ್ಲ ಭಾಷಾ ಉಪನ್ಯಾಸಕರ ಹುದ್ದೆಗೆ ಅರ್ಜಿ ಆಹ್ವಾನಿಸಲಾಗಿದೆ.

ಅಭ್ಯರ್ಥಿಗಳು ಆಂಗ್ಲ ಭಾಷೆಯಲ್ಲಿ 2 ವರ್ಷ ಸ್ನಾತಕೋತ್ತರ ಪದವಿ ಪಡೆದಿರಬೇಕು. ದಾಖಲೆಗಳೊಂದಿಗೆ ಗುಂಡ್ಲುಪೇಟೆ ಪಟ್ಟಣದ ಡಾ.ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ (ಮೊ.ಸಂ: 9964346118) ಅಥವಾ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಧಿಕಾರಿ ಕಚೇರಿ (ಮೊ.ಸಂ:7022054512)ಗೆ ಜು.8ರೊಳಗೆ ಗೆ ಅರ್ಜಿ ಸಲ್ಲಿಸಬೇಕು ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೇರಳದ ವೈನಾಡಿನಲ್ಲಿ ಭಾರೀ ಮಳೆ ಹಿನ್ನೆಲೆ

ಕಬಿನಿ ಜಲಾಶಯ ಭರ್ತಿಗೆ 7 ಅಡಿ ಬಾಕಿ



ಕಬಿನಿ ಜಲಾಶಯದ ನೀರಿನ ಮಟ್ಟ

ಗರಿಷ್ಠ 2284 ಅಡಿ

ಇಂದಿನ ಮಟ್ಟ 2277 ಅಡಿ
ಒಳಹರಿವು 4500 ಕ್ಯೂಸೆಕ್
ಹೊರಹರಿವು 1 ಸಾವಿರ ಕ್ಯೂಸೆಕ್

ಕಳೆದ ವರ್ಷ

ನೀರಿನ ಮಟ್ಟ 2256 ಅಡಿ
ಒಳಹರಿವು 1113 ಕ್ಯೂಸೆಕ್
ಹೊರಹರಿವು 500 ಕ್ಯೂಸೆಕ್

> ಕಳೆದ ಬಾರಿ ಜಲಾಶಯ ಭರ್ತಿಯಾಗದ ಕಾರಣ ಮುಖ್ಯಮಂತ್ರಿಗಳು ಬಾಗಿನ ಅರ್ಪಿಸಲು ಆಗಮಿಸಿರಲಿಲ್ಲ. ಈ ಬಾರಿ ಕಬಿನಿ ಜಲಾಶಯ ಬೇಗ ಭರ್ತಿಯಾಗುತ್ತಿರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕರೆತಂದು ಬಾಗಿನ ಅರ್ಪಿಸಲಾಗುವುದು, ಅಲ್ಲದೇ ಹೆಚ್.ಡಿ.ಕೋಟೆ ಸಮಗ್ರ ಅಭಿವೃದ್ಧಿಗೆ ಹೆಚ್ಚಿನ ಅನುದಾನ ನಿಡುವಂತೆ ಮನವಿ ಸಲ್ಲಿಸಲಾಗುವುದು. - ಅನಿಲ್, ಶಾಸಕ.

ಹೆಚ್.ಡಿ.ಕೋಟೆ, ಜೂ.30– ಕೇರಳದ ವೈನಾಡಿನಲ್ಲಿ ಭಾರೀ ಮಳೆ ಹಿನ್ನೆಲೆಯಲ್ಲಿ ತಾಲೂಕಿನ ಬೀಚನಹಳ್ಳಿ ಗ್ರಾಮದಲ್ಲಿರುವ ಕಬಿನಿ ಜಲಾಶಯಕ್ಕೆ ಅಪಾರ ಪ್ರಮಾಣದಲ್ಲಿ ನೀರು ಹರಿದು ಬರುತ್ತಿದ್ದು, ಜಲಾಶಯ ಭರ್ತಿಗೆ 7 ಅಡಿ ಬಾಕಿ ಇದೆ ಎಂದು ಕಬಿನಿ ಕಾರ್ಯಪಾಲಕ ಅಭಿಯಂತರ ಚಂದ್ರಶೇಖರ್ ತಿಳಿಸಿದರು.

ಕೇರಳದ ವೈನಾಡಿನಲ್ಲಿ ಭಾರೀ ಮಳೆ ಹಿನ್ನೆಲೆ ಕಬಿನಿ ಜಲಾಶಯಕ್ಕೆ ಕಳೆದ ಮೂರ್ನಾಕು ದಿನಗಳಿಂದ 20 ಸಾವಿರ ಕ್ಯೂಸೆಕ್ ನೀರು ಹರಿದು ಬರುತ್ತಿತ್ತು. ಆದರೆ ಭಾನುವಾರ ಮಳೆ ಕಡಿಮೆಯಾಗಿದ್ದು, ಜಲಾಶಯಕ್ಕೆ 4500 ಕ್ಯೂಸೆಕ್ ನೀರು ಹರಿದು ಬರುತ್ತಿದ್ದು, ಒಂದು ಸಾವಿರ ಕ್ಯೂಸೆಕ್ ನೀರನ್ನು ನದಿಗೆ ಹರಿಸಲಾಗುತ್ತಿದೆ. 2284 ಅಡಿ ಗರಿಷ್ಠ ಸಾಮರ್ಥ್ಯದ ಜಲಾಶಯದಲ್ಲಿ ಪ್ರಸ್ತುತ 2277 ಅಡಿ ನೀರು ಸಂಗ್ರಹವಾಗಿದ್ದು, ಜಲಾಶಯ ಭರ್ತಿಗೆ 7 ಅಡಿ ಬಾಕಿ ಇದೆ. ಸದ್ಯದಲ್ಲೇ ಜಲಾಶಯ ಭರ್ತಿಯಾಗುವ ಸಾಧ್ಯತೆ ಇದೆ. ಹೀಗಾಗಿ ಜಲಾಶಯದಲ್ಲಿ ಅಗತ್ಯ ಎಲ್ಲಾ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗಿದೆ ಎಂದರು.

ಕಳೆದ ವರ್ಷ ಇದೇ ದಿನ ಜಲಾಶಯದಲ್ಲಿ 2256 ಅಡಿ ನೀರು ಸಂಗ್ರಹವಾಗಿತ್ತು. ಜಲಾಶಯಕ್ಕೆ 1113 ಕ್ಯೂಸೆಕ್ ಒಳಹರಿವು, 500 ಕ್ಯೂಸೆಕ್ ನೀರನ್ನು ನದಿಗೆ ಹರಿಸಲಾಗುತ್ತಿತ್ತು ಎಂದರು.

ಬಿದರಹಳ್ಳಿ ಗ್ರಾಪಂ ಸದಸ್ಯ ಸತ್ಯ ಮಾತನಾಡಿ, ಕಳೆದ ಬಾರಿ ಕಬಿನಿ ಜಲಾಶಯ ಭರ್ತಿಯಾಗದ ಕಾರಣ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಬಾಗಿನ ಅರ್ಪಿಸಲು ಜಲಾಶಯಕ್ಕೆ ಆಗಮಿಸಲಿಲ್ಲ. 2018–19ರಲ್ಲಿ ಭಾರೀ ಪ್ರವಾಹದಿಂದಾಗಿ ಜಲಾಶಯದ ಸಮೀಪ ವಾಸಿಸುತ್ತಿರುವ ಕೂಲಿ ಕಾರ್ಮಿಕರ ಮನೆಗಳು ಜಲಾವೃತ್ತಗೊಂಡಿದ್ದವು. ಆ ವೇಳೆ ವಿರೋಧ ಪಕ್ಷದ ನಾಯಕರಾಗಿದ್ದ ಸಿಎಂ ಸಿದ್ದರಾಮಯ್ಯ ಮನೆಗಳು ಜಲಾವೃತ್ತವಾಗಿರುವುದನ್ನು ವೀಕ್ಷಿಸಲು ಆಗಮಿಸಿದ್ದರು. ಅಲ್ಲದೇ ಇಲ್ಲಿನ ಕಾರ್ಮಿಕರಿಗೆ ಬಿಜೆಪಿ ಸರ್ಕಾರ ಬೇರೆ ಜಾಗ ಗುರುತಿಸಿ ಮನೆ ನಿರ್ಮಿಸಿ ಕೊಡಬೇಕು ಎಂದು ಆಗ್ರಹಿಸಿದ್ದರು. ಆದರೆ ಆ ಘಟನೆ ನಡೆದು 5 ವರ್ಷ ಕಳೆದರೂ ಯಾವುದೇ ಜಾಗ ಹಂಚಿಕೆಯಾಗಿಲ್ಲ. ಆದ್ದರಿಂದ ಸಿಎಂ ಸಿದ್ದರಾಮಯ್ಯನವರು ಈ ಬಾರಿ ಜಲಾಶಯ ಭರ್ತಿಯಾಗಿ ಬಾಗಿನ ಅರ್ಪಿಸುವ ವೇಳೆ ಮನೆ ಕಳೆದುಕೊಂಡ ಇಲ್ಲಿನ 49 ಮಂದಿಗೆ ವಾಸಿಸಲು ಜಾಗದ ವ್ಯವಸ್ಥೆ ಮಾಡಿಕೊಡಬೇಕು ಎಂದು ಮನವಿ ಮಾಡಿದರು.

ಬೆಂಗಳೂರು, ರಾಜ್ಯಕ್ಕೆ ಕೆಂಪೇಗೌಡರ ಕೊಡುಗೆ ಅಪಾರ

ಒಕ್ಕಲಿಗರ ಸಂಘದ ಕಚೇರಿ ಉದ್ಘಾಟಿಸಿದ ಮಾಜಿ ಶಾಸಕ ಕೆ.ಮಹದೇವ್



ಒಕ್ಕಲಿಗರ ಸಂಘದ ಕಚೇರಿಯನ್ನು ಮಾಜಿ ಶಾಸಕ ಮಹದೇವ್ ಉದ್ಘಾಟಿಸಿದರು.

ಪಿರಿಯಾಪಟ್ಟಣ, ಜೂ.30– ಒಕ್ಕಲಿಗ ಸಮಾಜದ ಹೆಸರಿನಲ್ಲಿ ಬೆಳೆಯುತ್ತಿರುವ ಸಂಘಟನೆಗಳು ಸಮಾಜಮುಖಿಯಾಗಿ ಕೆಲಸ ಮಾಡಬೇಕು. ಆಗ ಮಾತ್ರ ಸಮಾಜ ಹಾಗೂ ಸಾಮಾಜಿಕ ಬದ್ಧತೆಗೂ ಒಂದು ಅರ್ಥ ಬರುತ್ತದೆ ಎಂದು ಮಾಜಿ ಶಾಸಕ ಕೆ.ಮಹದೇವ್ ತಿಳಿಸಿದರು.

ಪಟ್ಟಣದಲ್ಲಿ ತಾಲೂಕು ಒಕ್ಕಲಿಗರ ಸಂಘದ ಕಚೇರಿ ಉದ್ಘಾಟನೆ ಹಾಗೂ ನಾಡಪ್ರಭು ಕೆಂಪೇಗೌಡರ ದಿನಾಚರಣೆಯಲ್ಲಿ ಮಾತನಾಡಿದ ಅವರು, ನಾಡಪ್ರಭು ಕೆಂಪೇಗೌಡರು ತಮ್ಮ ದೂರದೃಷ್ಟಿಯಿಂದ 500 ವರ್ಷಗಳ ಹಿಂದೆ ಕಟ್ಟಿದ ಬೆಂಗಳೂರು ಇಂದು ವಿಶ್ವದಲ್ಲೇ ಪ್ರಸಿದ್ಧಿ ಪಡೆದಿದೆ. ಬೆಂಗಳೂರು ಹಾಗೂ ರಾಜ್ಯದ ಬೆಳವಣಿಗೆಗೆ ಕೆಂಪೇಗೌಡರ ಕೊಡುಗೆ ಅಪಾರ ಎಂದರು.

ಪಿರಿಯಾಪಟ್ಟಣದಲ್ಲಿ ಒಕ್ಕಲಿಗರ ಸಂಘದ ಕಚೇರಿ ಉದ್ಘಾಟನೆಯಾಗುತ್ತಿರುವುದು ಸಂತಸದ ವಿಷಯ. ಒಕ್ಕಲಿಗ ಸಮುದಾಯ ಎಲ್ಲರಿಗೂ ನ್ಯಾಯ ಒದಗಿಸುವ ಸಮುದಾಯವಾಗಿದೆ. ತಾಲೂಕಿನ ಒಕ್ಕಲಿಗ ಸಮುದಾಯದ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಸಮುದಾಯದ ಬೆಳವಣಿಗೆಗೆ ಶ್ರಮಿಸುವುದು ಸಂಘಟನೆಗಳ ಜವಾಬ್ದಾರಿ. ಆ ನಿಟ್ಟಿನಲ್ಲಿ ಸಂಘ ಕೆಲಸ ಮಾಡಲಿ ಎಂದು ಶುಭ ಹಾರೈಸಿದರು.

ನಗರಪಾಲಿಕೆ ಮಾಜಿ ಸದಸ್ಯ ಹಾಗೂ ಸಂಘದ ಗೌರವಾಧ್ಯಕ್ಷ ಪಿ.ಪ್ರಶಾಂತ್‌ಗೌಡ ಮಾತನಾಡಿ, ನಾಡಪ್ರಭು ಕೆಂಪೇಗೌಡರ ಆದರ್ಶಗಳನ್ನು ಎಲ್ಲರೂ ಪಾಲಿಸಬೇಕು. ಅವರು ಹಾಕಿಕೊಟ್ಟ ದಾರಿಯಲ್ಲಿ ನಡೆಯಬೇಕು. ಒಕ್ಕಲಿಗ ಸಮಾಜ ಸರ್ವತೋಮುಖ ಬೆಳವಣಿಗೆಯಾಗಬೇಕು ಎನ್ನುವ ಉದ್ದೇಶದಿಂದ ಪಟ್ಟಣದಲ್ಲಿ ತಾಲೂಕು ಒಕ್ಕಲಿಗರ ಸಂಘ ಪ್ರಾರಂಭಿಸಲಾಗಿದೆ. ಸಮುದಾಯದ ಕಟ್ಟಕಡೆ ವ್ಯಕ್ತಿಯೂ ಸಮಾಜದ ಮುಖ್ಯವಾಹಿನಿಗೆ ಬರಬೇಕು. ಸಾಮಾಜಿಕ, ಶೈಕ್ಷಣಿಕ, ಆರ್ಥಿಕವಾಗಿ ಸಬಲರಾಗಬೇಕು. ಆ ನಿಟ್ಟಿನಲ್ಲಿ ಸಂಘ ಕೆಲಸ ಮಾಡುತ್ತದೆ ಎಂದರು.

ರಾಜ್ಯ ಅಭಿವೃದ್ಧಿ ಹೊಂದಲು ನಾಡಪ್ರಭು ಕೆಂಪೇಗೌಡರ ಆಡಳಿತ ಹಾಗೂ ಅವರ ಆರ್ಥಿಕ ನೀತಿಗಳು ಕಾರಣವಾಗಿವೆ ಎಂದರೆ ತಪ್ಪಾಗಲಾರದು. ಇಂದಿಗೂ ಅವರ ಯೋಜನೆಗಳು ಪ್ರಸ್ತುತವಾಗಿವೆ ಎಂದರು.

ಮೈಮುಲ್ ಅಧ್ಯಕ್ಷ ಪಿ.ಎಂ.ಪ್ರಸನ್ನ ಮಾತನಾಡಿ, ಸಂಘಟನೆಗಳು ಸಮುದಾಯದ ಅಭಿವೃದ್ಧಿಗಾಗಿ ಶ್ರಮಿಸಬೇಕು. ಆಗ ಸಮುದಾಯಗಳು ಬೆಳವಣಿಗೆ ಹೊಂದುತ್ತವೆ. ಕೆಂಪೇಗೌಡರವರ ಆದರ್ಶಗಳನ್ನು ಎಲ್ಲರೂ ಮೈಗೂಡಿಸಿಕೊಂಡು ಸಮುದಾಯದ ಬೆಳವಣಿಗೆಗೆ ದುಡಿಯಬೇಕು ಎಂದರು.

ಈ ವೇಳೆ ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಆನಂದ್, ಉಪಾಧ್ಯಕ್ಷ ಚಂದ್ರೇಗೌಡ, ಜಗದೀಶ್, ಕಾನೂನು ಸಲಹೆಗಾರ ಕೆ.ಡಿ.ಸಂದೀಪ್, ಕಾರ್ಯದರ್ಶಿ ಮೋಹನ್, ಖಜಾಂಚಿ ಮನು, ನಿರ್ದೇಶಕರಾದ ಗಣೇಶ್, ಮಧು, ರಾಜೇಶ್, ಪಿ.ಕುಮಾರ್, ಅರುಣ್, ಅನಿಲ್, ರಾಜು, ಕುಮಾರ್.ಎಂ, ರವಿ, ಪ್ರವೀಣ್, ಮಧು, ಭಾಸ್ಕರ್, ಮುಖಂಡರಾದ ಕೃಷ್ಣೇಗೌಡ, ಹನುಮಂತು ಸೇರಿದಂತೆ ಸಂಘದ ಪದಾಧಿಕಾರಿಗಳು ಇದ್ದರು.

ಶ್ರೀಭಾರತಿ ವಿದ್ಯಾಮಂದಿರ ಶಾಲೆಯಲ್ಲಿ ಮಕ್ಕಳಿಗೆ ಅಕ್ಷರಭ್ಯಾಸ



ಕೆ.ಆರ್.ನಗರ, ಜೂ.30– ಇಲ್ಲಿನ ಶ್ರೀಭಾರತಿ ವಿದ್ಯಾಮಂದಿರ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಇತ್ತೀಚೆಗೆ ಮಕ್ಕಳಿಗೆ ಅಕ್ಷರಭ್ಯಾಸ ಮಾಡಿಸಲಾಯಿತು.

ಸರಸ್ವತಿ ದೇವಿ ಸಾನಿಧ್ಯದಲ್ಲಿ ಅಕ್ಷರಾಭ್ಯಾಸ ಕಾರ್ಯಕ್ರಮವನ್ನು ಶ್ರೀಯೋಗಾನಂದೇಶ್ವರ ಸರಸ್ವತಿ ಮಠದ ದತ್ತಾತ್ರೇಯ ಭಟ್ಟರು ಯಶಸ್ವಿಯಾಗಿ ನಡೆಸಿಕೊಟ್ಟರು. ಪೋಷಕರು ತಮ್ಮ ಮಕ್ಕಳಿಗೆ ಅಕ್ಕಿಕಾಳುಗಳ ಮೇಲೆ ಓಂ, ಶ್ರೀ, ಅ, ಆ ಮೊದಲಾದ ಅಕ್ಷರಗಳನ್ನು ಬರೆಸುವ ಮೂಲಕ ಅಕ್ಷರಾಭ್ಯಾಸಕ್ಕೆ ಚಾಲನೆ ನೀಡುವ ಜೊತೆಗೆ ಧನ್ಯತಾಭಾವ ಮೆರೆದರು. ಮಕ್ಕಳಿಗೆ ಶ್ರೀಮಠದ ವತಿಯಿಂದ ಸಿಹಿ ಹಂಚಲಾಯಿತು. ಕಾರ್ಯಕ್ರಮದಲ್ಲಿ ಮುಖ್ಯೋಪಾಧ್ಯಾಯರಾದ ಲೋಕೇಶ್, ಕನ್ಯಾಕುಮಾರಿ, ಶಿಕ್ಷಕಿಯರಾದ ದಿವ್ಯ, ಪಲ್ಲವಿ, ಗೌರಿ, ಆಡಳಿತ ಮಂಡಳಿ ಸದಸ್ಯರಾದ ಕೆ.ಎನ್.ಸೋಮಯಾಜಿ ಮತ್ತು ಪೋಷಕರು ಹಾಜರಿದ್ದರು.

ಪ.ಜಾತಿ ಸ್ಮಶಾನಗಳ ಅಭಿವೃದ್ಧಿಗೆ 10 ಕೋಟಿ ಬಿಡುಗಡೆ

ಸಚಿವ ಡಾ.ಹೆಚ್.ಸಿ.ಮಹದೇವಪ್ಪಗೆ ದಸಂಸ ಕೃತಜ್ಞತೆ



ಸುದ್ದಿಗೋಷ್ಠಿಯಲ್ಲಿ ದಸಂಸ ಬಣ ರಹಿತ ಘಟಕದ ಜಿಲ್ಲಾ ಸಂಚಾಲಕ ಸಿ.ಉಮಾ ಮಹದೇವ್ ಮಾತನಾಡಿದರು.

ತಿ.ನರಸೀಪುರ, ಜೂ.30– ತಾಲೂಕಿನ ಪರಿಶಿಷ್ಟ ಜಾತಿ ಸ್ಮಶಾನಗಳ ಅಭಿವೃದ್ಧಿಗೆ ಸಮಾಜ ಕಲ್ಯಾಣ ಇಲಾಖೆಯಿಂದ 10 ಕೋಟಿ ರೂ. ಬಿಡುಗಡೆ ಮಾಡಿರುವ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ಕೃತಜ್ಞತೆ ತಿಳಿಸುವುದಾಗಿ ದಸಂಸ ಬಣ ರಹಿತ ಘಟಕದ ಜಿಲ್ಲಾ ಸಂಚಾಲಕ ಸಿ.ಉಮಾ ಮಹದೇವ್ ತಿಳಿಸಿದರು.

ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಲೂಕಿನ ಶೇ.80ರಷ್ಟು ದಲಿತರಿರುವ ಗ್ರಾಮಗಳಲ್ಲಿ ವ್ಯವಸ್ಥಿತವಾದ ಸ್ಮಶಾನ ಇಲ್ಲ. ಈ ಬಗ್ಗೆ ನಮ್ಮ ಸಮಿತಿ ಜಿಲ್ಲಾ ಹಾಗೂ ತಾಲೂಕು ಆಡಳಿತ ಗಮನ ಸೆಳೆಯಲು ನಿರಂತರ ಹೋರಾಟ ಮಾಡಿದೆ. ಕಳೆದ ವಿಧಾನಸಭಾ ಚುನಾವಣೆ ವೇಳೆ ಸಂಘಟನೆ ಪ್ರತ್ಯೇಕ ಬೇಡಿಕೆ ಬಿಡುಗಡೆಗೊಳಿಸಿ ಅದಕ್ಕೆ ಸ್ಪಂದಿಸುವ ಅಭ್ಯರ್ಥಿ ಗೆಲುವಿಗೆ ನಮ್ಮ ಸಮಿತಿ ಕೆಲಸ ಮಾಡಲಿದೆ ಎಂದು ಹೇಳಿದ್ದೆವು. ಇದಕ್ಕೆ ಸ್ಪಂದಿಸಿದ ಡಾ.ಹೆಚ್.ಸಿ.ಮಹದೇವಪ್ಪ ಅವರು ಗೆಲುವು ಸಾಧಿಸಿ ಸಮಾಜ ಕಲ್ಯಾಣ ಇಲಾಖೆ ಸಚಿವರಾದ ಬಳಿಕ ನಮ್ಮ ಮನವಿ ಮೇರೆಗೆ ತಾಲೂಕಿನ 50 ಗ್ರಾಮಗಳ ಪ.ಜಾತಿ ಸ್ಮಶಾನ ಅಭಿವೃದ್ಧಿಗೆ 10 ಕೋಟಿ ಬಿಡುಗಡೆ ಮಾಡಿರುವುದು ಶ್ಲಾಘನೀಯ ಹಾಗೂ ಇಲಾಖೆಗೆ ಶೋಭೆ ತರುವ ಕೆಲಸವಾಗಿದೆ. ನಮ್ಮ ಸಮಿತಿಯು ಸಚಿವರನ್ನು ಅಭಿನಂದಿಸುವ ಕೆಲಸ ಮಾಡಲಿದೆ ಎಂದರು.

ಇನ್ನು ತಾಲೂಕಿನ ಬಹುತೇಕ ಸ್ಮಶಾನಗಳು ಒತ್ತುವರಿಯಾಗಿದ್ದು, ಅದನ್ನು ತೆರವು ಮಾಡಿಸಲು ಜಿಲ್ಲಾ ಹಾಗೂ ತಾಲೂಕು ಆಡಳಿತ ಕಠಿಣ ಕ್ರಮಕೈಗೊಳ್ಳುವಲ್ಲಿ ವಿಫಲವಾಗಿದೆ. ಇತ್ತೀಚೆಗೆ ಬೀಡನಹಳ್ಳಿಯಲ್ಲಿ ದಲಿತ ವ್ಯಕ್ತಿ ನಿಧನರಾದಾಗ ಶವಸಂಸ್ಕಾರಕ್ಕೆ ಗ್ರಾಮದಲ್ಲಿ ಸ್ಮಶಾನ ಇದ್ದರೂ, ತಾಲೂಕು ಆಡಳಿತ ಹಾಗೂ ಗ್ರಾಪಂ ಬೇಜವಾಬ್ದಾರಿಯಿಂದಾಗಿ ಒತ್ತುವರಿ ತೆರವುಗೊಳಿಸದ ಹಿನ್ನೆಲೆಯಲ್ಲಿ ನಾಲೆ ದಡದಲ್ಲಿ ಶವಸಂಸ್ಕಾರ ಮಾಡಿದ್ದನ್ನು ನಮ್ಮ ಸಮಿತಿ ಬೆಳಕಿಗೆ ತಂದ ಕಾರಣ ಸಮಾಜ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಸೂಚನೆ ಮೇರೆಗೆ ಒತ್ತುವರಿ ತೆರವುಗೊಳಿಸಲು ತೆರಳಿದ ತಹಸೀಲ್ದಾರ್ ಅವರು ಒತ್ತುವರಿದಾರರ ಮನವಿಗೆ ಕಿವಿಗೊಟ್ಟು ಕಾಲಾವಕಾಶ ನೀಡಿರುವುದು ಕ್ರಮವಲ್ಲ. ಒತ್ತುವರಿದಾರರು ರಾಜಕೀಯ ಒತ್ತಡ ಬಳಸಿ ಸ್ಮಶಾನ ಇದ್ದರೂ ಇಲ್ಲದಂತೆ ಮಾಡಿದ್ದಾರೆ. ಆದ್ದರಿಂದ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಸ್ಮಶಾನ ಒತ್ತುವರಿ ತಂಡ ರಚಿಸಿ ಶೀಘ್ರ ಎಲ್ಲಾ ಒತ್ತುವರಿ ತೆರವು ಗೊಳಿಸಬೇಕು ಎಂದು ಆಗ್ರಹಿಸಿದರು.

ಈ ವೇಳೆ ಜಿಲ್ಲಾ ಸಂಘಟನಾ ಸಂಚಾಲಕ ಆಲತ್ತೂರು ಶಿವರಾಜು, ಅಶೋಕ, ಮೂಡಳ್ಳಿ ಮಹದೇವ, ಯಡದೊರೆ ಸಿದ್ದರಾಜು, ತಾಲೂಕು ಸಂಚಾಲಕ ಕೇತುಪುರ ಶಿವಪ್ರಕಾಶ್, ಸಂಘಟನಾ ಸಂಚಾಲಕ ಕುರಿಸಿದ್ದನ ಹುಂಡಿ ರಾಜು, ತಲಕಾಡು ಶಿವಮೂರ್ತಿ, ದಲಿತ ಕಲಾವಿದರ ಸಂಘದ ಉಪಾಧ್ಯಕ್ಷ ತುಂಬಲ ಶಿವಣ್ಣ ಪ್ರಧಾನ ಕಾರ್ಯದರ್ಶಿ ಸಿ.ಬಿ.ಹುಂಡಿ ನಾಗೇಶ್, ಸುತ್ತೂರು ಮಹೇಶ್, ಜಯಪ್ಪ, ನಿಂಗರಾಜು, ಕಲಾವಿದರ ಸಂಘದ ನಿಂಗರಾಜು, ಮಂಟಯ್ಯ, ಸಿದ್ದರಾಜು ಇದ್ದರು.

ಹಳ್ಳಕ್ಕೆ ಸಾರಿಗೆ ಬಸ್ ಪಲ್ಟಿ: 25 ಮಂದಿಗೆ ಗಾಯ

ನಂಜನಗೂಡು, ಜೂ.30– ಚಾಲಕನ ನಿಯಂತ್ರಣ ತಪ್ಪಿದ ಕೆಎಸ್ಆರ್‌ಟಿಸಿ ನಗರ ಸಾರಿಗೆ ಬಸ್ ಹಳ್ಳಕ್ಕೆ ಪಲ್ಟಿಯಾಗಿ 25ಕ್ಕೂ ಹೆಚ್ಚು ಮಂದಿ ಸಣ್ಣಪುಟ್ಟ ಗಾಯಗಳೊಂದಿಗೆ ಪ್ರಾಣಪಾಯದಿಂದ ಪಾರಾಗಿರುವ ಘಟನೆ ತಾಲೂಕಿನ ಮರಡಿಹುಂಡಿ ಗ್ರಾಮದ ಬಳಿ ನಡೆದಿದೆ.

ತಾಲೂಕಿನ ಬಿಳಿಗುಲಿ, ಎಸ್.ಹೊಸಕೋಟೆ ಮಾರ್ಗವಾಗಿ ಮೈಸೂರಿಗೆ ತೆರಳುತ್ತಿದ್ದ (ಕೆಎ.42, ಈ 1986) 346 ಸಂಖ್ಯೆಯ ನಗರ ಸಾರಿಗೆ ಕೆಎಸ್ಆರ್‌ಟಿಸಿ ಬಸ್ ಚಾಲಕನ ನಿಯಂತ್ರಣ ತಪ್ಪಿ ತಾಲೂಕಿನ ಮರಡಿಹುಂಡಿ ಗ್ರಾಮದ ಬಳಿ ಹಳ್ಳಕ್ಕೆ ಪಲ್ಟಿಯಾಗಿದೆ. ಈ ವೇಳೆ ಬಸ್‌ನಲ್ಲಿದ್ದ 25 ಜನರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು ಅವರನ್ನು ಚಿಕಿತ್ಸೆಗೆಂದು ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ದಾಖಲಿಸಲಾಗಿದೆ. ಸ್ಥಳಕ್ಕೆ ಬಿಳಿಗೆರೆ ಪೊಲೀಸರು ಭೇಟಿ ನೀಡಿ ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಿ ನೆರವಾಗಿದ್ದಾರೆ. ಈ ಸಂಬಂಧ ಬಿಳಿಗೆರೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಯಾವುದೇ ಪರೀಕ್ಷೆ ಎದುರಿಸಲು ತರಬೇತಿ ಅಗತ್ಯ

ಶಾಸಕ ಜಿ.ಡಿ. ಹರೀಶ್‌ಗೌಡ



ಕಾರ್ಯಕ್ರಮದಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡರನ್ನು ಸನ್ಮಾನಿಸಲಾಯಿತು.

ಹುಣಸೂರು, ಜೂ.30– ಸ್ಪರ್ಧಾತ್ಮಕ ಜಗತ್ತಿನಲ್ಲಿ ಯಾವುದೇ ಪರೀಕ್ಷೆ ಎದುರಿಸಲು ತರಬೇತಿ ಅಗತ್ಯ ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ತಿಳಿಸಿದರು.

ನಗರದ ಅಂಬೇಡ್ಕರ್ ಭವನದಲ್ಲಿ ಮೈತ್ರಾ ಶಿವೇಂದ್ರ ಅವರ ಮಾರ್ಗದರ್ಶನದಲ್ಲಿ ಐಎಎಸ್, ಕೆಎಎಸ್, ಎಫ್‌ಡಿಎ, ಎಸ್‌ಡಿಎ ಸೇರಿದಂತೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಚಿತವಾಗಿ ತರಬೇತಿ ನೀಡುತ್ತಿರುವ ಹೊಸದಿಕ್ಕು ತರಬೇತಿ ಕೇಂದ್ರದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಹುಣಸೂರಿನ ಹೊಸ ದಿಕ್ಕು ಸಂಸ್ಥೆಯವರು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಯುವಜನತೆಗೆ ಉಚಿತವಾಗಿ ತರಬೇತಿ ನೀಡುತ್ತಿರುವುದು ಶ್ಲಾಘನೀಯ. ಇದನ್ನು ನಗರದ ಯುವಜನತೆ ಸದ್ಬಳಕೆ ಮಾಡಿಕೊಳ್ಳಬೇಕು. ಆ ಮೂಲಕ ತಮ್ಮ ಜೀವನವನ್ನು ಉತ್ತಮಗೊಳಿಸಿಕೊಳ್ಳಿ ಎಂದು ಸಲಹೆ ನೀಡಿದರು.

ಈ ತರಬೇತಿ ಕೇಂದ್ರಕ್ಕೆ ವಿವಿಧೆಡೆಗಳಿಂದ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಸಂಪನ್ಮೂಲ ವ್ಯಕ್ತಿಗಳನ್ನು ಕರೆಸಿ ಕೋಚಿಂಗ್ ನೀಡಲಾಗುತ್ತಿದೆ. ತರಬೇತಿಗೆ ಸಂಪೂರ್ಣ ಸಹಕಾರ, ಸ್ವಯಂ ಬೆಂಬಲ ನೀಡುವ ಜೊತೆಗೆ ಶೈಕ್ಷಣಿಕ ಪರಿಕರ ಒದಗಿಸಲು ಸಿದ್ದನಿದ್ದೇನೆ ಎಂದರು.

ನೀಟ್, ಸಿಇಟಿ ಪರೀಕ್ಷೆಗಳ ಸಿದ್ಧತೆಗಾಗಿ ಮೈಸೂರು, ಬೆಂಗಳೂರಿಗೆ ತಾಲೂಕಿನ ಯುವಕರು ಹೋಗುತ್ತಿದ್ದು, ಇದರಿಂದ ಸಾಕಷ್ಟು ಸಮಯ ಮತ್ತು ಹಣ ವ್ಯರ್ಥವಾಗುತ್ತದೆ. ಅದೇ ತರಬೇತಿ ಮತ್ತು ಕೋಚಿಂಗ್ ನಮ್ಮ ಹುಣಸೂರಿನಲ್ಲಿ ಉಚಿತವಾಗಿ ಸಿಗುತ್ತಿರುವುದು ಸಂತಸದ ವಿಷಯ. ಇಂತಹ ಸ್ಪರ್ಧಾತ್ಮಕ ತರಬೇತಿ ಕೇಂದ್ರವು ನಮ್ಮ ಮಕ್ಕಳಿಗೆ ತರಬೇತಿ ನೀಡುತ್ತಿರುವುದು ಶ್ಲಾಘನೀಯ ಎಂದರು.

ಇದೇ ವೇಳೆ ತರಬೇತಿಗೆ ಆಗಮಿಸಿರುವವರಿಗೆ ಅಕ್ಕ ಐಎಎಸ್ ಅಕಾಡೆಮಿಯ ಕರೆಂಟ್ ಅಫೇರ್ ಇಯರ್ ಬುಕ್–2024 ಅನ್ನು ಉದ್ಯಮಿ ರಮೇಶ್ ಕೊಡುಗೆ ನೀಡಿದರು. ಕಾರ್ಯಕ್ರಮದಲ್ಲಿ ಕುಮಟ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಹೆಚ್.ಸಂದೇಶ್, ಮುಖ್ಯಶಿಕ್ಷಕ ಮನೋಹರ್. ಎಸ್.ದಾಸ್, ಹೊಸ ದಿಕ್ಕು ತರಬೇತಿ ಸಂಸ್ಥಾಪಕ ಮಧುಕರ್, ಕಟ್ಟೆಮಳಲವಾಡಿ ಗ್ರಾಪಂ ಸದಸ್ಯ ನಟರಾಜ್ ಡಿ, ತರಬೇತಿ ಆಯೋಜಕ ದರ್ಶನ್, ಅನಿಲ್ ಕುಮಾರ್, ಚೇತನ್ ಇತರರಿದ್ದರು.

ಮೃತಪಟ್ಟು 3 ವರ್ಷದ ನಂತರ ಫಲಾನುಭವಿ ಖಾತೆಗೆ ಹಣ

ಪಿಡಿಓ ವಿರುದ್ಧ ಜಿಪಂ ಸಿಇಓಗೆ ದೂರು



ನಂಜನಗೂಡು, ಜೂ.30– ತಾಲೂಕಿನ ದೊಡ್ಡಕವಲಂದೆ ಗ್ರಾಪಂ ವ್ಯಾಪ್ತಿಯ ಗಟ್ಟವಾಡಿಪುರ ಗ್ರಾಮದ ಕೆಂಪಮ್ಮ ಎಂಬುವರು ಮೃತಪಟ್ಟು 3 ವರ್ಷಗಳ ನಂತರ ಅವರ ಬ್ಯಾಂಕ್ ಖಾತೆಗೆ ಬಸವ ಯೋಜನೆಯ ಅಂತಿಮ ಕಂತನ್ನು ದೊಡ್ಡಕವಲಂದೆ ಗ್ರಾಪಂ ಜಮಾ ಮಾಡಿದೆ.

ತಾಲೂಕಿನ ಗಟ್ಟವಾಡಿಪುರ ಗ್ರಾಮದ ಕೆಂಪಮ್ಮ ಎಂಬುವರಿಗೆ 2017–18ನೇ ಸಾಲಿನಲ್ಲಿ ಬಸವ ವಸತಿ ಯೋಜನೆಯಡಿ ಮನೆ ಕಟ್ಟಿಕೊಳ್ಳಲು ಮಂಜೂರಾತಿ ನೀಡಲಾಗಿತ್ತು. ಜಿಪಿಎಸ್ ನಂತರ 1 ಮತ್ತು 2ನೇ ಬಿಲ್ ಅವರ ಖಾತೆಗೆ ಪಾವತಿಸಲಾಗಿದೆ. ಅನಾರೋಗ್ಯ ನಿಮಿತ್ತ ಕೆಂಪಮ್ಮ 2020ರ ಜ.9ರಂದು ಮೃತಪಟ್ಟಿದ್ದಾರೆ. ಹೀಗಿದ್ದರೂ ಪಿಡಿಓ ನಿರ್ಮಲಾ ಸತ್ತ ವ್ಯಕ್ತಿಯ 8–9–2023 ರಂದು ಖಾತೆಗೆ 59,600 ರೂ.ಗಳನ್ನ ಕಾನೂನಿಗೆ ವಿರುದ್ಧವಾಗಿ ಜಮಾ ಮಾಡಿದ್ದಾರೆ. ನಿಯಮ ಬಾಹಿರವಾಗಿ ಮೃತಪಟ್ಟ ವ್ಯಕ್ತಿ ಖಾತೆಗೆ ಹಣ ಜಮಾ ಮಾಡಿರುವ ಪಿಡಿಓ ನಿರ್ಮಾಲ ವಿರುದ್ಧ ಗ್ರಾಪಂ ಅಧ್ಯಕ್ಷೆ ಜ್ಯೋತಿ ಜಿಪಂ ಸಿಇಓಗೆ ದೂರು ನೀಡಿದ್ದಾರೆ. ಪಿಡಿಓ ನಿರ್ಮಲಾ ಪಂಚಾಯಿತಿ ಸಮಯ ಹೊರತು ಪಡಿಸಿ ನಗರದ ಆರ್.ಪಿ.ರಸ್ತೆಯಲ್ಲಿರುವ ಕಂಪ್ಯೂಟರ್ ಸೆಂಟರ್‌ನಲ್ಲಿ ಯಾವುದೇ ಸಭೆ ನಡಾವಳಿ ಮಾಡದೆ ಪಂಚಾಯಿತಿ ಲಾಗಿನ್ ಬಳಸಿಕೊಂಡು 57ಕ್ಕೂ ಹೆಚ್ಚು ಇ–ಸ್ವತ್ತುಗಳನ್ನು ಮಾಡಿದ್ದಾರೆ. ನಿಯಮ ಬಾಹಿರವಾಗಿ ನಡೆದುಕೊಳ್ಳುತ್ತಿರುವ ಪಿಡಿಓ ನಿರ್ಮಲಾ ವಿರುದ್ಧ ತಕ್ಷಣ ಶಿಸ್ತು ಕ್ರಮ ಕೈಗೊಳ್ಳಬೇಕು. ತಪ್ಪಿದ್ದಲ್ಲಿ ತಾಪಂ ಅಥವಾ ಜಿಪಂ ಎದುರು ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರು ಧರಣಿ ನಡೆಸುತ್ತೇವೆ ಎಂದು ಎಚ್ಚರಿಕೆ ನೀಡಿದ್ದಾರೆ.

ತಾಪಂ ಇಓ ಜೆರಾಲ್ಡ್ ರಾಜೇಶ್ ಸುದ್ದಿಗಾರರೊಂದಿಗೆ ಮಾತನಾಡಿ, ಪಿಡಿಓ ನಿರ್ಮಲಾ ವಿರುದ್ಧ ದೂರು ಬಂದಿದೆ. ಗ್ರಾಪಂನಲ್ಲಿ ಸಮಿತಿ ರಚನೆ ಮಾಡಿ ಕುಲಂಕುಶವಾಗಿ ಎಲ್ಲಾ ದಾಖಲೆ ಮತ್ತು ಮಾಹಿತಿ ಪಡೆಯಲು ಕ್ರಮ ವಹಿಸಲಾಗಿದೆ. ಕೆಂಪಮ್ಮ ಅವರ ಖಾತೆಗೆ ಪಾವತಿಯಾದ ಹಣ ಡ್ರಾ ಆಗಿದೆಯೇ, ಮೃತಪಟ್ಟ 3 ವರ್ಷಗಳ ನಂತರ ಹಣ ಜಮಾ ಮಾಡಲು ಕಾರಣವೇನು ಎಂಬ ಬಗ್ಗೆ ತನಿಖೆ ನಡೆಸಿ ವರದಿಯನ್ನು ಜಿಪಂಗೆ ಸಲ್ಲಿಸಲಾಗುವುದು. ಪ್ರಕರಣದಲ್ಲಿ ತಪ್ಪಿತಸ್ಥರಿಗೆ ಶಿಕ್ಷೆಯಾಗಲಿದೆ ಎಂದರು.

ಉಪ್ಪಾರ ಸಮುದಾಯ ಭವನಕ್ಕೆ 10 ಲಕ್ಷ ಅನುದಾನ: ಶಾಸಕ ಪುಟ್ಟರಂಗಶೆಟ್ಟಿ



ಸರಗೂರು, ಜೂ.30– ಭಗೀರಥ ಉಪ್ಪಾರ ಸಮುದಾಯ ಭವನಕ್ಕೆ 10 ಲಕ್ಷ ರೂ. ಅನುದಾನ ನೀಡುವುದಾಗಿ ಶಾಸಕ ಪುಟ್ಟರಂಗಶೆಟ್ಟಿ ಭರವಸೆ ನೀಡಿದರು.

ಪಟ್ಟಣದಲ್ಲಿ ಶ್ರೀಅಂತರಘಟ್ಟಮ್ಮನವರ ದೇವಸ್ಥಾನ ಹಾಗೂ ವಿಗ್ರಹ ಜೀರ್ಣೋದ್ಧಾರ ಮತ್ತು ಕಳಸ ಪ್ರತಿಷ್ಠಾಪನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಭಗೀರಥ ಉಪ್ಪಾರ ಸಮಾಜ ಶೈಕ್ಷಣಿಕವಾಗಿ ಮುಂದೆ ಬರಬೇಕು. ಸಮಾಜದ ಬಂಧುಗಳು ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚು ಒತ್ತು ನೀಡಬೇಕು. ಭಗೀರಥ ಉಪ್ಪಾರ ಸಮುದಾಯ ಭವನಕ್ಕೆ 10 ಲಕ್ಷ ಅನುದಾನ ನೀಡುವುದಾಗಿ ತಿಳಿಸಿದರು.

ಶಾಸಕ ಅನಿಲ್ ಅವರ ತಾಯಿ ನಾಗಮ್ಮ ಮಾತನಾಡಿ, ಶಾಸಕ ಅನಿಲ್ ದೆಹಲಿಗೆ ಹೋಗಿರುವುದರಿಂದ ಕಾರ್ಯಕ್ರಮದಲ್ಲಿ ಭಾಗಿಯಾಗಲು ಸಾಧ್ಯವಾಗಿಲ್ಲ. ಶಾಸಕರು ಅವರ ತಂದೆಯಂತೆ ದೇವಸ್ಥಾನಗಳ ಅಭಿವೃದ್ಧಿ, ತಾಲೂಕಿನ ಗ್ರಾಮಗಳ ಅಭಿವೃದ್ಧಿಗೆ ಮುಂದಾಗಿರುವುದು ಸಂತಸ ತಂದಿದೆ. ಸಮಾಜದವರು ನಿರ್ಮಿಸಿರುವ ಶ್ರೀಅಂತರಘಟ್ಟಮ್ಮ ದೇವಸ್ಥಾನ ಅಬಿವೃದ್ಧಿಗೆ 2.5 ಲಕ್ಷ ನೀಡಲಾಗುವುದು ಎಂದರು.


ಶಾಸಕ ಪುಟ್ಟರಂಗಶೆಟ್ಟಿ, ಶಾಸಕ ಅನಿಲ್ ಅವರ ತಾಯಿ ನಾಗಮ್ಮ, ದೇವಾಲಯ ನಿರ್ಮಾಣಕ್ಕೆ ಸಹಕಾರ ನೀಡಿದ ದಾನಿಗಳು ಹಾಗೂ ಮುಖಂಡರನ್ನು ಉಪ್ಪಾರ ಸಮಾಜದಿಂದ ಅಭಿನಂದಿಸಲಾಯಿತು.

ಇದಕ್ಕೂ ಮುನ್ನಾ ಭಾನುವಾರ ಬೆಳಗ್ಗೆ ಶ್ರೀಅಂತರಘಟ್ಟಮ್ಮ ದೇವಸ್ಥಾನದಲ್ಲಿ ಹೋಮ ಹವನ, ಪೂಜಾ ಕೈಂಕರ್ಯ ನಡೆಯಿತು. ಅಲ್ಲದೇ ಭಕ್ತರಿಗೆ ಅನ್ನಸಂತರ್ಪಣೆ ಆಯೋಜಿಸಲಾಗಿತ್ತು.

ಈ ವೇಳೆ ಭಗೀರಥ ಉಪ್ಪಾರ ಸಮಾಜದ ಯಜಮಾನ ಮಲ್ಲೇಶ್, ಮಂಜು ಸೇರಿದಂತೆ ನಾಯಕ ಸಮಾಜದ ಮುಖಂಡರು, ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಸಮಾಜದ ಬಂಧುಗಳು ಇದ್ದರು.

ಸಂಸದ ಸುನೀಲ್ ಬೋಸ್ ಗೆಲುವಿಗೆ ಸಹಕಾರ ಹಿನ್ನೆಲೆ

ದೆಹಲಿಯಲ್ಲಿ ಸಿಎಂ ಸಿದ್ದರಾಮಯ್ಯಗೆ 'ಕೈ' ಮುಖಂಡರ ಅಭಿನಂದನೆ



ಸಿಎಂ ಸಿದ್ದರಾಮಯ್ಯ ಅವರನ್ನು ಕಾಂಗ್ರೆಸ್ ಮುಖಂಡರು ಅಭಿನಂದಿಸಿದರು.

ತಿ.ನರಸೀಪುರ, ಜೂ.30– ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ ಸುನೀಲ್ ಬೋಸ್ ಗೆಲುವಿಗೆ ಸಂಪೂರ್ಣ ಸಹಕಾರ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಪಟ್ಟಣದ ಕಾಂಗ್ರೆಸ್ ಮುಖಂಡರು ಅಭಿನಂದಿಸಿದರು.

ದೆಹಲಿ ಪ್ರವಾಸದಲ್ಲಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಅಭಿನಂದನೆ ಸಲ್ಲಿಸಿ ಮಾತನಾಡಿದ ಮುಖಂಡರು, ಲೋಕಸಭಾ ಚುನಾವಣೆಗೂ ಮನ್ನಾ ಚಾಮರಾಜನಗರದಲ್ಲಿ ಸುನೀಲ್ ಬೋಸ್‌ಗೆ ಎಷ್ಟೇ ವಿರೋಧವಿದ್ದರೂ, ಅದನ್ನು ಲೆಕ್ಕಿಸದೇ ಕಾಂಗ್ರೆಸ್ ಟಿಕೆಟ್ ನೀಡಿ, ಅವರ ಪರ ಪ್ರಚಾರ ಕೈಗೊಂಡು ಅವರು ಕ್ಷೇತ್ರದಲ್ಲಿ ದಾಖಲೆಯ ಅಂತರದಲ್ಲಿ ಜಯ ಗಳಿಸಲು ಸಹಕಾರ ನೀಡಿದ್ದೀರಿ. ಮುಂದಿನ ದಿನಗಳಲ್ಲಿ ಗಡಿ ಜಿಲ್ಲೆಯಾಗಿರುವ ಚಾಮರಾಜನಗರ ಕ್ಷೇತ್ರದ ಅಭಿವೃದ್ಧಿಗೆ ಅನುದಾನ ನೀಡಬೇಕು ಎಂದು ಮನವಿ ಮಾಡಿದರು.

ತಾವೂ ಪ್ರತಿನಿಧಿಸುವ ವರುಣ ಹಾಗೂ ತಿ.ನರಸೀಪುರ ವಿಧಾನಸಭಾ ಕ್ಷೇತ್ರಗಳ ಅಭಿವೃದ್ಧಿಗೆ ಹೆಚ್ಚಿನ ಅನುದಾನ ಬಿಡುಗಡೆ ಮಾಡುವಂತೆ ಮನವಿ ಮಾಡಿದ ಕಾಂಗ್ರೆಸ್ ಮುಖಂಡರು, ಪಟ್ಟಣದ ಇತಿಹಾಸ ಪ್ರಸಿದ್ಧ ಶ್ರೀಗುಂಜಾ ನರಸಿಂಹಸ್ವಾಮಿ ದೇವಾಲಯ ಹಾಗೂ ಅಗಸ್ತ್ಯೇಶ್ವರ ದೇವಾಯಲದ ನಡುವೆ ಹರಿಯುವ ನದಿಗೆ ಸೇತುವೆ ನಿರ್ಮಾಣ ಮಾಡಬೇಕು. ಆ ಮೂಲಕ ನರಸಿಂಹಸ್ವಾಮಿ ಹಾಗೂ ಅಗಸ್ತ್ಯೇಶ್ವರನ ಭಕ್ತರಿಗೆ ಅನುಕೂಲ ಕಲ್ಪಿಸಬೇಕು. ಅಲ್ಲದೇ ತಿ.ನರಸೀಪುರ ಪಟ್ಟಣಕ್ಕೆ ಅಗತ್ಯ ಮೂಲ ಸೌಕರ್ಯ ಒದಗಿಸಲು ಮುಂದಾಗಬೇಕು ಮತ್ತು ತಾಲೂಕಿನಲ್ಲಿರುವ ನಿರುದ್ಯೋಗಿ ಯುವಕ–ಯುವತಿಯರಿಗೆ ಸರ್ಕಾರದ ವತಿಯಿಂದ ಕಾರ್ಖಾನೆ ತೆರೆದು ಉದ್ಯೋಗ ನೀಡುವ ಮೂಲಕ ನಿರುದ್ಯೋಗ ನಿವಾರಣೆಗೆ ಕ್ರಮ ಕೈಗೊಳ್ಳಬೇಕು ಎಂದರು.

ವರುಣ ಹಾಗೂ ತಿ.ನರಸೀಪುರ ವಿಧಾನಸಭಾ ಕ್ಷೇತ್ರಗಳು ನಿಮಗೆ ಹಾಗೂ ಸಚಿವ ಹೆಚ್.ಸಿ.ಮಹದೇವಪ್ಪ ನವರಿಗೆ ಎರಡು ಕಣ್ಣುಗಳು ಇದ್ದಂತೆ. ಹೀಗಾಗಿ ಕ್ಷೇತ್ರಗಳನ್ನು ಸಮಗ್ರವಾಗಿ ಅಭಿವೃದ್ಧಿಗೊಳಿಸುವ ಮೂಲಕ ಮಾದರಿ ಕ್ಷೇತ್ರವನ್ನಾಗಿ ಅಭಿವೃದ್ಧಿಗೊಳಿಸಬೇಕು ಎಂದು ಇದೇ ವೇಳೆ ಮನವಿ ಮಾಡಿದರು. ಕಾಂಗ್ರೆಸ್ ಮುಖಂಡರ ಮನವಿ ಆಲಿಸಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳು ಹಾಗೂ ಅಭಿವೃದ್ಧಿ ಕಾರ್ಯಗಳಿಂದ ಲೋಕಸಭಾ ಚುನಾವಣೆಯಲ್ಲಿ ಸುನೀಲ್ ಬೋಸ್ ಅತ್ಯಧಿಕ ಮತಗಳಿಂದ ಜಯ ಗಳಿಸಿದ್ದಾರೆ. ಮುಂಬರುವ ಜಿಪಂ, ತಾಪಂ ಚುನಾವಣೆಯಲ್ಲೂ ಕಾಂಗ್ರೆಸ್ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಜಯ ಗಳಿಸಲಿದ್ದು, ಕಾರ್ಯಕರ್ತರು ಪಕ್ಷ ಸಂಘಟನೆಗೆ ಮುಂದಾಗಬೇಕು. ಅಲ್ಲದೇ ವರುಣ ಹಾಗೂ ತಿ.ನರಸೀಪುರ ವಿಧಾನಸಭಾ ಕ್ಷೇತ್ರಗಳ ಸಮಗ್ರ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗುವುದು. ಮತ್ತು ತಾಲೂಕಿನ ನಿರುದ್ಯೋಗಿಗಳಿಗೆ ಕಾರ್ಖಾನೆ ತೆರೆದು ಉದ್ಯೋಗ ನೀಡುವ ಮೂಲಕ ಅವರ ಸಮಸ್ಯೆ ಬಗೆಹರಿಸಲಾಗುವುದು. ಪಟ್ಟಣದ ಶ್ರೀಗುಂಜಾ ನರಸಿಂಹಸ್ವಾಮಿ ಹಾಗೂ ಅಗಸ್ತ್ಯೇಶ್ವರ ದೇವಾಲಯದ ನಡುವೆ ಸೇತುವೆ ನಿರ್ಮಾಣ ಕೈಗೊಳ್ಳಲು ಅಗತ್ಯ ಕ್ರಮ ವಹಿಸಲಾಗುವುದು ಎಂದರು.

ಈ ವೇಳೆ ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ, ತಾಪಂ ಮಾಜಿ ಅಧ್ಯಕ್ಷ ಹಾಗೂ ಕೆಪಿಸಿಸಿ ಸದಸ್ಯ ದೊಡ್ಡಬಾಗಿಲು ಎಂ.ಮಲ್ಲಿಕಾರ್ಜುನಸ್ವಾಮಿ, ಬನ್ನೂರು ಪುರಸಭೆ ಮಾಜಿ ಅಧ್ಯಕ್ಷ ಮುನಾವರ್ ಪಾಷ, ಕಾಂಗ್ರೆಸ್ ಯುವ ಮುಖಂಡ ಧೀರಜ್ ಪ್ರಸಾದ್ ಸೇರಿದಂತೆ ಇನ್ನಿತರರಿದ್ದರು.


ಮೂಡಲಹುಂಡಿಯಲ್ಲಿ ಹುಲಿ ಪತ್ತೆಗೆ ಮುಂದುವರೆದ ಕಾರ್ಯಾಚರಣೆ

● ಕ್ಯಾಮರಾ ಟ್ರ್ಯಾಪ್‌ನಲ್ಲೂ ಸಿಗದ ಹುಲಿ ಸುಳಿವು ● ಡ್ರೋನ್ ಕಣ್ಣಿಗೂ ಬೀಳದ ಹುಲಿರಾಯ ● ಮೊರಾರ್ಜಿ ದೇಸಾಯಿ ಶಾಲಾ ಆವರಣದಲ್ಲಿ ಬೀಡು ಬಿಟ್ಟಿರುವ ಸಿಬ್ಬಂದಿ

ಮೈಸೂರು, ಜೂ.30(ಎಂಟಿವೈ)– ಮೈಸೂರು ತಾಲೂಕಿನ ಮೂಡಲ ಹುಂಡಿ–ವರಕೋಡು ಸಮೀಪ ಕಾಣಿಸಿ ಕೊಂಡಿರುವ ಹುಲಿ ಪತ್ತೆಗೆ ಅರಣ್ಯ ಸಿಬ್ಬಂದಿ ಗಳ ತಂಡ ಕಾರ್ಯಾಚರಣೆ ಮುಂದುವರೆ ಸಿದ್ದರೂ ಕ್ಯಾಮರಾ ಟ್ರ್ಯಾಪ್ ಮತ್ತು ಡ್ರೋನ್ ಕ್ಯಾಮರಾ ಕಣ್ಣಿಗೆ ಹುಲಿ ಸಿಗದೇ ಅರಣ್ಯ ಸಿಬ್ಬಂದಿಗಳನ್ನು ಚಿಂತೆಗೀಡು ಮಾಡಿದೆ.

ಮೂಡಲಹುಂಡಿ ಗ್ರಾಮಕ್ಕೆ ಹೊಂದಿ ಕೊಂಡಂತೆ ಇರುವ ದೊಣ್ಣೆಕಲ್ಲು ಗುಡ್ಡದ ರಸ್ತೆಯಲ್ಲಿ ಶನಿವಾರ ಬೆಳಗ್ಗೆ 9.30ರಲ್ಲಿ ಬೈಕ್ ಸವಾರರಿಗೆ ಹುಲಿಯೊಂದು ಕಂಡಿತ್ತು. ಮೂವರು ಯುವಕರು ಹುಲಿ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿ ರುವ ವೀಡಿಯೋವನ್ನು ಚಿತ್ರೀಕರಿಸಿ ಸ್ಥಳೀಯರಿಗೆ ಹುಲಿ ಬಗ್ಗೆ ಜಾಗೃತಿ ಮೂಡಿಸಿದ್ದರು. ಅಲ್ಲದೇ ಅರಣ್ಯ ಇಲಾಖೆಗೆ ಮಾಹಿತಿಯನ್ನೂ ನೀಡಿದ್ದರು.

ಶನಿವಾರ ಬೆಳಗ್ಗಿನಿಂದಲೇ ಹುಲಿ ಶೋಧನಾ ಕಾರ್ಯದಲ್ಲಿ ಅರಣ್ಯ ಸಿಬ್ಬಂದಿಗಳ ತಂಡ ಕಾರ್ಯೋನ್ಮುಖವಾಗಿದ್ದು, ಹುಲಿ ಸಂಚರಿ ಸಿದ ರಸ್ತೆ, ಮೊರಾರ್ಜಿ ದೇಸಾಯಿ ಶಾಲೆಯ ಹಿಂಭಾಗದ ಅರಣ್ಯ ಪ್ರದೇಶ, ಸಮೀಪದ ಹೊಲಗಳಲ್ಲಿ ಸುಮಾರು 25 ಕ್ಯಾಮರಾ ಟ್ರ್ಯಾಪ್ ಅಳವಡಿಸಿ ನೈಟ್



ಹುಲಿ ಪತ್ತೆಗೆ ಕ್ಯಾಮರಾ ಟ್ರ್ಯಾಪ್ ಅಳವಡಿಸಿರುವುದು.

ವಿಷನ್ ಐಆರ್ –ಜಿಎಸ್‌ಎಂ ಕ್ಯಾಮರಾ ಹಾಗೂ ಡ್ರೋನ್ ಕ್ಯಾಮರಾ ಬಳಸಿ ಕಾರ್ಯಾಚರಣೆ ಆರಂಭಿಸಿದ್ದರು.

ಹುಲಿ ಕಾಣಿಸಿಕೊಂಡು 24 ಗಂಟೆ ಯಾದರೂ, ಮತ್ತೇ ಹುಲಿ ಸುಳಿವು ಪತ್ತೆಯಾಗಿಲ್ಲ. ಅಲ್ಲದೇ ಹುಲಿಯೂ ಸಹ ಕ್ಯಾಮರಾ ಇರುವ ಸ್ಥಳಗಳಲ್ಲಿ ಓಡಾಡಿಲ್ಲ. ಇದರಿಂದ ಕಾರ್ಯಾಚರಣೆಯಲ್ಲಿ ತೊಡಗಿ ಸಿಕೊಂಡಿರುವ ಅರಣ್ಯ ಸಿಬ್ಬಂದಿಗಳು,



ಹುಲಿ ಸೆರೆ ಕಾರ್ಯಾಚರಣೆಗೆ ತೆರಳುತ್ತಿರುವ ಅರಣ್ಯ ಸಿಬ್ಬಂದಿ

ಚಿರತೆ ಕಾರ್ಯಪಡೆ ಸಿಬ್ಬಂದಿಗಳಿಗೆ ತಲೆ ನೋವಾಗಿ ಪರಿಣಮಿಸಿದೆ. ಆದರೆ ಸ್ಥಳೀಯ ಗ್ರಾಮಸ್ಥರಲ್ಲಿ ಆತಂಕ ಇಮ್ಮಡಿಯಾಗಿದೆ.

ನವಿಲುಗಳ ಆರ್ತನಾದ: ಹುಲಿ ಕಾಣಿಸಿ ಕೊಂಡ ಸ್ಥಳ ಹಾಗೂ ದೊಣ್ಣೆಕಲ್ಲು ಬೆಟ್ಟದಲ್ಲಿ ನವಿಲು ಮತ್ತು ಜಿಂಕೆ ಹೆಚ್ಚಾಗಿದ್ದು, ರಾತ್ರಿ ಹಲವು ಬಾರಿ ನವಿಲುಗಳು ಆತಂಕ ದಿಂದ ಚೀರಾಡುತ್ತಿದ್ದ ಶಬ್ದ ಸ್ಥಳೀಯರಿಗೆ ಕೇಳಿಸಿದೆ. ಇದರಿಂದ ಹುಲಿ ಅಲ್ಲಿಯೇ ಇರಬಹುದೆಂಬ ಶಂಕೆ ದಟ್ಟವಾಗಿದೆ.

ಶಾಲಾ ವಿದ್ಯಾರ್ಥಿಗಳಿಗೆ ಭದ್ರತೆ: ಹುಲಿ ಪ್ರತ್ಯಕ್ಷವಾದ ಸ್ಥಳದ ಸಮೀಪ ಮೊರಾರ್ಜಿ ದೇಸಾಯಿ ವಸತಿ ಶಾಲೆ ಇದ್ದು, ಈ ಶಾಲೆಯ ವಿದ್ಯಾರ್ಥಿಗಳ ಹಿತದೃಷ್ಟಿ ಯಿಂದ ಅರಣ್ಯ ಸಿಬ್ಬಂದಿಗಳ ತಂಡ ವೊಂದು ಶಾಲಾ ಆವರಣದಲ್ಲಿ ಬೀಡು ಬಿಟ್ಟಿದೆ. ರಾತ್ರಿಯಿಡೀ ಮುಂಜಾಗ್ರತಾ ಕ್ರಮವಾಗಿ ಶಾಲಾ ಕಟ್ಟಡದ ಹಿಂಭಾಗ ನಾಲ್ಕೈದು ಸ್ಥಳದಲ್ಲಿ ಬೆಂಕಿಯನ್ನು ಹಾಕುವ ಮೂಲಕ ರಾತ್ರಿಯಿಡೀ ಕಾವಲು ಇದ್ದು, ವಿದ್ಯಾರ್ಥಿಗಳು ವಸತಿ ಶಾಲೆಯಿಂದ ಅನಗತ್ಯವಾಗಿ ಹೊರಗೆ ಬರದಂತೆ ಸೂಚನೆ ನೀಡಿ ಕಣ್ಗಾವಲು ಇಡಲಾಗಿದೆ.

ಭಕ್ತರಲ್ಲಿ ಭಯ: ಹುಲಿ ಸಂಚರಿಸಿದ ರಸ್ತೆಯಲ್ಲಿ ಉದ್ಭವ ಮಹದೇಶ್ವರ ದೇವಾ ಲಯವಿದ್ದು, ಜುಲೈ 5ರಂದು ಅಮಾವಾಸ್ಯೆ ಅಂಗವಾಗಿ ವಿಶೇಷ ಪೂಜಾ ಮಹೋ ತ್ಸವ ಜರುಗಲಿದೆ. ಈ ವೇಳೆ ವಿವಿಧೆಡೆ ಯಿಂದ ಭಕ್ತರು ಕಾಲ್ನಡಿಗೆಯಲ್ಲಿ ಈ ದೇವಾಲಯಕ್ಕೆ ಬರುವ ವಾಡಿಕೆ ಇದ್ದು, ಹುಲಿ ಇರುವಿಕೆಯಿಂದ ಭಯಭೀತರಾಗಿದ್ದಾರೆ.

ಕೃಷಿ ಚಟುವಟಿಕೆಗೂ ಭಯ: ಹುಲಿ ಕಾಣಿಸಿಕೊಂಡ ಪ್ರದೇಶದಲ್ಲಿ ವರ ಕೋಡು, ಮೂಡಲಹುಂಡಿ ಹಾಗೂ ಕೆಂಪೇಗೌಡನ ಹುಂಡಿಯ ಗ್ರಾಮಸ್ಥರಿಗೆ ಸೇರಿದ ಕೃಷಿಭೂಮಿ ಇದೆ. ಈ ಭೂಮಿ ಯಲ್ಲಿ ಕೃಷಿಚಟುವಟಿಕೆ ನಡೆಸುವುದಕ್ಕೂ ಹಾಗೂ ಜಾನುವಾರುಗಳನ್ನು ಮೇಯಿಸಲು ಕೊಂಡೊಯ್ಯಲು ಜನರಿಗೆ ಭಯವುಂಟಾಗಿದೆ

ಸಹಕರಿಸಿ: ಹುಲಿ ಚಲನ–ವಲನ ಪತ್ತೆಗೆ ಕ್ಯಾಮರಾ ಟ್ರ್ಯಾಪ್ ಅಳ ವಡಿಸಲಾಗಿದ್ದು, ಮತ್ತೊಂದೆಡೆ ಬೋನ್‌ವೊಂದನ್ನು ಇಡಲಾಗಿದೆ. ಆದರೆ ಹುಲಿ ಎಲ್ಲಿಯೂ ಪತ್ತೆಯಾಗದ ಕಾರಣ ಮೂಡಲಹುಂಡಿ ಗ್ರಾಮದಿಂದ ಮಹದೇಶ್ವರ ದೇವಾಲಯದ ಮುಂಭಾಗದ ರಸ್ತೆಯಲ್ಲಿ ನರಸೀಪುರ ರಸ್ತೆ ಕಡೆಗೆ ಓಡಾಡದಂತೆ ಅರಣ್ಯ ಇಲಾಖೆ ಮನವಿ ಮಾಡಿದೆ.

'ನಾನು ಸತ್ತ ಮೇಲೆ' ಕವನ ಸಂಕಲನ ವಾಚನ

ಮೈಸೂರು, ಜೂ.30(ಎಂಕೆ)– ಮೈಸೂರು ರಂಗಾಯಣದ ಬಿ.ವಿ.ಕಾರಂತ ರಂಗಚಾವಡಿಯಲ್ಲಿ ಕವಿ, ರಂಗ ನಿರ್ದೇಶಕ ರಘುನಂದನ ಅವರ 'ನಾನು ಸತ್ತ ಮೇಲೆ' ಕವನ ಸಂಕಲನಗಳ ವಾಚನ, ವಿಮರ್ಶೆ ಹಾಗೂ ಸಂವಾದ ಕಾರ್ಯಕ್ರಮ ನಡೆಯಿತು. ಸ್ವತಃ ರಂಗ ನಿರ್ದೇಶಕ ರಘುನಂದನ, ತಾವೇ ಬರೆದ ನುಡಿಗಟ್ಟು ಹಾಗೂ ಛಂದೋಲಗಳಲ್ಲಿದ್ದ ಕವನಗಳನ್ನು ವಾಚಿಸಿ, ನೆರೆದಿದ್ದವರು ಗಮನ ಸೆಳೆದರು. ಕವನಗಳ ವಾಚಿಸುತ್ತಲೇ ವಿವರಣೆ ನೀಡುತ್ತಾ ಕವನಗಳ ಭಾವಾರ್ಥವನ್ನು ಮನದಟ್ಟುಕೊಟ್ಟರಲ್ಲದೆ ಕವನ ಸಂಕಲನವನ್ನು ಓದುವಂತೆ ಪ್ರೇರೆಪಿಸಿದರು.



ಇದಕ್ಕೂ ಮುನ್ನ ಸಂವಾದ ನಡೆಸಿದ ಲೇಖಕ ಹಾಗೂ ಸುಸ್ಥಿರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ತಜ್ಞ ಕೆ.ಪಿ.ಸುರೇಶ ಮಾತನಾಡಿ, ಕವನಗಳನ್ನು ಓದಿ ಅರ್ಥ ಮಾಡಿಕೊಳ್ಳಲು ಆಸಕ್ತಿ ಜೊತೆಗೆ ಕವಿತೆಯ ನಿರೂಪಣೆ ನಿಖರವಾಗಿರಬೇಕು. ರಂಗ ನಿರ್ದೇಶಕ ರಘುನಂದನ ಅವರ ಕವನಗಳು ನಿಖರವಾಗಿವೆ. ಅರ್ಥಮಾಡಿಕೊಳ್ಳಬೇಕಾದರೆ ಒಂದೊಂದು ಪದವನ್ನು ಪರಿಗಣಿಸಿ ಒಳಹೊಕ್ಕಬೇಕು. ಅಲ್ಲದೆ ಕವನಗಳಲ್ಲಿ ಲಾಲಿತ್ಯ ಮತ್ತು ಗೆಯತೆ ಬಹಳ ಕಡಿಮೆ ಇದೆ ಎಂದರು.

ದಲಿತರ ಕಲ್ಯಾಣದ ಹಣ ದುರ್ಬಳಕೆ; ರಾಜ್ಯ ಸರ್ಕಾರ ವಜಾಗೊಳಿಸಲು ಆಗ್ರಹ

ಮೈಸೂರು, ಜೂ.30(ಎಂಕೆ)– ದಲಿತರ ಪರವಾಗಿದ್ದೇವೆ ಎಂದೇಳಿ ಕೊಂಡು ದಲಿತರ ಕಲ್ಯಾಣ ಕ್ಕಾಗಿ ಮೀಸಲಾಗಿದ್ದ ಹಣವನ್ನು ದುರ್ಬಳಕೆ ಮಾಡಿಕೊಂಡಿರುವ ರಾಜ್ಯ ಕಾಂಗ್ರೆಸ್ ಸರ್ಕಾರವನ್ನು ರಾಜ್ಯಪಾಲರು ಕೂಡಲೇ ವಜಾ ಗೊಳಿಸಬೇಕು ಎಂದು ಮಾಜಿ ಮೇಯರ್ ಶಿವಕುಮಾರ್ ಒತ್ತಾಯಿಸಿದ್ದಾರೆ.



ದಲಿತರ ಪರವಾಗಿ ಇರ್ತೀವಿ ಎಂದು ಹೇಳಿಕೊಂಡೇ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ, ಕಳೆದೊಂದು ವರ್ಷದಿಂದ ದಲಿತರಿಗೆ ಅನ್ಯಾಯ ಮಾಡುತ್ತಿದೆ ಕಳೆದ ಬಜೆಟ್‌ನಲ್ಲಿ ಎಸ್‌ಸಿ–ಎಸ್‌ಟಿ ಜನತೆಯ ಕಲ್ಯಾಣಕ್ಕಾಗಿ ಮೀಸಲಾಗಿದ್ದ 11 ಸಾವಿರ ಮತ್ತು ಈ ವರ್ಷದ 14 ಸಾವಿರ ಕೋಟಿ ಸೇರಿ ಒಟ್ಟಾರೆ 25 ಸಾವಿರ ಕೋಟಿ ರೂ. ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಿಕೊಂಡಿರುವ ರಾಜ್ಯ ಸರ್ಕಾರ ದಲಿತರಿಗೆ ಅನ್ಯಾಯವೆಸಗಿದೆ. ಅಲ್ಲದೆ ಪರಿಶಿಷ್ಟ ಪಂಗಡಕ್ಕೆ ಸೇರಿದ ವಾಲ್ಮೀಕಿ ಅಭಿವೃದ್ಧಿ ನಿಗಮದ 187 ಕೋಟಿ ರೂ.ಗಳನ್ನು ಬೇರೆ ಬೇರೆ ಬ್ಯಾಂಕ್‌ಗಳಿಗೆ ಹಾಗೂ ತೆಲಂಗಾಣಕ್ಕೆ ವರ್ಗಾಯಿಸಿ, ಅಲ್ಲಿನ ಚುನಾವಣೆಗೆ ಬಳಕೆ ಮಾಡಿಕೊಂಡಿರುವುದು ಸಾಬೀತಾಗಿದೆ. ದಲಿತರ ಪರವಾಗಿದ್ದೇವೆ ಎಂದು ಹೇಳಿಕೊಂಡೇ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣವನ್ನು ದುರ್ಬಳಕೆ ಮಾಡಿಕೊಂಡಿರುವುದರಿಂದ ಈ ಸರ್ಕಾರ ಮುಂದುವರೆಯುವ ನೈತಿಕತೆಯನ್ನು ಕಳೆದುಕೊಂಡಿದೆ. ಹಾಗಾಗಿ ರಾಜ್ಯಪಾಲರು ಕೂಡಲೇ ಮಧ್ಯ ಪ್ರವೇಶಿಸಿ, ಈ ಸರ್ಕಾರವನ್ನು ವಜಾಗೊಳಿಸಬೇಕು ಎಂದು ಪತ್ರಿಕಾ ಪ್ರಕಟಣೆಯಲ್ಲಿ ಆಗ್ರಹಿಸಿದ್ದಾರೆ.

ಜ್ಞಾನವೃದ್ಧಿಗೆ ಪುಸ್ತಕಗಳು ಸಹಕಾರಿ

ಕವಯಿತ್ರಿ ಡಾ|| ಲತಾ ರಾಜಶೇಖರ್ ಅಭಿಮತ

ಮೈಸೂರು,ಜೂ.30(ಎಂಟಿವೈ)– ಎಲ್ಲರೂ ಜ್ಞಾನ ಸಂಪತ್ತನ್ನು ವೃದ್ಧಿಸಿ ಕೊಳ್ಳಲು ಪುಸ್ತಕ ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು ಎಂದು ಕವಯತ್ರಿ ಡಾ.ಲತಾ ರಾಜಶೇಖರ್ ಸಲಹೆ ನೀಡಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಸಭಾಂಗಣದಲ್ಲಿ ಭಾನುವಾರ ಹೇಮಗಂಗಾ ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ ಹಾಗೂ ಮೈಸೂರು ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಎ.ಹೇಮಗಂಗಾ ಅವರ 'ಕನಸಿಲ್ಲದ ಹಾದಿಯಲ್ಲಿ' ಕವನ ಸಂಕಲ ಬಿಡುಗಡೆ ಮಾಡಿ ಮಾತನಾಡಿದ ಅವರು, ಜ್ಞಾನವೃದ್ಧಿಗೆ ಪುಸ್ತಕಗಳು ಸಹಕಾರಿಯಾಗುತ್ತವೆ. ಜ್ಞಾನ ಸಂಪತ್ತು ಹೆಚ್ಚಿಸಿಕೊಳ್ಳಲು ಎಲ್ಲರೂ ಪುಸ್ತಕ ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು. ಪುಸ್ತಕ ಓದುವುದರಿಂದ ದೇಶ–ವಿದೇಶಗಳ ಪರ್ಯಟನೆ ಮಾಡಿದಂತಾಗುತ್ತದೆ. ಪುಸ್ತಕಗಳಲ್ಲಿರುವ ಮಾಹಿತಿಗಳಿಂದಾಗಿ ಓದುಗರು ದೇಶ–ವಿದೇಶಗಳ ಚಿತ್ರಣವನ್ನು ಮನಗಾಣಬಹುದಾಗಿದೆ ಎಂದರು.

ಪುಸ್ತಕಗಳಲ್ಲಿ ಎರಡು ವಿಧವಿದ್ದು, ಒಂದು ಲಿಟರೇಚರ್ ಆಫ್ ನಾಲೆಡ್ಜ್, ಮತ್ತೊಂದು ಲಿಟರೇಚರ್ ಆಫ್ ಪವರ್ ಎಂದು ವಿಂಗಡಿಸಬಹುದು. ಪುಸ್ತಕಗಳು ಬಹಳ ಮುಖ್ಯವಾದ ಪಾತ್ರ ನಿರ್ವಹಿ ಸುತ್ತವೆ. ಅವು ಮನುಕುಲಕ್ಕೆ ಅತ್ಯಂತ ಅಗತ್ಯವಾದುದ್ದಾಗಿದೆ. ಪ್ರತಿಯೊಬ್ಬರ ಬದುಕಿನಲ್ಲಿ ಪುಸ್ತಕಗಳು ದಾರಿದೀಪವಾಗಿ ಬೆಳಗಲಿದೆ ಎಂದು ತಿಳಿಸಿದರು.

ಪುಸ್ತಕ ಓದುವುದರಿಂದ ಮಹನೀಯರು, ಸಾಧಕರ ಬಗ್ಗೆಯೂ ತಿಳಿದುಕೊಳ್ಳ ಬಹುದು. ಓದುಗರು ಮಹರ್ಷಿ ವಾಲ್ಮೀಕಿಯವರ ಜೊತೆಯಲ್ಲಿ ಅಯೋಧ್ಯೆ ಸೇರಿದಂತೆ ಅನೇಕ




ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಶಾಲೆಯ ಸಭಾಂಗಣದಲ್ಲಿ ಭಾನುವಾರ ಹೇಮಗಂಗಾ ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ ಹಾಗೂ ಮೈಸೂರು ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರಿಗೆ ವಿವಿಧ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಪುಣ್ಯ ಕ್ಷೇತ್ರಗಳ ದರ್ಶನ ಮಾಡುತ್ತಾರೆ. ವ್ಯಾಸ ಮಹರ್ಷಿ ಜೊತೆಯಲ್ಲಿ ಭಾರತದ ಮಹಾನಗರಿಗಳನ್ನು ನೋಡಬಹುದು. ಕಾಳಿದಾಸನ ಜೊತೆಯಲ್ಲಿ ಉಜ್ಜಯಿನಿ ವೈಭವ ಕಾಣಬಹುದು. ಕಲ್ಹಣದ ಜೊತೆ ಯಲ್ಲಿ ಕಾಶ್ಮೀರದ ಸೌಂದರ್ಯವನ್ನು ಕಾಣಬಹುದು. ಶೇಕ್ ಸ್ಪಿಯರ್ ಇಂಗ್ಲೆಂಡ್ ಸೌಂದರ್ಯ ಅಸ್ವಾದಿಸ ಬಹುದು ಎಂದು ವಿವರಿಸಿದರು.

ಪ್ರಶಸ್ತಿ ಪ್ರದಾನ: ಇದೇ ವೇಳೆ ಡಾ.ಲತಾ ರಾಜಶೇಖರ್ ಅವರಿಗೆ 'ಮಹಾಕಾವ್ಯ ಸರಸ್ವತಿ ಪ್ರಶಸ್ತಿ', ವಿದುಷಿ ಎಸ್.ವಿ. ಪನ್ನಗ, ವಿ. ಸುನಂದ ದಿಲೀಪ್ ಅವರಿಗೆ 'ಗಾಯನ ಗಂಗಾ ಪ್ರಶಸ್ತಿ', ಬಿ.ಕೆ.ಮೀನಾಕ್ಷಿ, ಸುಜಾತಾ ರವೀಶ್, ಯಶೋಧ ರಾಮಕೃಷ್ಣ, ಜೆ.ಪ್ರಭಾಶಾಸ್ತ್ರಿ, ಪಿ.ಎಸ್.ವೈಲೇಶ ಕೊಡಗು ಅವರಿಗೆ 'ಸಾಹಿತ್ಯ ಗಂಗಾ ಪ್ರಶಸ್ತಿ', ಎನ್.ಸಿ.ಮಮತಾ ಅವರಿಗೆ 'ಸಂಘಟನಾ ಚತುರೆ ಪ್ರಶಸ್ತಿ', ಡಾ.ಕೆ.ಪ್ರೇಮಕುಮಾರ್ ಅವರಿಗೆ ವಿದ್ಯಾನಿಧಿ ಪ್ರಶಸ್ತಿ, ಕೇಶವ್ ಕೌಶಕ್ ಅವರಿಗೆ ಸಾಧನ ಗಂಗಾ ಪ್ರಶಸ್ತಿ, ಸೌರವ್ ಗಜ್ ಅವರಿಗೆ ಪ್ರತಿಭಾ ಗಂಗಾ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮೈಸೂರು ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ ಅಧ್ಯಕ್ಷ ಎಂ.ಬಿ.ಸಂತೋಷ್ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಹೇಮಗಂಗಾ ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನದ ಅಧ್ಯಕ್ಷೆ ಎ.ಹೇಮಗಂಗಾ, ಸಾಂಸ್ಕೃತಿಕ ಸಮಿತಿ ಅಧ್ಯಕ್ಷೆ ಸಿ.ವಾಣಿ ರಾಘ ವೇಂದ್ರ, ಕವಯಿತ್ರಿ ಬಿ.ಶೋಭಾ, ಕವಯತ್ರಿ ಕೆರೋಡಿ ಎಂ.ಲೋಲಾಕ್ಷಿ, ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನದ ಉಪಾಧ್ಯಕ್ಷೆ ಡಾ.ಸೌಗಂಧಿಕಾ ವಿ.ಜೋಯಿಸ್, ಪ್ರಧಾನ ಕಾರ್ಯದರ್ಶಿ ಬಿ.ಶೋಭಾ, ಕೋಶಾಧ್ಯಕ್ಷೆ ರೇಖಾ ಸಂತೋಷ್, ಸಹಕಾರ್ಯದರ್ಶಿ ಎಸ್.ಆರ್.ರೂಪಶ್ರೀ, ಸಂಘಟನಾ ಕಾರ್ಯ ದರ್ಶಿಗಳಾದ ನೀತು ಎಸ್.ರಾಜ್, ಡಾ.ಕೆ. ಪ್ರೇಮ್‌ಕುಮಾರ್ ಉಪಸ್ಥಿತರಿದ್ದರು.

ಗ್ರೀನ್ ವಾರಿಯರ್ ರಘುಲಾಲ್ ರಾಘವನ್‌ರಿಗೆ ಅಭಿನಂದನೆ



ಮಡಿಕೇರಿಯಲ್ಲಿ ಭಾನುವಾರ ನಡೆದ ದಿ ಕರ್ನಾಟಕ ಕೆಮಿಸ್ಟ್ಸ್ ಅಂಡ್ ಡ್ರಗ್ಗಿಸ್ಟ್ಸ್ ಅಸೋಸಿಯೇಷನ್ (ಕೆಸಿಡಿಎ)ನ ರಾಜ್ಯಮಟ್ಟದ ಸಭೆಯಲ್ಲಿ ಫಾರ್ಮಸಿಸ್ಟ್ ಗ್ರೀನ್ ವಾರಿಯರ್ ಖ್ಯಾತಿಗೆ ಪಾತ್ರಾದ ಮೈಸೂರಿನ ರಘುಲಾಲ್ ಅಂಡ್ ಕಂಪನಿಯ ಎನ್.ರಾಘವನ್ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು. ಕರ್ನಾಟಕದ ಡ್ರಗ್ಸ್ ಕಂಟ್ರೋಲರ್ ಖಾನ್‌ಪುರೆ, ಉಪ ಡ್ರಗ್ಸ್ ಕಂಟ್ರೋಲರ್ ಕೆಂಪಯ್ಯ ಸುರೇಶ್, ಅರುಣ್, ಆಲ್ ಇಂಡಿಯಾ ಅಸೋಸಿಯೇಷನ್ ಆಫ್ ಕೆಮಿಸ್ಟ್ಸ್ ಅಂಡ್ ಡ್ರಗ್ಗಿಸ್ಟ್ಸ್‌ನ ಅಧ್ಯಕ್ಷ ಜೆ.ಎಸ್.ಶಿಂಧೆ, ಕೆಸಿಡಿಎ ಅಧ್ಯಕ್ಷ ರೆಡ್ಡಿ, ಕಾರ್ಯದರ್ಶಿ ಜೀವನ್, ಮೈಸೂರು ಸಂಘದ ಪ್ರತಿನಿಧಿಗಳಾದ ಸಿ.ವಿ.ಜೈನ್, ಅಮಾನುಲ್ಲಾಖಾನ್, ಜಾವೀದ್ ಇನ್ನಿತರ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಮುಡಾದಲ್ಲಿ ಕೋಟ್ಯಾಂತರ ರೂ. ಭೂ ಹಗರಣ ಆರೋಪ

ಕರ್ನಾಟಕ ಸೇನಾ ಪಡೆಯಿಂದ ಮುಡಾ ಎದುರು ಪ್ರತಿಭಟನೆ

ಮೈಸೂರು, ಜೂ.30(ಜಿಎ)–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದಲ್ಲಿ ಕೋಟ್ಯಂತರ ರೂ. ಹಗರಣ ನಡೆದಿದ್ದು, ಕಠಿಣ ಕ್ರಮ ಜರುಗಿಸುವಂತೆ ಒತ್ತಾಯಿಸಿ ಜೆಎಲ್‌ಬಿ ರಸ್ತೆಯಲ್ಲಿರುವ ಮುಡಾ ಕಚೇರಿ ಮುಂಭಾಗ ಕರ್ನಾಟಕ ಸೇನಾ ಪಡೆ ವತಿಯಿಂದ ಭಾನುವಾರ ಪ್ರತಿಭಟನೆ ನಡೆಸಲಾಯಿತು.

ಈ ವೇಳೆ ಪ್ರತಿಭಟನಾಕಾರರು ಮಾತ ನಾಡಿ, ಮುಡಾದಿಂದ ಸುಮಾರು ನಾಲ್ಕರಿಂದ ಐದು ಸಾವಿರಕ್ಕೂ ಹೆಚ್ಚು ನಿವೇಶನ ಗಳನ್ನು ಅಕ್ರಮವಾಗಿ ಹಂಚಿ, ಮೈಸೂರಿನ ಇತಿಹಾಸದಲ್ಲಿಯೇ ಭಾರೀ ಪ್ರಮಾಣದ ಭೂ ದರೋಡೆ ಮಾಡಿರುವುದು ಬೆಳಕಿಗೆ ಬಂದಿದೆ. ಇದು ಅತ್ಯಂತ ಖಂಡನೀಯ. ಬದಲಿ ನಿವೇಶನ ನೀಡದಂತೆ ಎರಡು ವರ್ಷದ ಹಿಂದೆಯೇ ಸರ್ಕಾರ ಆದೇಶ ಮಾಡಿದ್ದು, ಅತಿ ಅಗತ್ಯ ಬಿದ್ದರೆ ಮಾತ್ರ ಸರ್ಕಾರದ ಅನುಮತಿ ಪಡೆದು ಹಂಚಿಕೆಗೆ ತಾಕೀತು ಮಾಡಲಾಗಿತ್ತು. ಆದರೆ, ಸರ್ಕಾರದ ನಿಯಮಗಳನ್ನು ಉಲ್ಲಂಘಿಸಿ ನಿಯಮ ಬಾಹಿರವಾಗಿ ಬದಲಿ ನಿವೇಶನ ಹಂಚಿಕೆ ಮಾಡಿ ಸುಮಾರು 3 ಸಾವಿರ ಕೋಟಿ ಹಗರಣ ಮಾಡುವ ಮೂಲಕ



ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದಲ್ಲಿ ಕೋಟ್ಯಂತರ ರೂ. ಹಗರಣ ನಡೆದಿದ್ದು, ಕಠಿಣ ಕ್ರಮ ಜರುಗಿಸುವಂತೆ ಒತ್ತಾಯಿಸಿ ಜೆಎಲ್‌ಬಿ ರಸ್ತೆಯಲ್ಲಿರುವ ಮುಡಾ ಕಚೇರಿ ಮುಂಭಾಗ ಕರ್ನಾಟಕ ಸೇನಾ ಪಡೆ ವತಿಯಿಂದ ಭಾನುವಾರ ಪ್ರತಿಭಟನೆ ನಡೆಸಲಾಯಿತು.

ಸರ್ಕಾರಕ್ಕೆ ಸಾವಿರಾರು ಕೋಟಿ ನಷ್ಟ ಮಾಡಿದ್ದಾರೆ ಎಂದು ಕಿಡಿಕಾರಿದರು.

ಮುಡಾ ಆಯುಕ್ತ ದಿನೇಶ್ ಕುಮಾರ್ ಮುಡಾ ಕಚೇರಿಯಲ್ಲಿ ಬಹಳಷ್ಟು ಫೈಲ್‌ಗಳೇ ಸಿಗದಂತೆ ಮಾಡಿ. ಊರಾಚೆಯ ಹಳ್ಳಿ ಸೈಟ್ ಗಳಿಗೂ ಮೈಸೂರಿನ ವಿಜಯನಗರ ಲೇಔಟ್‌ನಲ್ಲಿ ಬದಲಿ ನಿವೇಶನಗಳನ್ನು ನೀಡಿದ್ದಾರೆ. ಇದರ ಜೊತೆಗೆ ಅವರ ಮನೆಯಲ್ಲಿಯೇ ಸುಮಾರು 146 ಸೈಟ್ ಫೈಲ್‌ಗಳು ಸಿಕ್ಕಿರುವುದು ಹಲವಾರು ಅನುಮಾನಗಳಿಗೆ ಎಡೆ ಮಾಡಿ ಕೊಟ್ಟಿದೆ. ಮುಖ್ಯಮಂತ್ರಿಗಳ ತವರಿನಲ್ಲಿಯೇ ಬಹುಕೋಟಿ ದೊಡ್ಡ ಹಗರಣವಾಗಿದ್ದು, ಇತ್ತೀಚೆಗಷ್ಟೇ ವಾಲ್ಮೀಕಿ ನಿಗಮದ 187 ಕೋಟಿ ಹಗರಣದಂತೆ ಇದು ಕೂಡ ಕಾಂಗ್ರೆಸ್ ಸರ್ಕಾರದ ಪ್ರಾಯೋಜಿತ ಹಗರಣವಾಗಿರಬಹುದು ಎಂಬ ಶಂಕೆ ಮೈಸೂರಿನ ಜನತೆಯಲ್ಲಿದೆ. ಇದು ಹಿಂದೆಂದೂ ಕೇಳರಿಯದಂತಹ ರಾಜ್ಯದ ಅತಿ ದೊಡ್ಡ ಹಗರಣಗಳಲ್ಲೊಂದಾಗಿದ್ದು, ಇದರ ಹಿಂದೆ ರಾಜ್ಯ ಸರ್ಕಾರದ ಅನೇಕ ಕಾಣದ ಕೈಗಳು ಇವೆ ಎಂದು ಕಾಣಿಸುತ್ತಿದೆ ಎಂದು ಆರೋಪಿಸಿದರು.

ಸರ್ಕಾರ ಈ ಕೂಡಲೇ ಕಟ್ಟುನಿಟ್ಟಾಗಿ ಪ್ರಾಮಾಣಿಕವಾಗಿ ತನಿಖೆ ನಡೆಸಿ, ತಪ್ಪಿತ ಸ್ಥರನ್ನು ಜೈಲಿಗಟ್ಟಿ ಅಕ್ರಮ ಮಾರಾಟ ಮಾಡಿ ಬದಲಿ ನಿವೇಶನ ನೀಡಿರುವ ನಿವೇ ಶನಗಳನ್ನು ಹಿಂಪಡೆಯುವ ಮೂಲಕ ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ರವರು ಸ್ಥಾಪಿಸಿದ ಮುಡಾವನ್ನು ಭೂಗಳ್ಳ ರಿಂದ ರಕ್ಷಿಸಬೇಕೆಂದು ಒತ್ತಾಯಿಸಿದರು.

ಸೇನೆಯ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್ ಗೌಡ, ಎಂ.ಬಿ.ಪ್ರಭುಶಂಕರ್, ಕೃಷ್ಣಪ್ಪ ಕುಮಾರ್ ಗೌಡ, ಶಿವಲಿಂಗಯ್ಯ, ಅಂಬಾ ಅರಸ್, ನೇಹಾ, ಮಂಜುಳಾ, ಭಾಗ್ಯಮ್ಮ, ನಾರಾಯಣ ಗೌಡ ಪರಿಸರ ಚಂದ್ರು ವಿಜಯೇಂದ್ರ ಆನಂದ್, ರಾಮಕೃಷ್ಣ, ರವಿ ಒಲಂಪಿಯ, ರಾಧಾಕೃಷ್ಣ, ಅಕ್ಬರ್, ರವೀಶ್, ಸ್ವಾಮಿ ಗೌಡ, ಆರ್. ಮಹದೇವ್, ದರ್ಶನ್ ಗೌಡ ಪ್ರದೀಪ್, ದಿನೇಶ್, ರಘು ಅರಸ್, ವಿಷ್ಣು, ಬಸವರಾಜು, ಹನು ಮಂತಯ್ಯ, ರಮೇಶ್, ಗಣೇಶ್, ಶಿವನಾಯಕ್, ಕುಮಾರ್ ಮತ್ತಿತರರು ಪಾಲ್ಗೊಂಡಿದರು.

ಸದ್ಯದಲ್ಲೇ ಫ್ಲವರ್ ಬೊಕೆ ಮಾರಾಟಗಾರರಿಗೆ ಶಾಶ್ವತ ಸೂರು



ಮೈಸೂರು, ಜೂ.30(ಎಂಕೆ)– ಇಲ್ಲಿಂದಲ್ಲಿಗೆ... ಅಲ್ಲಿಂದಿಲ್ಲಿಗೆ ಎತ್ತಂಗಡಿ ಮಾಡಿಸುತ್ತಿದ್ದ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಎದುರಿನ ಫ್ಲವರ್ ಬೊಕೆ ಅಲಂಕಾರಿಕಾ ಹೂ ಮಾರಾಟಗಾರರಿಗೆ ಶಾಶ್ವತ ಸೂರು ಕಲ್ಪಿಸುವ ಪ್ರಯತ್ನ ನಡೆದಿದೆ.

ಮೈಸೂರು ನಗರಪಾಲಿಕೆ ವಾರ್ಡ್ ನಂ.23ರ ವ್ಯಾಪ್ತಿಯ ವಾಲ್ಮೀಕಿ ರಸ್ತೆಯ ಲ್ಲಿರುವ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಎದುರು ಸ್ಟ್ರೀಟ್ ವೆಂಡರ್ ಜೋನ್ ನಿರ್ಮಿಸ ಲಾಗಿದ್ದು, ಹಂಚಿಕೆ ಮಾಡುವುದು ಬಾಕಿ ಉಳಿದಿದೆ. ಬಲ್ಲಾಳ ವೃತ್ತದ ಸಮೀಪ, ರಾಜೀವ್‌ನಗರದಲ್ಲಿ ಮಾಡಿರುವಂತೆಯೇ ವಾಲ್ಮೀಕಿ ರಸ್ತೆಯಲ್ಲೂ ಸ್ಟ್ರೀಟ್ ವೆಂಡರ್ ಜೋನ್ ನಿರ್ಮಿಸಿದ್ದು, ಅಗತ್ಯ ಮೂಲ ಸೌಕರ್ಯ ವ್ಯವಸ್ಥೆ ಮಾಡಲಾಗಿದೆ.

ಇದೇ ರಸ್ತೆಯಲ್ಲಿ ಹಲವು ವರ್ಷ ಗಳಿಂದ ಅಲಂಕಾರಿಕ ಫ್ಲವರ್ ಬೊಕೆ ಮಾರಾಟ ಮಾಡುತ್ತಿರುವ ವ್ಯಾಪಾರ ಸ್ಥರೂ ಸೇರಿ ಇತರೆ ರಸ್ತೆ ಬದಿ ವ್ಯಾಪಾರ ಸ್ಥರಿಗೆ ಈ ಸ್ಟ್ರೀಟ್ ವೆಂಡರ್ ಜೋನ್‌ನಲ್ಲಿ ಅವಕಾಶ ಮಾಡಿಕೊಡುವ ಸಾಧ್ಯತೆ ಇದೆ. ಅರ್ಜಿ ಸಲ್ಲಿಸಿ ಆಯ್ಕೆಯಾಗುವ ಫಲಾನುಭವಿಗಳ ಆಧಾರದ ಮೇಲೆ ಹಂಚಿಕೆ ಮಾಡಲಾಗುವುದು ಎಂದು ಪಾಲಿಕೆ ವಲಯ ಕಚೇರಿ–4ರ ಇಂಜಿನಿಯರೊಬ್ಬರು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಇನ್ನೂ ಹಂಚಿಕೆಯಾಗಿಲ್ಲ: ನಿರ್ಮಾಣ ಗೊಂಡು ಹಲವು ದಿನಗಳಾಗಿದ್ದು, ಇನ್ನೂ ಹಂಚಿಕೆಯಾಗಿಲ್ಲ. ಇಲ್ಲಿಂದ ಬೇರೆ ಕಡೆಗೆ ಕಳುಹಿಸಲು ಸಾಕಷ್ಟು ಪ್ರಯತ್ನಗಳನ್ನು ಮಾಡಲಾಯಿತು. ಮೊದಲು ಕಾಳಿದಾಸ ರಸ್ತೆ ಹಿಂಬದಿಯ ಚಿಕ್ಕ ಮಾರುಕಟ್ಟೆಗೆ ಕಳುಹಿಸಿದರು. ಅಲ್ಲಿ ವ್ಯಾಪಾರ ನಡೆಯದ ಕಾರಣ ಕುಕ್ಕರ ಹಳ್ಳಿಯ ರೈಲ್ವೆ ಗೇಟ್ ಬಳಿ ಹಾಕಲಾ ಯಿತು. ಅಲ್ಲಿನ ಟಾಂಗಾ ಗಾಡಿಯವರು ಗಲಾಟೆ ಮಾಡಿದರು. ನಂತರ ಅಲ್ಲಿಂದ ಯಾದವಗಿರಿ ಚೆಲುವಾಂಬ ಪಾರ್ಕ್‌ಗೆ ಬರಲಾಯಿತು. ಆದರೆ ಅಲ್ಲಿಯೂ ವ್ಯಾಪಾರ ನಡೆಯಲಿಲ್ಲ. ಕಡೇ ಅದೇ ಸ್ಥಳದಲ್ಲಿ ಮಳಿಗೆ ಹಾಕಿಕೊಂಡೆವು. ಕಡೆಗೆ ಇಲ್ಲಿಯೇ ಶಾಶ್ವತ ಸೂರಿ ನೀಡಲು ಸ್ಟ್ರೀಟ್ ವೆಂಡರ್ ಜೋನ್ ಮಾದರಿಯಲ್ಲಿ ಮಳಿಗೆಗಳನ್ನು ನಿರ್ಮಿಸ ಲಾಗಿದೆ. ಆದರೆ ಇನ್ನೂ ಹಂಚಿಕೆ ಮಾಡಿಲ್ಲ ಎಂದು ವ್ಯಾಪಾರಿಯೊಬ್ಬರು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಬಿಲ್ಲಾ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಮಹಾರಾಜ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕಲ್ಕಿ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಜಡ್ಜ್‌ಮೆಂಟ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಲ್ಕಿ (ಕ)	4 ಪ್ರದರ್ಶನಗಳು
ರಾಜಕಮಲ್	
ಗರುಡನ್ (ತ)	4 ಪ್ರದರ್ಶನಗಳು
ಸಂಗಂ	
ಕೋಟಿ (ಕ)	4 ಪ್ರದರ್ಶನಗಳು
ಲಿಡೋ	
ಪೊಕ್ರಿ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಮುಂಜ್ಯಾ (ಹಿಂ)	4 ಪ್ರದರ್ಶನಗಳು
ಪ್ರಭಾ	
ಶತಭಿಷ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕಲ್ಕಿ 2898 ಎಡಿ(3ಡಿ) (ತೆ): ಬೆ.11.45ಕ್ಕೆ, ಮ.3.15ಕ್ಕೆ, ಕಲ್ಕಿ 2898 ಎಡಿ(3ಡಿ) (ಹಿಂ): ಸಂ.6.45ಕ್ಕೆ, ರಾ.10.15ಕ್ಕೆ.
ಸ್ಕ್ರೀನ್ 2	ಲವ್ ಲಿ (ಕ): ಬೆ.10.30ಕ್ಕೆ, ಮುಂಜ್ಯಾ (ಹಿಂ): ಮ.1.35ಕ್ಕೆ, ಕಲ್ಕಿ 2898 ಎಡಿ(3ಡಿ) (ತೆ): ಸಂ.4ಕ್ಕೆ, ರಾ.9.45ಕ್ಕೆ, ಪ್ಯಾರಡೈಸ್ (ಮ): ರಾ.7.30ಕ್ಕೆ.
ಸ್ಕ್ರೀನ್ 3	ಎ ಕ್ವೈಟ್ ಪ್ಲೇಸ್ ಡೇ ಒನ್ (ಇಂ): ಬೆ.10.50ಕ್ಕೆ, ರಾ.10.10ಕ್ಕೆ, ಕಲ್ಕಿ 2898 ಎಡಿ (ಕ): ಮ.1ಕ್ಕೆ, ಮಹಾರಾಜ (ತ): ಸಂ.4.25ಕ್ಕೆ, ಕೋಟಿ (ಕ): ರಾ.7.10ಕ್ಕೆ.
ಸ್ಕ್ರೀನ್ 4	ಕಲ್ಕಿ 2898 ಎಡಿ(3ಡಿ) (ತೆ): ಬೆ.9.45ಕ್ಕೆ, ಮ.1.15ಕ್ಕೆ, ಸಂ.6.40ಕ್ಕೆ, ರಾ.10.10ಕ್ಕೆ, ಇನ್‌ಸೈಡ್ ಔಟ್ (3ಡಿ)(ಇಂ): ಸಂ.4.40ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಇನ್‌ಸೈಡ್ ಔಟ್ (3ಡಿ)(ಹಿಂ): ಬೆ.11ಕ್ಕೆ, ಇನ್‌ಸೈಡ್ ಔಟ್ (3ಡಿ)(ಇಂ): ಮ.1.20ಕ್ಕೆ, ಸಂ.4.20ಕ್ಕೆ, ಸಂ.6.40ಕ್ಕೆ, ಮುಂಜ್ಯಾ (ಹಿಂ): ರಾ.9ಕ್ಕೆ.
ಸ್ಕ್ರೀನ್ 2	ಮುಂಜ್ಯಾ (ಹಿಂ): ಬೆ.10ಕ್ಕೆ, ರಾ.7.35ಕ್ಕೆ, ರಾಕ್‌ಸ್ಟಾರ್ (ಹಿಂ): ಮ.12.45ಕ್ಕೆ, ಕೋಟಿ (ಕ): ಸಂ.4.05ಕ್ಕೆ, ರಾ.10.20ಕ್ಕೆ,
ಸ್ಕ್ರೀನ್ 3	ಚಂದು ಚಾಂಪಿಯನ್ (ಹಿಂ): ಬೆ.9.50ಕ್ಕೆ, ಮ.1ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 4	ಕೋಟಿ (ಕ): ಬೆ.10.05ಕ್ಕೆ, ಮಹಾರಾಜ (ತ): ಮ.1.35ಕ್ಕೆ, ರಾ.7.05ಕ್ಕೆ, ಶಿವಮ್ಮ ಹರೆಹಂಚಿನಾಳ (ಕ): ಸಂ.4.40ಕ್ಕೆ, ಜಿಆರ್‌ಆರ್‌ಆರ್ (ಮ): ರಾ.10.10ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಲವ್ ಲಿ (ಕ): ಬೆ.10.45ಕ್ಕೆ, ಮ.3.35ಕ್ಕೆ, ಕರ್ಮದೊಳಗೆ (ಕ): ಮ.1.40ಕ್ಕೆ, ಕೋಟಿ (ಕ): ಸಂ.6.25ಕ್ಕೆ, ಮಹಾರಾಜ (ತ): ರಾ.9.30ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ(3ಡಿ) (ತೆ): ಬೆ.10.30ಕ್ಕೆ, ಮ.2.30ಕ್ಕೆ, ಸಂ.6ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ಕಲ್ಕಿ 2898 ಎಡಿ (ಕ): ಮ.1ಕ್ಕೆ, ಸಂ.4.25ಕ್ಕೆ, ರಾ.7.50ಕ್ಕೆ.
ಸ್ಕ್ರೀನ್ 4	ಲವ್ ಲಿ (ಕ): ಮ.1ಕ್ಕೆ, ಕಲ್ಕಿ 2898 ಎಡಿ(3ಡಿ) (ತೆ): ಸಂ.4ಕ್ಕೆ, ರಾ.7.25ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಕೆಆರ್‌ಎಸ್ ನೀರಿನ ಮಟ್ಟ




ಗರಿಷ್ಠ ಮಟ್ಟ	124.80 ಅಡಿ
ಭಾನುವಾರ	94.40 ಅಡಿ
ಒಳಹರಿವು	12867 ಕ್ಯೂಸೆಕ್
ಹೊರಹರಿವು	507 ಕ್ಯೂಸೆಕ್

ಕಬಿನಿ ನೀರಿನ ಮಟ್ಟ



ಗರಿಷ್ಠ ಮಟ್ಟ	2284 ಅಡಿ
ಭಾನುವಾರ	2277 ಅಡಿ
ಒಳಹರಿವು	4500 ಕ್ಯೂಸೆಕ್
ಹೊರಹರಿವು	1000 ಕ್ಯೂಸೆಕ್

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2859 ಅಡಿ
ಭಾನುವಾರ	2837.22 ಅಡಿ
ಒಳಹರಿವು	1216 ಕ್ಯೂಸೆಕ್
ಹೊರಹರಿವು	200 ಕ್ಯೂಸೆಕ್



ಹಸಿರು ನಮ್ಮ ಉಸಿರು

ಮುಖ್ಯಮಂತ್ರಿ ಸ್ಥಾನದ ಅಧಿಕಾರ ಹಸ್ತಾಂತರ ವಿಚಾರ

ಅಧಿಕಾರ ಉಳಿಸಿಕೊಳ್ಳುವ ತಂತ್ರಗಾರಿಕೆ ಸಿದ್ದರಾಮಯ್ಯಗೆ ಗೊತ್ತಿದೆ

ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರಾದ ಶಾಸಕ ಜಿ.ಟಿ.ದೇವೇಗೌಡ ಅಭಿಪ್ರಾಯ

ಮೈಸೂರು, ಜೂ.30(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಅಧಿಕಾರವನ್ನು ಹೇಗೆ ಉಳಿಸಿಕೊಳ್ಳಬೇಕೆಂಬ ತಂತ್ರಗಾರಿಕೆ ಗೊತ್ತಿದೆ ಎಂದು ಶಾಸಕರೂ ಆದ ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ.ದೇವೇಗೌಡರು ಹೇಳಿದ್ದಾರೆ.

ಮೈಸೂರಿನಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಶಾಸಕರಾಗಿ, ಮಂತ್ರಿಯಾಗಿ, ಉಪಮುಖ್ಯಮಂತ್ರಿಯಾಗಿ, ಮುಖ್ಯಮಂತ್ರಿಯಾಗಿ ಕೆಲಸ ಮಾಡಿರುವ ಸಿದ್ದರಾಮಯ್ಯ ಸುಧೀರ್ಘ ಅಧಿಕಾರ ಅನುಭವಿಸಿದ್ದಾರೆ. ಇದರಿಂದ ಯಾವ ರೀತಿ ಅಧಿಕಾರ ಉಳಿಸಿಕೊಳ್ಳಬೇಕೆಂಬ ತಂತ್ರಗಾರಿಕೆ ಅವರಿಗೆ ಗೊತ್ತಿದೆ. ಇದರಲ್ಲಿ ಹಲವು ಬಾರಿ ಯಶಸ್ವಿ ಕೂಡ ಆಗಿದ್ದಾರೆ ಎಂದು ಹೇಳಿದರು.

ಈ ಮೂಲಕ ಡಿ.ಕೆ.ಶಿವಕುಮಾರ್‌ಗೆ ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನ ಬಿಟ್ಟು ಕೊಡುವುದಿಲ್ಲ ಎಂದು ಪರೋಕ್ಷವಾಗಿ ಹೇಳಿದರು. ಕಾಂಗ್ರೆಸ್ ಹೈಕಮಾಂಡ್ ಮನಸ್ಸು ಮಾಡಿದರೆ ಮಾತ್ರ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗುತ್ತಾರೆ. ಈ ಹಿಂದೆ ಕಾಂಗ್ರೆಸ್ ಹೈಕಮಾಂಡ್ ದುರ್ಬಲವಾಗಿತ್ತು. ಸಿದ್ದರಾಮಯ್ಯ ಶಕ್ತಿಯುತರಾಗಿದ್ದರು. ಆದರೆ ಈಗ ಕಾಂಗ್ರೆಸ್ ಹೈಕಮಾಂಡ್ ಶಕ್ತಿಯುತವಾಗಿದೆ. ಇದರಿಂದ ಕಾಂಗ್ರೆಸ್ ಹೈಕಮಾಂಡ್ ಮನಸ್ಸು ಮಾಡಿದರೆ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗಬಹುದು ಎಂದು ಶಾಸಕ ಜಿ.ಟಿ. ದೇವೇಗೌಡರು ಅಭಿಪ್ರಾಯಪಟ್ಟರು.



ಶಾಸಕರೂ ಆದ ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ.ದೇವೇಗೌಡರು ಪತ್ರಕರ್ತರ ಜೊತೆ ಮಾತನಾಡಿದರು.

ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗಬೇಕೆಂದು ಸದ್ಯ ಕಾಂಗ್ರೆಸ್ ಹೈಕಮಾಂಡ್ ಹೇಳಿಲ್ಲ, ಶಾಸಕರು ಕೂಡ ಹೇಳಿಲ್ಲ. ಒಕ್ಕಲಿಗ ಮಠದ ಶ್ರೀ ಚಂದ್ರಶೇಖರ ನಾಥ ಸ್ವಾಮೀಜಿ ಹೇಳಿದ್ದಾರೆ. ಡಿ.ಕೆ.ಶಿವಕುಮಾರ್ ಮೇಲಿನ ಅಭಿಮಾನದಿಂದ ಸ್ವಾಮೀಜಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ಎಂದು ಹೇಳಿದರು.

ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಬೇಕೆಂದು ಕುರುಬ ಸಮುದಾಯದ ಸ್ವಾಮೀಜಿಗಳು ಘರ್ಜನೆ ಮಾಡಲಿಲ್ಲವೆ? ಹಾಗೆಯೇ ಒಕ್ಕಲಿಗ ಸ್ವಾಮೀಜಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅಧಿಕಾರ ಹಂಚಿಕೆ ಬಗ್ಗೆ ಯಾರೇ ಅಭಿಪ್ರಾಯ ವ್ಯಕ್ತಪಡಿಸಿದರೆ, ಅದೇನು ದೊಡ್ಡ ಅಪರಾಧವಲ್ಲ ಎಂದು ಹೇಳಿದರು.

ರಾಜ್ಯ ಸರ್ಕಾರ ಪತನವಾಗುತ್ತದೆ. ನಾವು ಬೀಳಿಸುತ್ತೇವೆ ಎಂದು ನಾನು ಹೇಳುವುದಿಲ್ಲ. ಸಂಪೂರ್ಣ ಬಹುಮತ ಇರುವ ಸರ್ಕಾರ ಬೀಳಿಸುವ ಪ್ರಶ್ನೆಯೇ ಬರುವುದಿಲ್ಲ. ಅವರ ಪಕ್ಷದಲ್ಲೇ ಭಿನ್ನಾಭಿಪ್ರಾಯ ಸ್ಫೋಟವಾದರೆ ಸರ್ಕಾರ ಬೀಳಬಹುದಷ್ಟೆ ಎಂದು ಶಾಸಕ ಜಿ.ಟಿ. ದೇವೇಗೌಡರು ತಿಳಿಸಿದರು.

ವರದಿ ಬಂದ ನಂತರ ಸೂರಜ್ ವಿರುದ್ಧ ಕ್ರಮ

ಮೈಸೂರು: ಅಸಹಜ ಲೈಂಗಿಕ ಕಿರುಕುಳ ಆರೋಪ ಎದುರಿಸುತ್ತಿರುವ ವಿಧಾನ ಪರಿಷತ್ ಸದಸ್ಯ ಸೂರಜ್ ರೇವಣ್ಣ ವಿರುದ್ಧ ತನಿಖೆ ನಡೆಯುತ್ತಿದ್ದು, ವರದಿ ಬಂದ ತಕ್ಷಣ ಕ್ರಮ ಕೈಗೊಳ್ಳಲಾಗುವುದು ಎಂದು ಶಾಸಕರೂ ಆದ ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ.ದೇವೇಗೌಡರು ತಿಳಿಸಿದರು.

ಸೂರಜ್ ರೇವಣ್ಣ ಬಗ್ಗೆ ತನಿಖೆ ನಡೆಯುತ್ತಿದೆ. ವರದಿ ಬರುವ ತನಕ ಕಾಯೋಣ, ತರುವಾಯ ಈ ಬಗ್ಗೆ ನಿರ್ಧಾರ ಮಾಡುತ್ತೇವೆ ಎಂದರು.

ವಾಲ್ಮೀಕಿ ನಿಗಮದ ಭ್ರಷ್ಟಾಚಾರ ಹಗರಣ ಸಂಬಂಧ ಹಣಕಾಸು ಖಾತೆ ಹೊಂದಿರುವ ಸಿದ್ದರಾಮಯ್ಯ ಅವರೇ ಪ್ರಕರಣದ ನೇರ ಜವಾಬ್ದಾರಿ ಹೊರಬೇಕು ಎಂದರು. ಹಣಕಾಸು ಇಲಾಖೆಯ ಅನುಮತಿ ಇಲ್ಲದೆ, ಒಂದು ಅಕೌಂಟ್‌ನಿಂದ ಮತ್ತೊಂದು ಅಕೌಂಟ್‌ಗೆ ಹಣ ವರ್ಗಾವಣೆ ಸಾಧ್ಯವಿಲ್ಲ. ಆದ ಕಾರಣ ಪ್ರಕರಣದಲ್ಲಿ ಸಿದ್ದರಾಮಯ್ಯ ಅವರ ಜವಾಬ್ದಾರಿ ಇದೆ ಎಂದರು.

ಪರಿಶಿಷ್ಟ ಪಂಗಡದ ನೂರಾರು ಕೋಟಿ ಹಣ ಹಗಲು ದರೋಡೆಯಾಗಿದೆ. ಇದು ಎಲ್ಲರೂ ತಲೆ ತಗ್ಗಿಸುವ ವಿಚಾರವಾಗಿದ್ದು, ಸಿದ್ದರಾಮಯ್ಯ ಇದು ನನ್ನ ಗಮನಕ್ಕೆ ಬಂದಿಲ್ಲ ಎಂದು ಹೇಳುತ್ತಾರೆ. ಈ ಪ್ರಕರಣದ ಸತ್ಯಾಸತತೆ ಹೊರಗೆ ಬರಬೇಕಾದರೆ ಸಿಬಿಐ ತನಿಖೆ ನಡೆಸಬೇಕು ಎಂದು ಆಗ್ರಹಿಸಿದರು.

ರಾಜ್ಯದಲ್ಲಿ ಕಳೆದ 13 ತಿಂಗಳಲ್ಲಿ ಅಭಿವೃದ್ಧಿ ಮರಿಚಿಕೆಯಾಗಿದೆ. ನನ್ನ ಕ್ಷೇತ್ರಕ್ಕೆ ನಯಾ ಪೈಸೆ ಅನುದಾನ ಬಂದಿಲ್ಲ. ಇದರಿಂದ ತೀರ ರಸ್ತೆಗಳ ಗುಂಡಿ ಕೂಡ ಮುಚ್ಚಲು ಸಾಧ್ಯವಾಗುತ್ತಿಲ್ಲ. ಈ ಹಿಂದೆ ಜಾರಿಯಲ್ಲಿದ್ದ ಅಮೃತ ಯೋಜನೆಯ ಕೆಲಸಗಳು ಮಾತ್ರ ನಡೆಯುತ್ತಿದೆ. ವಿವಿಧ ಯೋಜನೆಯಲ್ಲಿ ಒಂದು ಕ್ಷೇತ್ರಕ್ಕೆ 20 ಫಲಾನುಭವಿಗಳಿಗೆ ಕಾರು, ಸ್ಕೂಟರ್ ನೀಡುತ್ತಿದ್ದರು. ಆದರೆ ಈಗ ಒಂದು ಕಾರು, ಸ್ಕೂಟರ್ ಮಂಜೂರು ಮಾಡಿದ್ದಾರೆ. ಎರಡು ಲಕ್ಷ ಜನಸಂಖ್ಯೆ ಹೊಂದಿರುವ ಕ್ಷೇತ್ರದಲ್ಲಿ ಯಾರಿಗೆ ತಾನೆ ಇದನ್ನು ಕೊಡಲು ಸಾಧ್ಯ ಎಂದು ಪ್ರಶ್ನಿಸಿದರು.

ಕಾಂಗ್ರೆಸ್ ಸರ್ಕಾರ ಬಂದ ನಂತರ ಅಭಿವೃದ್ಧಿ ಕೆಲಸಗಳು ಆಗುವುದಿಲ್ಲ. ರಾಜ್ಯದ ಜನರಿಗೆ ಈಗ ಇದರ ವಾಸ್ತವತೆ ಅರಿವಾಗುತ್ತಿದೆ ಎಂದು ಜಿ.ಟಿ.ದೇವೇಗೌಡರು ಹೇಳಿದರು.

ಹೆಚ್.ವಿ.ರಾಜೀವ್ ಸ್ನೇಹ ಬಳಗದಿಂದ ಔಷಧಿ ಗಿಡ ವಿತರಣೆ



ಮೈಸೂರು, ಜೂ.30 (ಎಸ್‌ಪಿಎನ್)– ಹೆಚ್.ವಿ.ರಾಜೀವ್ ಸ್ನೇಹ ಬಳಗದಿಂದ ಸಾರ್ವಜನಿಕರಿಗೆ ಉಚಿತವಾಗಿ ಸಸಿಗಳನ್ನು ವಿತರಿಸುತ್ತಿರುವುದು ಸಂತೋಷದ ಸಂಗತಿ. ಇದು ಅವರಲ್ಲಿನ ಪರಿಸರ ಪ್ರಜ್ಞೆ ಬಿಂಬಿಸುತ್ತದೆ ಎಂದು ಮೇಲುಕೋಟೆಯ ಶ್ರೀ ಇಳೈ ಆಳ್ವಾರ್ ಸ್ವಾಮೀಜಿ ಅಭಿಪ್ರಾಯಪಟ್ಟರು.

ಮೈಸೂರು ಕುವೆಂಪುನಗರದ ಸುಮ ಸೋಪಾನ ಉದ್ಯಾನವನದಲ್ಲಿ ಹೆಚ್.ವಿ. ರಾಜೀವ್ ಸ್ನೇಹ ಬಳಗದ ವತಿಯಿಂ ಆಯೋಜಿಸಿದ್ದ ಉಚಿತ ಔಷಧಿ ಗಿಡಗಳ ವಿತರಣೆ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಗೆ ಸಸಿಗಳನ್ನು ವಿತರಿಸಿ ಮಾತನಾಡಿದರು.

ರಕ್ತದಾನದಂತೆ ವೃಕ್ಷದಾನ ಸಾರ್ವಜನಿಕ ವಲಯದಲ್ಲಿ ಶ್ರೇಷ್ಠದಾನವಾಗುತ್ತದೆ. ರಾಜೀವ್ ಅವರು, ಈ ಕಾರ್ಯಕ್ರಮದಲ್ಲಿ ಪರಿಣಾಮಕಾರಿಯಾಗಿ ತೊಡಗಿಸಿಕೊಂಡಿದ್ದು, ಪ್ರಕೃತಿಯ ಅಭಿವೃದ್ಧಿಯಂತೆ ಅವರ ಸಾಮಾಜಿಕ ಕಳಕಳಿಯು ಮತ್ತಷ್ಟು ಹೆಚ್ಚಲಿ ಎಂದು ಆಶಿಸಿದರು.

ಜಯದೇವ ಹೃದ್ರೋಗ ಸಂಸ್ಥೆಯ ವೈದ್ಯ ಡಾ.ಸಂತೋಷ್ ಮಾತನಾಡಿ, ಕಲಿಯುಗದಲ್ಲಿ ಸ್ವಂತ ಆಲೋಚನೆಯಲ್ಲಿಯೇ ಹೆಚ್ಚಿನ ಜನರು ಮಗ್ನರಾಗಿದ್ದಾರೆ. ಆದರೆ, ಪರೋಪಕಾರದಿಂದ ಮಾತ್ರ ಇಲ್ಲಿ ಲಾಭವಿದೆ ಎಂಬುದನ್ನು ಎಲ್ಲರೂ ಅರಿತುಕೊಳ್ಳಬೇಕು. ಪರಿಸರವನ್ನು ನಾವು ಕಾಪಾಡಿದರೆ, ನಮ್ಮ ಆರೋಗ್ಯವನ್ನು ಪರಿಸರ ಕಾಪಾಡುತ್ತದೆ ಎಂಬ ಅರಿವು ಎಲ್ಲರಲ್ಲಿ ಇರಬೇಕು ಎಂದರು.

ಹಿರಿಯ ಪತ್ರಕರ್ತ ಹಾಗೂ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ಎಸ್.ಟಿ.ರವಿಕುಮಾರ್ ಮಾತನಾಡಿ, ಜನರಿಗೆ ಎಲ್ಲ ಇದ್ದು, ಆರೋಗ್ಯವಿಲ್ಲದಿದ್ದರೆ ಏನು ಪ್ರಯೋಜನ. ಈ ವೇಳೆ ಬೇರೆಲ್ಲ ಸಂಪತ್ತು ಆ ಕ್ಷಣಕ್ಕೆ ನಶ್ವರವೆನಿಸುತ್ತದೆ. ಹಾಗಾಗಿ ಪ್ರಕೃತಿಯಿಂದ ನಮಗೆ ಆರೋಗ್ಯ ಲಭಿಸುತ್ತದೆ. ಅಂತಹ ಪ್ರಕೃತಿಯನ್ನು ರಕ್ಷಿಸುವಲ್ಲಿ ನಾವು–ನೀವು ಮುಂದಾಗಬೇಕು ಎಂದರು.

ಈ ವೇಳೆ ಹಿರಿಯ ಪತ್ರಕರ್ತ ಸುಬ್ರಹ್ಮಣ್ಯ, ಆರ್.ಕುಮಾರ್ ಸೇರಿದಂತೆ ಇತರರಿದ್ದರು. ಕಾರ್ಯಕ್ರಮದ ನಂತರ ಸಾವಿರಕ್ಕೂ ಅಧಿಕ ಸಸಿಗಳನ್ನು ವಿತರಿಸಲಾಯಿತು.

ತಂಬಾಕು ವಿರೋಧಿ ಜಾಗೃತಿಗಾಗಿ ಮೈಸೂರಲ್ಲಿ ಸೈಕ್ಲೋಥಾನ್

ಮೈಸೂರು, ಜೂ.30(ಜಿಎ)–ಯುವಕರು ಆರೋಗ್ಯವಂತರಾಗಿಲ್ಲದಿದ್ದರೆ ಸಮಾಜವು ಆರೋಗ್ಯವಾಗಿರುವುದನ್ನು ನಿರೀಕ್ಷಿಸಲು ಸಾಧ್ಯವಿಲ್ಲ ಆದ್ದರಿಂದ ಸಮಾಜ ಮತ್ತು ದೇಶದ ಹಿತದೃಷ್ಟಿಯಿಂದ ಉತ್ತಮ ಅಭ್ಯಾಸ ಗಳನ್ನು ಹೊಂದುವುದು ಮುಖ್ಯ ಎಂದು ಡಿಸಿಪಿ ಮುತ್ತುರಾಜು ತಿಳಿಸಿದ್ದಾರೆ.

ಮೈಸೂರಿನ ಭಾರತ್ ಆಸ್ಪತ್ರೆ ಮತ್ತು ಆಂಕೊಲಜಿ ಸಂಸ್ಥೆ (ಬಿಎಚ್‌ಐಒ) ಅರಮನೆ ಮುಂಭಾಗದ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿ ಆಯೋಜಿಸಿದ್ದ ತಂಬಾಕು ವಿರೋಧಿ ಸೈಕ್ಲೋಥಾನ್‌ಗೆ ಚಾಲನೆ ನೀಡಿ ಮಾತನಾಡಿದ ಅವರು, ಆರೋಗ್ಯಕರ ದೇಶವನ್ನು ನಿರ್ಮಿಸಲು ನಮಗೆ ಆರೋಗ್ಯವಂತ ಜನರು ಬೇಕು, ಆದ್ದರಿಂದ ಜನರು ವಿಶೇಷವಾಗಿ ಯುವಕರು ತಂಬಾಕು ಸಂಬಂಧಿತ ಪದಾರ್ಥಗಳಿಗೆ ಆಕರ್ಷಿತರಾಗಬಾರದು. ಯುವಕರು ಆರೋಗ್ಯವಂತರಾಗಿಲ್ಲದಿದ್ದರೆ ಸಮಾಜವು ಆರೋಗ್ಯವಾಗಿರುವುದನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ಆದ್ದರಿಂದ ಸಮಾಜ ಮತ್ತು ದೇಶದ ಹಿತದೃಷ್ಟಿಯಿಂದ ಉತ್ತಮ ಅಭ್ಯಾಸ ಗಳನ್ನು ಹೊಂದುವುದು ಮುಖ್ಯವಾಗಿದೆ. ಇದು ಉತ್ತಮ ಜಾಗೃತಿ ಕಾರ್ಯಕ್ರಮವಾಗಿದೆ ಎಂದು ಹೇಳಿದರು.



ಮೈಸೂರಿನ ಭಾರತ್ ಆಸ್ಪತ್ರೆ ಮತ್ತು ಆಂಕೊಲಜಿ ಸಂಸ್ಥೆ (ಬಿಎಚ್‌ಐಒ) ಆಯೋಜಿಸಿದ್ದ ತಂಬಾಕು ವಿರೋಧಿ ಸೈಕ್ಲೋಥಾನ್‌ಗೆ ಡಿಸಿಪಿ ಮುತ್ತುರಾಜ್ ಮತ್ತು ಶಿಲ್ಪಿ ಅರುಣ್ ಯೋಗಿರಾಜ್ ಚಾಲನೆ ನೀಡಿದರು.

ಶಿಲ್ಪಿ ಅರುಣ್ ಯೋಗಿರಾಜ್ ಮಾತನಾಡಿ, ತಂಬಾಕಿನಿಂದಾಗಿ ನಾನು ನನ್ನ ತಂದೆಯನ್ನು ಕಳೆದುಕೊಂಡಿದ್ದೇನೆ, ಆದ್ದರಿಂದ ಯುವಕರು ಸೇರಿದಂತೆ ಎಲ್ಲರೂ ಆರೋಗ್ಯಕರ ಅಭ್ಯಾಸವನ್ನು ಹೊಂದಲು ಮತ್ತು ಯಾವುದೇ ತಂಬಾಕು ಸಂಬಂಧಿತ ಉತ್ಪನ್ನಗಳಿಗೆ ಹೋಗದಂತೆ ತಿಳಿಸಿ, ನೆರೆ ಹೊರೆಯವರು ಸೇರಿದಂತೆ ಎಲ್ಲಿಗೆ ಹೋದರೂ ಜಾಗೃತಿ ಮೂಡಿಸುವಂತೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದವರಿಗೆ ಕರೆ ನೀಡಿದರು.

ಆಸ್ಪತೆಯ ಹಿರಿಯ ಸಲಹೆಗಾರ ವೈದ್ಯಕೀಯ ಆಂಕೊಲಜಿಸ್ಟ್ ಡಾ.ಕೆ.ಜಿ.ಶ್ರೀನಿವಾಸ್, ಪೀಡಿಯಾಟ್ರಿಕ್ ಆಂಕೊಲಜಿಸ್ಟ್ ಡಾ.ಸೌಮ್ಯ ಮತ್ತು ಕನ್ಸಲ್ಟೆಂಟ್ ಸರ್ಜಿಕಲ್ ಆಂಕೊಲಜಿಸ್ಟ್ ಡಾ.ವಿಜಯ್‌ಕುಮಾರ್ ತಂಬಾಕಿನ ದುಷ್ಪರಿಣಾಮಗಳು ಮತ್ತು ಅದರ ಆರೋಗ್ಯದ ಅಪಾಯಗಳ ಕುರಿತು ತಿಳಿಸಿದರು. ಈ ಸಂದರ್ಭದಲ್ಲಿ ಬಿಎಚ್‌ಐಒ ಸಿಒಒ ಗೌತಮ್ ಧರ್ಮೇಲ್ರಾ, ಡಾ.ಅಗ್ನಿಕಾ ಅಜಂತ್‌ಕುಮಾರ್, ಮಾರುಕಟ್ಟೆ ಮುಖ್ಯಸ್ಥ ಆನಂದ್, ಬಿಎಚ್‌ಐಒ ಮತ್ತು ಮೈಸೂರು ಮಠದ ವಸಂತ ಕುಮಾರ್ ಉಪಸ್ಥಿತರಿದ್ದರು.

ಸೈಕ್ಲೋಥಾನ್‌ನಲ್ಲಿ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು, ಬಿಎಚ್‌ಐಒ ಸಿಬ್ಬಂದಿ, ವಿವಿಧ ಕ್ಲಬ್‌ಗಳ ಸೈಕ್ಲಿಸ್ಟ್‌ಗಳು ಮತ್ತು ಸಾರ್ವಜನಿಕರು ಉತ್ಸಾಹದಿಂದ ಭಾಗವಹಿಸಿದ್ದರು. ಈ ವೇಳೆ ತಂಬಾಕು ವಿರೋಧಿ ಪ್ರತಿಜ್ಞಾವಿಧಿಯನ್ನು ಬೋಧಿಸಲಾಯಿತು. ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಆರಂಭವಾದ ಸೈಕ್ಲೋಥಾನ್ ಜಯಚಾಮರಾಜೇಂದ್ರ ವೃತ್ತ, ಗನ್‌ಹೌಸ್, ಕಾರ್ಪೋರೇಷನ್ ವೃತ್ತದ ಮೂಲಕ ಸಾಗಿ ಅದೇ ಮಾರ್ಗದಲ್ಲಿ ಮರಳಿ ಆರಂಭದ ಸ್ಥಳಕ್ಕೆ ಬಂದು ಸಮಾಪನಗೊಂಡಿತು.

ವಿಶ್ವಕಪ್‌ಗೆ ಮುತ್ತಿಕ್ಕಿ ಟಿ20 ಕ್ರಿಕೆಟ್‌ಗೆ ವಿದಾಯ ಹೇಳಿದ ರೋಹಿತ್, ಜಡೇಜಾ





ಬಾರ್ಬಡೋಸ್: ಐಸಿಸಿ ಟಿ20 ಕ್ರಿಕೆಟ್ ವಿಶ್ವಕಪ್ ಮುಡಿಗೇರಿಸಿಕೊಂಡ ಬೆನ್ನಲ್ಲೆ ಟೀಂ ಇಂಡಿಯಾ ನಾಯಕ ರೋಹಿತ್ ಶರ್ಮಾ, ಆಲ್‌ರೌಂಡರ್ ರವೀಂದ್ರ ಜಡೇಜಾ ಅಂತಾರಾಷ್ಟ್ರೀಯ ಟಿ20 ಕ್ರಿಕೆಟ್‌ಗೆ ವಿದಾಯ ಹೇಳಿದ್ದಾರೆ.

ವಿಶ್ವಕಪ್ ಗೆಲ್ಲುತ್ತಿದ್ದಂತೆ ನಿವೃತ್ತಿ ನಿರ್ಧಾರವನ್ನು ಕೊಹ್ಲಿ ಪ್ರಕಟ ಮಾಡಿದರೆ, ಸಂಭ್ರಮಾಚರಣೆ ಬಳಿಕ ನಡೆದ ಸುದ್ದಿಗೋಷ್ಠಿಯಲ್ಲಿ ರೋಹಿತ್ ತಮ್ಮ ನಿವೃತ್ತಿಯ ವಿಚಾರವನ್ನು ಬಹಿರಂಗಪಡಿಸಿದರು. ಈ ಕ್ಷಣಕ್ಕಾಗಿ ಹಾತೊರೆಯುತ್ತಿದ್ದೆ. ನನ್ನ ಟಿ20 ವೃತ್ತಿ ಬದುಕೀಗ ಸಂಪೂರ್ಣವಾಗಿದೆ. ಇದು ನನ್ನ ಪಾಲಿನ ಕೊನೆಯ ಟಿ20 ಪಂದ್ಯ. ಈ ಮಾದರಿಯ ಕ್ರಿಕೆಟ್‌ಗೆ ವಿದಾಯ ಘೋಷಿಸಲು ಇದಕ್ಕಿಂತ ಒಳ್ಳೆಯ ಸಮಯ ಮತ್ತೊಂದಿಲ್ಲ. ನಾನು ಪ್ರತಿಯೊಂದು ಕ್ಷಣವನ್ನು ಎಂಜಾಯ್ ಮಾಡಿದ್ದೇನೆ. ಟಿ20 ಕ್ರಿಕೆಟ್ ಮೂಲಕವೇ ಟೀಂ ಇಂಡಿಯಾಗೆ ಪಾದಾರ್ಪಣೆ ಮಾಡಿದ್ದೆ. ನಾನು ವಿಶ್ವಕಪ್ ಗೆಲ್ಲಬೇಕೆಂದುಕೊಂಡಿದ್ದೆ ಎಂದರಲ್ಲದೆ ಏಕದಿನ ಹಾಗೂ ಟೆಸ್ಟ್ ತಂಡದಲ್ಲಿ ಮುಂದುವರೆಯುವುದಾಗಿ ರೋಹಿತ್ ಶರ್ಮಾ ಸ್ಪಷ್ಟಪಡಿಸಿದ್ದಾರೆ.

37 ವರ್ಷದ ರೋಹಿತ್ ಶರ್ಮಾ, ಭಾರತಕ್ಕೆ ಐಸಿಸಿ ವಿಶ್ವಕಪ್ ಗೆದ್ದುಕೊಟ್ಟ ಮೂರನೇ ನಾಯಕ ಎನಿಸಿಕೊಂಡಿದ್ದಾರೆ. ಈ ಮೊದಲು 1983ರಲ್ಲಿ ಕಪಿಲ್ ದೇವ್(ಏಕದಿನ ವಿಶ್ವಕಪ್) ಹಾಗೂ ಎಂ.ಎಸ್ ಧೋನಿ(2007ರ ಟಿ20 ವಿಶ್ವಕಪ್ ಮತ್ತು 2011ರ ಏಕದಿನ ವಿಶ್ವಕಪ್) ಗೆದ್ದಿದ್ದರು. ರೋಹಿತ್ ಶರ್ಮಾ 2021ರಲ್ಲಿ ಪೂರ್ಣಪ್ರಮಾಣದ ಟೀಂ ಇಂಡಿಯಾ ನಾಯಕರಾಗಿ ನೇಮಕವಾಗಿದ್ದರು. ಐಸಿಸಿ ಟಿ20 ವಿಶ್ವಕಪ್ ಟೂರ್ನಿಯ ಇತಿಹಾಸದಲ್ಲಿ ಈ ಆವೃತ್ತಿಯಲ್ಲಿ ಒಂದೇ ಒಂದು ಪಂದ್ಯ ಸೋಲದೇ ವಿಶ್ವಕಪ್ ಗೆದ್ದ ನಾಯಕ ಎನ್ನುವ ಹಿರಿಮೆ ಕೂಡಾ ರೋಹಿತ್ ಶರ್ಮಾ ಪಾಲಾಗಿದೆ.

125 ಕೋಟಿ ರೂ. ಬಹುಮಾನ...!

ಐಸಿಸಿ ಟಿ20 ವಿಶ್ವಕಪ್ ಟ್ರೋಫಿ ಗೆದ್ದು ಇತಿಹಾಸ ಬರೆದ ಟೀಂ ಇಂಡಿಯಾಗೆ ಬಿಸಿಸಿಐ ಭರ್ಜರಿ ಬಹುಮಾನ ಘೋಷಿಸಿದೆ. ಟ್ರೋಫಿ ಗೆದ್ದ ಟೀಂ ಇಂಡಿಯಾ ಐಸಿಸಿ ಕಡೆಯಿಂದ 20 ಕೋಟಿ ರೂ.ಬಹುಮಾನ ಪಡೆದಿದೆ. ಇದೀಗ ಟ್ರೋಫಿ ಗೆಲುವಿನ ಸಂಭ್ರಮದಲ್ಲಿ ಬಿಸಿಸಿಐ ಟೀಂ ಇಂಡಿಯಾಗೆ ಬರೋಬ್ಬರಿ 125 ಕೋಟಿ ರೂ. ಬಹುಮಾನ ಘೋಷಿಸಿದೆ. ಈ ಕುರಿತು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಘೋಷಣೆ ಮಾಡಿದ್ದಾರೆ.

ಆಲ್‌ರೌಂಡರ್ ರವೀಂದ್ರ ಜಡೇಜಾ ಗುಡ್ ಬೈ: ವಿರಾಟ್ ಕೊಹ್ಲಿ, ರೋಹಿತ್ ಶರ್ಮಾ ಟಿ20 ಕ್ರಿಕೆಟ್‌ಗೆ ವಿದಾಯ ಹೇಳಿದ ಬೆನ್ನಲ್ಲೆ ಆಲ್‌ರೌಂಡರ್ ರವೀಂದ್ರ ಜಡೇಜಾ ಅಂತಾರಾಷ್ಟ್ರೀಯ ಟಿ20 ಕ್ರಿಕೆಟ್‌ಗೆ ಗುಡ್ ಬೈ ಹೇಳಿದ್ದಾರೆ.

ಸಾಮಾಜಿಕ ತಾಜತಾಣದ ಮೂಲಕ ತಮ್ಮ ವಿದಾಯ ತಿಳಿಸಿರುವ ಜಡೇಜಾ, ಹೃದಯ ತುಂಬಿದ ಕೃತಜ್ಞತೆಯೊಂದಿಗೆ ಟಿ20 ಅಂತಾರಾಷ್ಟ್ರೀಯ ಪಂದ್ಯಕ್ಕೆ ವಿರಾಮ ಹೇಳುತ್ತಿದ್ದೇನೆ. ನಾನು ಪ್ರತಿ ಬಾರಿ ದೇಶಕ್ಕಾಗಿ ಅತ್ಯುತ್ತಮ ಕೊಡುಗೆ ನೀಡಲು ಪ್ರಯತ್ನಿಸಿದ್ದೇನೆ. ಹೆಮ್ಮೆಯಿಂದ, ಓಡುವ ಕುದುರೆಯಂತೆ ಮೈದಾನದಲ್ಲಿ ಅಷ್ಟೇ ಹೆಮ್ಮೆಯಿಂದ ದೇಶಕ್ಕಾಗಿ ಆಡಿದ್ದೇನೆ. ಟಿ20 ವಿಶ್ವಕಪ್ ಗೆಲ್ಲುವುದು ನನ್ನ ಕನಸಾಗಿತ್ತು. ನನ್ನ ಅಂತಾರಾಷ್ಟ್ರೀಯ ಕರಿಯರ್‌ನ ಉತ್ತುಂಗದ ಕ್ಷಣ ಇದಾಗಿದೆ. ಪ್ರತಿ ಬಾರಿ ನನ್ನನ್ನು ಬೆಂಬಲಿಸಿದ ಎಲ್ಲರಿಗೂ ಧನ್ಯವಾದಗಳು ಎಂದಿರುವ ರವೀಂದ್ರ ಜಡೇಜಾ, ಏಕದಿನ, ಟೆಸ್ಟ್ ಕ್ರಿಕೆಟ್ ಹಾಗೂ ಐಪಿಎಲ್‌ನಲ್ಲಿ ಮುಂದುವರಿಯಲಿದ್ದಾರೆ.

ಮೋದಿ ಮನ್ ಕಿ ಬಾತ್ ಪುನರಾರಂಭ


ಬೆಂಗಳೂರಿನ ಕಬ್ಬನ್ ಪಾರ್ಕ್‌ನಲ್ಲಿ 'ಸಂಸ್ಕೃತ ವಾರ' ಹೆಸರಲ್ಲಿ ಜನರು ಸಂಸ್ಕೃತದಲ್ಲಿ ಮಾತನಾಡುತ್ತಾರೆ

● ಎನ್‌ಡಿಎ ಸರ್ಕಾರವನ್ನು ಮತ್ತೆ ಆಯ್ಕೆ ಮಾಡಿದ್ದಕ್ಕೆ ಮತದಾರರಿಗೆ ಧನ್ಯವಾದ ● ಕ್ರೀಡಾಪಟುಗಳಿಗೆ ಚೀರ್ 4 ಭಾರತ್' ಹ್ಯಾಶ್‌ಟ್ಯಾಗ್ ಮೂಲಕ ಉತ್ತೇಜನ ನೀಡಬೇಕು ● 'ಅಮ್ಮನ ಹೆಸರಿನಲ್ಲಿ ಒಂದು ಗಿಡ' ವಿಶೇಷ ಅಭಿಯಾನ ಆರಂಭವಾಗಿದೆ.

ಹೊಸದಿಲ್ಲಿ, ಜೂ.30– ಎನ್‌ಡಿಎ ಸರ್ಕಾರವನ್ನು ಮತ್ತೆ ಆಯ್ಕೆ ಮಾಡಿರುವುದಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಮತದಾರಿಗೆ ಧನ್ಯವಾದ ಸಲ್ಲಿಸಿದರು. ಸಂವಿಧಾನದ ಮೇಲಿನ ಅಚಲ ನಂಬಿಕೆಗಾಗಿ ಮತದಾರರನ್ನು ಅವರು ಶ್ಲಾಘಿಸಿದ್ದಾರೆ.

ಮೂರನೇ ಅವಧಿಗೆ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ ತಮ್ಮ ಮೊದಲ 'ಮನ್ ಕಿ ಬಾತ್' ಮಾಸಿಕ ರೇಡಿಯೋ ಭಾಷಣ ಮಾಡಿದ ನರೇಂದ್ರ ಮೋದಿ, ಜನರು ಸಂವಿಧಾನ ಹಾಗೂ ಚುನಾವಣೆಯಲ್ಲಿನ ಪ್ರಜಾಪ್ರಭುತ್ವ ಪ್ರಕ್ರಿಯೆಗಳ ಮೇಲಿನ ತಮ್ಮ ಗಟ್ಟಿಯಾದ ನಂಬಿಕೆಯನ್ನು ಮರು ಪ್ರತಿಪಾದಿಸಿದ್ದಾರೆ ಎಂದು ಹೇಳಿದರು.

ನಮ್ಮ ಸಂವಿಧಾನ ಹಾಗೂ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿನ ದೃಢ ನಂಬಿಕೆಯನ್ನು ಮರು ಉಚ್ಚರಿಸಿರುವ ದೇಶದ ಜನತೆಗೆ ನಾನು ಧನ್ಯವಾದ ಸಲ್ಲಿಸುತ್ತೇನೆ. ಲೋಕಸಭೆ ಚುನಾವಣೆ 2024 ಜಗತ್ತಿನಲ್ಲಿಯೇ ಅತಿ ದೊಡ್ಡ ಚುನಾವಣೆ. ಶೇ 65ರಷ್ಟು ಜನರು ಮತ ಚಲಾಯಿಸುವಂತಹ ಇಷ್ಟು ದೊಡ್ಡ ಚುನಾವಣೆಯು ಜಗತ್ತಿನ ಯಾವ ದೇಶದಲ್ಲಿಯೂ ಎಂದಿಗೂ ನಡೆದಿರಲಿಲ್ಲ" ಎಂದು ಪ್ರಧಾನಿ ತಿಳಿಸಿದರು.



ಫೆಬ್ರವರಿ 25ರಂದು ಮೋದಿ ಅವರು ತಮ್ಮ ಕೊನೆಯ ಮನ್ ಕಿ ಬಾತ್ ಭಾಷಣ ಮಾಡಿದ್ದರು. ಬಳಿಕ ಚುನಾವಣಾ ನೀತಿ ಸಂಹಿತೆ ಜಾರಿಗೆ ಬಂದಿದ್ದರಿಂದ ಕಳೆದ ಮೂರು ತಿಂಗಳಿನಿಂದ ಕಾರ್ಯಕ್ರಮ ನಡೆದಿರಲಿಲ್ಲ. ಹೀಗಾಗಿ ಜನರ ಜತೆಗಿನ ಸಂವಹವನ್ನು ಮಿಸ್ ಮಾಡಿಕೊಂಡಿದ್ದಾಗಿ ಅವರು ಹೇಳಿದರು

ಆಕಾಶವಾಣಿಯ ಸಂಸ್ಕೃತ ಸುದ್ದಿಯು ಇಂದಿಗೆ 50 ವರ್ಷ ಪೂರೈಸಿದೆ. ಇದು ಅನೇಕ ಜನರನ್ನು ಸಂಸ್ಕೃತದ ಜತೆ ಬೆರೆಸಿದೆ. ಬೆಂಗಳೂರಿನಲ್ಲಿ ಪಾರ್ಕ್ ಒಂದಿದೆ ಅದು ಕಬ್ಬನ್ ಪಾರ್ಕ್. ಇಲ್ಲಿ ಜನರು ಪಾರ್ಕ್‌ನಲ್ಲಿ ಹೊಸ ಸಂಪ್ರದಾಯ ಆರಂಭಿಸಿದ್ದಾರೆ. ದಿನದಲ್ಲಿ ಒಂದು ದಿನ, ಪ್ರತಿ ಭಾನುವಾರ ಯುವಜನರು ಮತ್ತು ವಯಸ್ಕರು ಸಂಸ್ಕೃತದಲ್ಲಿ ಮಾತನಾಡುತ್ತಿದ್ದಾರೆ. ಇಷ್ಟೇ ಅಲ್ಲದೆ, ಇಲ್ಲಿ ಅನೇಕ ಸಂಸ್ಕೃತ ಸಂವಾದಗಳನ್ನು ನಡೆಸಲಾಗಿದೆ. ಇದಕ್ಕೆ 'ಸಂಸ್ಕೃತ ವಾರಾಂತ್ಯ' ಎಂದು ಹೆಸರಿಸಲಾಗಿದೆ.

ಮುಂಬರುವ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಭಾರತದ ಕ್ರೀಡಾಪಟುಗಳಿಂದ ಅದ್ಭುತ ಪ್ರದರ್ಶನ ನಿರೀಕ್ಷಿಸಲಾಗಿದ್ದು, ಜನರು 'ಚೀರ್ 4 ಭಾರತ್' ಹ್ಯಾಶ್‌ಟ್ಯಾಗ್ ಮೂಲಕ ಅವರಿಗೆ ಉತ್ತೇಜನ ನೀಡಬೇಕು.

ವಿಶ್ವ ಪರಿಸರ ದಿನದ ಅಂಗವಾಗಿ ಈ ವರ್ಷ 'ಅಮ್ಮನ ಹೆಸರಿನಲ್ಲಿ ಒಂದು ಗಿಡ' ವಿಶೇಷ ಅಭಿಯಾನ ಆರಂಭವಾಗಿದೆ. ನಾನು ಕೂಡ ನನ್ನ ತಾಯಿಯ ಹೆಸರಿನಲ್ಲಿ ಒಂದು ಗಿಡ ನೆಟ್ಟಿದ್ದೇನೆ. ದೇಶದ ಪ್ರತಿಯೊಬ್ಬರೂ ತಾಯಿ ಜತೆಗೆ ಅಥವಾ ಆಕೆಯ ಹೆಸರಿನಲ್ಲಿ ಗಿಡಗಳನ್ನು ನೆಡುವಂತೆ ಕೋರುತ್ತೇನೆ.

ಭಾರತದ ಅನೇಕ ಉತ್ಪನ್ನಗಳಿಗೆ ಜಗತ್ತಿನಾದ್ಯಂತ ಭಾರಿ ಬೇಡಿಕೆ ಇದೆ. ಭಾರತದ ಸ್ಥಳೀಯ ಉತ್ಪನ್ನಗಳು ಜಾಗತಿಕ ಮಾರುಕಟ್ಟೆಗೆ ಹೋಗುವುದನ್ನು ಕಂಡಾಗ ನಮಗೆ ಹೆಮ್ಮೆಯಾಗುವುದು ಸಹಜ. ಅವುಗಳಲ್ಲಿ ಆಂಧ್ರ ಪ್ರದೇಶದ ಅರಕು ಕಾಫಿ ಕೂಡ ಒಂದು.

ಕೇರಳದ ಅಟ್ಟಪ್ಪಾಡಿಯಲ್ಲಿ 'ಕಾರ್ತುಂಬಿ ಛತ್ರಿಗಳು' ಎಂಬ ವಿಶೇಷ ಕೊಡುಗೆಗಳನ್ನು ತಯಾರಿಸಲಾಗುತ್ತಿದೆ. ಕೇರಳದ ನಮ್ಮ ಆದಿವಾಸಿ ಸಹೋದರಿಯರು ಇದನ್ನು ತಯಾರಿಸುತ್ತಿದ್ದಾರೆ. ಈ ಕೊಡೆಗಳಿಗೆ ದೇಶಾದ್ಯಂತ ಬೇಡಿಕೆ ಹೆಚ್ಚುತ್ತಿದೆ. ಇವುಗಳನ್ನು ಆನ್‌ಲೈನ್‌ನಲ್ಲಿ ಸಹ ಮಾರಲಾಗುತ್ತಿದೆ.

ಇಂದಿನಿಂದ ಮನ್ ಕಿ ಬಾತ್ ಸಮಾಜದಲ್ಲಿ ಬದಲಾವಣೆ ತಂದ ಹಾಗೂ ತಮ್ಮ ಕೆಲಸದ ಮೂಲಕ ದೇಶದಲ್ಲಿ ಬದಲಾವಣೆ ತಂದ ವ್ಯಕ್ತಿಗಳ ಬಗ್ಗೆ ಮಾತನಾಡುತ್ತೇನೆ. ನಮ್ಮ ಶ್ರೀಮಂತ ಸಂಸ್ಕೃತಿ, ಅಪೂರ್ವ ಇತಿಹಾಸ ಹಾಗೂ ಭಾರತವನ್ನು ಅಭಿವೃದ್ಧಿಪಡಿಸುವ ಪ್ರಯತ್ನಗಳ ಬಗ್ಗೆ ನಾವು ಚರ್ಚಿಸುತ್ತೇವೆ ಎಂದು ಮೋದಿ ಹೇಳಿದರು.